# ದೂರಶಿಕ್ಷಣ ನಿರ್ದೇಶನಾಲಯ

# ವಿವರಣಾ ಪುಸ್ತಕ
# PROSPECTUS

## ೨೦೧೩ – ೨೦೧೪

**ಕನ್ನಡ ವಿಶ್ವವಿದ್ಯಾಲಯ,** ಹಂಪಿ
ವಿದ್ಯಾರಣ್ಯ ೫೮೩ ೨೭೬
ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
www.kannadauniversity.org

**ದೂರಶಿಕ್ಷಣ ನಿರ್ದೇಶನಾಲಯ**
ವಿವರಣಾ ಪುಸ್ತಕ ೨೦೧೩–೧೪

**ಪ್ರಕಟಣೆ**
ನಿರ್ದೇಶಕರು
ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

**©ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೩**

**ಪುಟಗಳು:** ೩+೪೮

**ಅಕ್ಷರ ಜೋಡಣೆ**
ಬಸವರಾಜ ಹೆಚ್ ಬಿ
ದೂರಶಿಕ್ಷಣ ನಿರ್ದೇಶನಾಲಯ

**ಮುಖಪುಟ ವಿನ್ಯಾಸ ಮತ್ತು ಮುದ್ರಣ**
ಯಶಸ್ವಿ ಪ್ರಿಂಟ್ ಆ್ಯಡ್ಸ್, ಬೆಂಗಳೂರು



**ಡಾ ಹಿ ಚಿ ಬೋರಲಿಂಗಯ್ಯ**
ಕುಲಪತಿ

# ಕುಲಪತಿಗಳ ಮಾತು

ಕನ್ನಡ ವಿಶ್ವವಿದ್ಯಾಲಯವು ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡುಕುವ ಗಟ್ಟಿಗೊಳಿಸುವ ಹರಡುವ ಕಾಯಕವನ್ನು ೧೯೯೧ ರಿಂದ ಅವಿರತವಾಗಿ ನಡೆಸಿಕೊಂಡು ಬಂದಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಮಹತ್ವದ ಕಾರ್ಯನಿರ್ವಹಿಸಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳ ಆಚೆಯ ಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸುವ ಮಹತ್ವದ ಸಾಹಸದ ಹೆಜ್ಜೆಗಳು ಮೂಡಿಬಂದಿವೆ. ಇದು ನಿರಂತರ ನಡೆಯಬೇಕಾದ ಬಹುದಾರಿಗಳ ಮಹಾಯಾನ.

ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕದ ಒಳಗೆ ಮತ್ತು ಹೊರಗೆ, ಕನ್ನಡಿಗರ ಮನದ ಆಲಯಗಳಲ್ಲಿ ಮನೆಮಾಡಬೇಕಾದ ಒಂದು ಬಯಲು. ಹಾಗಾಗಿ ಇದರ ಭೌತಿಕ ವ್ಯಾಪ್ತಿ ಮತ್ತು ಬೌದ್ಧಿಕ ಹರವು ಸೀಮಾತೀತ. ಕನ್ನಡ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದ ಬಹು ಬಗೆಯ ಜ್ಞಾನಗಳನ್ನು ವಿಶ್ವದೆಲ್ಲೆಡೆ ಇರುವ ಕನ್ನಡಿಗರು ಪಡೆಯಲು ಸಾಧ್ಯವಾಗುವಂತೆ ಕನ್ನಡ ವಿಶ್ವವಿದ್ಯಾಲಯದಲ್ಲಿ ದೂರಶಿಕ್ಷಣದ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ. ಒಂದರ್ಥದಲ್ಲಿ ಇಂದು ದೂರಶಿಕ್ಷಣ ಎನ್ನುವುದು ಒಂದು ಅಸಂಗತ ಪರಿಭಾಷೆ. ಆಧುನಿಕ ಮಾಧ್ಯಮಗಳ ಮೂಲಕ ತಾವು ಇರುವಲ್ಲಿಗೆ ಜ್ಞಾನದ ಹೊಳೆಗಳನ್ನು ಹರಿಸುವ ಈ ಶಿಕ್ಷಣಕ್ರಮ ಸಮೀಪ ಶಿಕ್ಷಣವೇ ಆಗಿದೆ. ಭೌತಿಕವಾಗಿ ದೂರ ಇರುವವರನ್ನು ಹತ್ತಿರಕ್ಕೆ ಸೆಳೆದುಕೊಳ್ಳುವ ಮತ್ತು ಅವರನ್ನು ಕನ್ನಡ ವಿಶ್ವವಿದ್ಯಾಲಯದ ವಿಶ್ವ ಕುಟುಂಬಕ್ಕೆ ಸೇರಿಸಿಕೊಳ್ಳುವ ಅಭಿಯಾನದ ಭಾಗವಾಗಿ ಇಂಥ ಕಾರ್ಯಕ್ರಮಗಳು ನಡೆಯುತ್ತಿವೆ. ಇಲ್ಲಿ ಕೇವಲ ಜ್ಞಾನಾಕಾಂಕ್ಷಿಗಳಿಗೆ ಪಾಠಗಳನ್ನು ಒದಗಿಸುವ ಕೆಲಸವನ್ನಷ್ಟೆ ಮಾಡದೆ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಹತ್ತಿರವಾಗಿ ಅದರ ಒಂದು ಸಾವಯವ ಭಾಗವಾಗಿ ನಿರಂತರ ಸಂಪರ್ಕ ಸಹಯೋಗಗಳನ್ನು ನಡೆಸಲು ಸಾಧ್ಯವಾಗುವುದಕ್ಕೆ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಾಂಪ್ರದಾಯಿಕ ಅಧ್ಯಯನ ವಿಷಯಗಳನ್ನು ಮೀರಿ ಹೊಸ ಹೊಸ ಜ್ಞಾನಶಿಸ್ತುಗಳ ಕಡೆಗೆ ಕನ್ನಡಿಗರನ್ನು ಕೊಂಡೊಯ್ಯುವ ಪ್ರಯತ್ನ ನಮ್ಮ ದೂರಶಿಕ್ಷಣ ಯೋಜನೆಯಲ್ಲಿದೆ.

ಈ ಕಾರಣದಿಂದ ಪುರಾತತ್ವ ಸಂಸ್ಕೃತಿ ಮತ್ತು ಪವಾಸೋದ್ಯಮ, ಮಹಿಳಾ ಅಧ್ಯಯನ, ಆಡಳಿತ ಕನ್ನಡ, ಪತ್ರಿಕೋದ್ಯಮ ಅಧ್ಯಯನ, ನಾಟಕ ಕಲೆ, ಕನ್ನಡ ಸಾಹಿತ್ಯ, ಶಾಸನಶಾಸ್ತ್ರ ಅಧ್ಯಯನ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಭಾಷಾಂತರ ಅಧ್ಯಯನ ಎಂಬ ವಿಷಯಗಳಲ್ಲಿ ಒಂದು ವರ್ಷದ ಡಿಪ್ಲೊಮ ಮತ್ತು ಸ್ನಾತಕೋತ್ತರ ಡಿಪ್ಲೊಮ ಕಾರ್ಯಕ್ರಮಗಳು ಅಲ್ಲದೆ ಕನ್ನಡ, ಚರಿತ್ರೆ, ಪತ್ರಿಕೋದ್ಯಮ ಮತ್ತು ಮಾಧ್ಯಮ ಅಧ್ಯಯನ ಹಾಗೂ ಸಮಾಜಶಾಸ್ತ್ರ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳನ್ನು ದೂರಶಿಕ್ಷಣದ ಮೂಲಕ ಆರಂಭಿಸಿದೆ.

ಮುಂದಿನ ದಿನಗಳಲ್ಲಿ ಕನ್ನಡ ವಿಶ್ವವಿದ್ಯಾಲಯವು ಜಾಗತಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ದೂರದ ನಾಡುಗಳಿಗೆ ಪರಸ್ಪರ ಸಂಬಂಧವನ್ನು ಬೆಳೆಸುವ ಯೋಜನೆಗಳನ್ನು ರೂಪಿಸುತ್ತಿದೆ. ಹೊರನಾಡು ಮತ್ತು ಹೊರದೇಶಗಳಲ್ಲಿ ಕನ್ನಡ ಸಂಬಂಧಿ ತಿಳುವಳಿಕೆಗಳನ್ನು ಪಡೆಯ ಬಯಸುವವರಿಗಾಗಿ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ.

'ಎಲ್ಲಾದರು ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು' ಎನ್ನುವ ಕುವೆಂಪು ವಾಣಿಯ ಆದರ್ಶವನ್ನು ಕನ್ನಡ ವಿಶ್ವವಿದ್ಯಾಲಯವು ಈ ದೂರಶಿಕ್ಷಣ ಕಾರ್ಯಕ್ರಮಗಳ ಅಂತರ ಜೋಡಣೆಯ ಮೂಲಕ ನನಸು ಮಾಡಲು ಬದ್ಧವಾಗಿದೆ. ಇದಕ್ಕೆ ಎಲ್ಲ ಕನ್ನಡಿಗರ ಸಹಕಾರ ಮತ್ತು ಪ್ರೋತ್ಸಾಹವನ್ನು ಕೋರುತ್ತೇವೆ.



**ಡಾ ವಿಜಯ್ ಪೂಣಚ್ಚ ತಂಬಂಡ**
ಕುಲಸಚಿವರು

# ಕುಲಸಚಿವರ ಮಾತು

ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯ ಹೈದರಾಬಾದ್ ಕರ್ನಾಟಕದಲ್ಲಿ ತನ್ನ ಪ್ರಭಾವವನ್ನು ಉಳಿಸಿ ಕೊಂಡಿದ್ದರೆ ಅದಕ್ಕೆ ಅದರ ಅನನ್ಯತೆ ಮಾತ್ರ ಕಾರಣವಲ್ಲ. ಶೈಕ್ಷಣಿಕವಾಗಿ ಅದು ಇಟ್ಟ ಹೆಜ್ಜೆಯೂ ಮುಖ್ಯ ಕಾರಣವಾಗಿದೆ. ಕನ್ನಡ ವಿಶ್ವವಿದ್ಯಾಲಯದ ಆರಂಭದ ದಿನದಿಂದಲೂ ಮನನ ಮಾಡಿಕೊಂಡ ಒಂದು ಆದರ್ಶ ಏನೆಂದರೆ ವಿಶ್ವವಿದ್ಯಾಲಯವು ಕೇವಲ ಜ್ಞಾನವನ್ನು ಉತ್ಪಾದಿಸುವ ಉದ್ದೇಶವನ್ನು ಹೊಂದಿಲ್ಲ, ಅದು ಜ್ಞಾನದ ಪ್ರಸರಣವನ್ನೂ ಮಾಡುವುದು ಎಂಬುವುದು. ದೂರಶಿಕ್ಷಣ ನಿರ್ದೇಶನಾಲಯದಿಂದ ಬಂದ ಬಹುತೇಕ ಪಠ್ಯಗಳು ಹಾಗೂ ಅದರಲ್ಲಿರುವ ಬರಹಗಳು ನಮ್ಮ ವಿಶ್ವವಿದ್ಯಾಲಯದ ಅಧ್ಯಾಪಕರ ಕೊಡುಗೆ ಎಂದರೆ ಅತಿಶಯೋಕ್ತಿ ಅಲ್ಲ. ಆರ್ಥಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕದಲ್ಲಿ ಇಂದು ನಮ್ಮ ವಿದ್ಯಾರ್ಥಿಗಳು ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿನ ಪಠ್ಯ ವಸ್ತುವನ್ನು ಓದುತ್ತಿದ್ದಾರೆ. ಈಗಾಗಲೇ ಸಾವಿರಾರು ಮಂದಿ ಈ ಪಠ್ಯಗಳನ್ನು ಓದಿ ಪದವೀಧರರಾಗಿದ್ದಾರೆ. ಅವರಲ್ಲಿ ಅನೇಕರು ಸರ್ಕಾರದ/ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿದ್ದಾರೆ ಎನ್ನುವುದೇ ನಮಗೆ ಹೆಮ್ಮೆ ತರುವ ವಿಷಯವಾಗಿದೆ.

ಆರ್ಥಿಕ ಅಸಮತೋಲನದಿಂದಾಗಿ ಸಾಮಾಜಿಕ ಅಸಮತೋಲನವು ಈ ಭಾಗದಲ್ಲಿ ಸ್ಪಷ್ಟವಾಗಿ ಗೋಚರಿಸಿರುವುದನ್ನು ನಮ್ಮ ಬಹುತೇಕ ವಿದ್ವಾಂಸರು ಕಂಡುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಪಠ್ಯಗಳು ರೂಪುಗೊಂಡಿವೆ. ಆ ಮೂಲಕ ಶೈಕ್ಷಣಿಕವಾಗಿ ಜಾಗ್ರತೆಯನ್ನು ಉಂಟುಮಾಡಬೇಕೆಂಬುದು ನಮ್ಮ ಆಶಯ. ಸಾಂಸ್ಕೃತಿಕವಾಗಿ ಬಹಳ ಶ್ರೇಷ್ಠವಾಗಿರುವ ಉತ್ತರ ಕರ್ನಾಟಕದ ಅದರಲ್ಲಿಯೂ ಈ ಭೂಭಾಗದ ಹಿರಿಮೆ ನಮ್ಮೆಲ್ಲರ ಆತ್ಮವಿಶ್ವಾಸವನ್ನು ಹೆಚ್ಚಿಸಿರುವುದರಲ್ಲಿ ಎರಡು ಮಾತಿಲ್ಲ. ಬ್ರಿಟಿಷ್/ನಿಜಾಮ್ ಕಾಲದ ಪೂರ್ವದಲ್ಲಿ ಈ ಭಾಗಗಳಲ್ಲಿ ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ಅದರಲ್ಲೂ ವಾಸ್ತುಶಿಲ್ಪ, ನಗರ ನಿರ್ಮಾಣ ಮುಂತಾದ ಕ್ಷೇತ್ರಗಳಲ್ಲಿ ಅದ್ಭುತವನ್ನೇ ಸೃಷ್ಟಿಸಿದ ಪರಂಪರೆಯ ಬಗ್ಗೆ ವಿಶೇಷವಾಗಿ ನಾವು ಒತ್ತುಕೊಟ್ಟಿದ್ದೇವೆ. ಹಾಗೆಯೇ ಕರ್ನಾಟಕದ ಉದ್ದಗಲದಲ್ಲಿ ಕಂಡುಬರುವ ಸಾಂಸ್ಕೃತಿಕ ವಿನ್ಯಾಸಗಳನ್ನು ಪರಿಚಯಮಾಡಿಕೊಳ್ಳಲು ಇಲ್ಲಿ ಪ್ರಯತ್ನಿಸಿದ್ದೇವೆ. ಉಳಿದ ದೂರಶಿಕ್ಷಣ ಕೇಂದ್ರಗಳಿಗೂ ನಮ್ಮ ದೂರಶಿಕ್ಷಣ ಕೇಂದ್ರಕ್ಕೂ ಇರುವ ಅಗಾಧವಾದ ವ್ಯತ್ಯಾಸ ಇದೆ. ಕನ್ನಡದಲ್ಲಿಯೇ ಜ್ಞಾನಶಾಖೆಯ ವಿವಿಧ ಮಗ್ಗುಲುಗಳನ್ನು ಪ್ರಭಾವಿಯಾಗಿ ಪರಿಚಯಿಸಿ, ಆ ಪರಂಪರೆಯ ಭಾಗವಾಗುವಂತೆ ಇಟ್ಟುಕೊಂಡ ಒತ್ತಾಸೆ ಇಂದು ನನಸಾಗಿದೆ ಎಂಬುದು ಸಂತಸದ ವಿಷಯ.

ಅನೇಕ ಇತಿಮಿತಿಗಳ ನಡುವೆಯೂ ನಾವು ನಮ್ಮ ವಿಶ್ವವಿದ್ಯಾಲಯವನ್ನು ಕಟ್ಟುತ್ತಿದ್ದೇವೆ. ದೂರಶಿಕ್ಷಣ ನಿರ್ದೇಶನಾಲಯಕ್ಕೆ ಬರುವ ಸಾವಿರಾರು ವಿದ್ಯಾರ್ಥಿಗಳು ಕರ್ನಾಟಕದ ಹೆಮ್ಮೆ ಎಂದೇ ಭಾವಿಸುವ ನಾವು ವಿದ್ಯಾರ್ಥಿಗಳ ವಿಕಾಸಕ್ಕಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು

ರೂಪಿಸಿದ್ದೇವೆ. ಅವುಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುವಲ್ಲಿ ನಮ್ಮ ವಿಶ್ವವಿದ್ಯಾಲಯವು ಅವಿರತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡುವ ಗುರುತರ ಜವಾಬ್ದಾರಿಯೊಂದಿಗೆ ವಿಶ್ವವಿದ್ಯಾಲಯದ ಜ್ಞಾನಪ್ರಸಾರವು ಮನೆ ಮನೆಗೂ ಮುಟ್ಟಲು ಪ್ರತಿಯೊಬ್ಬರ ಸಹಕಾರ ಅಗತ್ಯ ಎಂದು ನಾವು ಭಾವಿಸಿದ್ದೇವೆ. ವಿಶ್ವವಿದ್ಯಾಲಯದಲ್ಲಿ ನೇರವಾಗಿ ಬಂದು ವಿದ್ಯಾಭ್ಯಾಸ ಮಾಡಲು ಅನಾನುಕೂಲವಿರುವ ಸಾವಿರಾರು ವಿದ್ಯಾರ್ಥಿಗಳಿಗೆ ನಮ್ಮ ದೂರಶಿಕ್ಷಣ ನಿರ್ದೇಶನಾಲಯವು ಆಸರೆಯಾಗುತ್ತದೆ. ಅದಕ್ಕೆ ನಾವೆಲ್ಲ ಕಟಿಬದ್ಧರಾಗಿದ್ದೇವೆ. ವಿಶ್ವವಿದ್ಯಾಲಯದ ಹಲವು ಯೋಜನೆಗಳ ನೆರವನ್ನು ಎಲ್ಲರೂ ಪಡೆಯುವಂತಾಗಲಿ ಎಂಬುವುದೇ ನನ್ನ ಆಶಯ.



**ಡಾ ವಿರೂಪಾಕ್ಷಿ ಪೂಜಾರಹಳ್ಳಿ**
ನಿರ್ದೇಶಕರು

# ಪ್ರಸ್ತಾವನೆ

ಕನ್ನಡ ವಿಶ್ವವಿದ್ಯಾಲಯವು ವಿದ್ಯೆಯನ್ನು ನಿರ್ಮಿಸುವ ಮತ್ತು ಅದನ್ನು ಸಮಗ್ರ ನೆಲೆಯಿಂದ ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆ. ಹೊಸ ತಿಳಿವಳಿಕೆಗಳ ಪರಿಜ್ಞಾನಕ್ಕೆ ವಿವೇಕಯುತವಾದ ಹಲವಾರು ನಿಟ್ಟಿನ ದಾರಿಗಳು ನಮ್ಮ ಮುಂದಿವೆ. ಈ ಹಿನ್ನೆಲೆಯಲ್ಲಿ ನಮ್ಮ ವಿಶಿಷ್ಟ ಸಂಶೋಧನಾತ್ಮಕ ಅರಿವನ್ನು ಎಲ್ಲರಿಗೂ ತಲುಪಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ ಕರ್ನಾಟಕ ಮತ್ತು ಕನ್ನಡ ಸಂಸ್ಕೃತಿಯ (ನಾಡು, ನುಡಿ) ಬಗ್ಗೆ ಸಂಶೋಧನೆ, ವಿಮರ್ಶೆ ಮತ್ತು ಪ್ರಸಾರ.

ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಅಧ್ಯಯನಾಸಕ್ತರಿಗೆ ದೂರಶಿಕ್ಷಣ ಕಾರ್ಯಕ್ರಮಗಳ ಮೂಲಕ ಜ್ಞಾನಪ್ರಸಾರ ಮಾಡುವ ಮಹತ್ವದ ಯೋಜನೆಯನ್ನು ೨೫.೦೮.೨೦೦೧ ರಿಂದಲೂ ನಡೆಸಿಕೊಂಡು ಬರುತ್ತಲಿದೆ.

ದೂರಶಿಕ್ಷಣದ ಮೂಲಕ ವ್ಯಕ್ತಿಯ ಜ್ಞಾನ, ಪ್ರತಿಭೆ ಹಾಗೂ ಪ್ರವೃತ್ತಿಗಳನ್ನು ಹೆಚ್ಚಿಸುವ ಕಾರ್ಯವನ್ನು ಗಂಭೀರವಾಗಿ ನಿರ್ವಹಿಸಲಾಗುತ್ತಿದೆ. ಅದಕ್ಕಾಗಿ ಹಂತಹಂತವಾಗಿ ಉನ್ನತ ಶಿಕ್ಷಣವನ್ನು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ರೂಪಿಸಲಾಗುತ್ತಿದೆ. ಇಂತಹ ಶಿಕ್ಷಣದಲ್ಲಿ ಸಾಮಾನ್ಯವಾಗಿ ಪುಸ್ತಕದ ಜ್ಞಾನವು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಪರಸ್ಪರ ಮುಖಾಮುಖಿ ಆಗುವುದರ ಮೂಲಕ ಪ್ರಸಾರವಾಗುತ್ತಿರುತ್ತದೆ. ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಮುಖಾಮುಖಿಯಾಗಿ ಪರಸ್ಪರ ಕೇಳಿ ಅರಿತುಕೊಳ್ಳುವ ಶಿಕ್ಷಣ ವ್ಯವಸ್ಥೆಯಲ್ಲಿಯೇ ಅನೇಕ ಕಾರಣಗಳಿಂದ ಈ ವ್ಯಾಪ್ತಿಗೆ ಒಳಪಡದ ವಿದ್ಯಾರ್ಥಿಗಳಿಗಾಗಿ ದೂರಶಿಕ್ಷಣವನ್ನು ನೂರಾರು ವರ್ಷಗಳ ಹಿಂದೆ ಪಾಶ್ಚಾತ್ಯ ದೇಶಗಳಲ್ಲಿ ಆರಂಭಿಸಲಾಯಿತು. ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶದಲ್ಲಿಯೂ ಅನೇಕ ವಿಶ್ವವಿದ್ಯಾಲಯಗಳು ದೂರಶಿಕ್ಷಣದ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಂಡು ಜ್ಞಾನಪ್ರಸಾರದಲ್ಲಿ ತೊಡಗಿವೆ.

ಆಧುನಿಕ ದಿನಗಳಲ್ಲಿ ಜ್ಞಾನವನ್ನು ಸಂಪಾದಿಸಲು ಅನೇಕ ದಾರಿಗಳಿವೆ. ವಿಶ್ವವಿದ್ಯಾಲಯದಂತಹ ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಿಕ್ಷಣವನ್ನು ತರಗತಿಯ ಕೋಣೆಗಳಲ್ಲಿ ನೇರವಾಗಿ ಪಾಲ್ಗೊಂಡು ಕಲಿಯುವುದಕ್ಕೆ ಅವಕಾಶವಿಲ್ಲದ ಹಲವರಿಗಾಗಿ ರೂಪಿಸಿರುವ ವ್ಯವಸ್ಥೆಯಿದು. ಅಂದರೆ ವಿಶ್ವವಿದ್ಯಾಲಯದಿಂದ ಸಾವಿರಾರು ಮೈಲು ದೂರವಿದ್ದರೂ ತಮ್ಮ ಆಸಕ್ತಿಗೆ ಅನುಗುಣವಾಗಿ ಶಿಕ್ಷಣವನ್ನು ಪಡೆಯುವ ವ್ಯವಸ್ಥೆಯೇ ದೂರಶಿಕ್ಷಣ. ಅಂಚೆಯಲ್ಲಿ ಪಾಠಗಳನ್ನು ವಿದ್ಯಾರ್ಥಿಗಳಿಗೆ ನಿಗದಿತವಾಗಿ ರವಾನಿಸುವುದರ ಮೂಲಕ ಶಿಕ್ಷಣದ ಪ್ರಸಾರವಿರುತ್ತದೆ. ವಿವಿಧ ಇಲಾಖೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರಿಗೆ, ಗೃಹಿಣಿಯರಿಗೆ ಶಿಕ್ಷಣದಲ್ಲಿ ಆಸಕ್ತರಾಗಿರುವವರಿಗೆ ತಾವಿದ್ದ ಸ್ಥಳದಲ್ಲಿಯೇ ಅಧ್ಯಯನ ಮಾಡಲು ಅನುಕೂಲವಾಗುವಂತೆ ಒಟ್ಟಾರೆ ಇಂತಹ ಶಿಕ್ಷಣಕ್ರಮಗಳನ್ನು ರೂಪಿಸಲಾಗುತ್ತದೆ. ತರಗತಿಗಳಲ್ಲಿ ಅಧ್ಯಾಪಕರ ಮುಂದೆ ಕುಳಿತು ಪಾಠ ಕೇಳುವ ವಿದ್ಯಾರ್ಥಿಗಳು ರೂಢಿಸಿಕೊಳ್ಳುವಂತೆ ತಮ್ಮ ಕಲಿಕೆ ಹಾಗೂ ನಡೆನುಡಿಗಳಲ್ಲಿ ಜ್ಞಾನ, ತಿಳಿವಳಿಕೆಗಳನ್ನು ಸ್ವೀಕರಿಸುವಲ್ಲಿ ರೂಪಿಸಿಕೊಳ್ಳುವ ಶಿಸ್ತುಬದ್ಧ ಸಂವಹನ ಸಾಮರ್ಥ್ಯವನ್ನು ದೂರಶಿಕ್ಷಣದ ಮೂಲಕವೂ ವಿದ್ಯಾರ್ಥಿಗಳು ರೂಢಿಸಿಕೊಳ್ಳಬಲ್ಲರು ಎಂಬುದನ್ನು ಈಗಾಗಲೇ ದೂರಶಿಕ್ಷಣ ವ್ಯವಸ್ಥೆ ಸಾಧಿಸಿ ತೋರಿಸಿದೆ. ಪ್ರಾಯೋಗಿಕ ಹಾಗೂ ಪರಿಣಾಮಕಾರಿಯಾದ ವಿಧಾನಗಳ ಮೂಲಕ ದೂರಶಿಕ್ಷಣದಲ್ಲಿಯೂ ಜ್ಞಾನ ಪಡೆಯಬಹುದು ಎಂಬುದನ್ನು ಈಗಾಗಲೇ ಅನೇಕ ವಿಶ್ವವಿದ್ಯಾಲಯಗಳು ಸಿದ್ಧಪಡಿಸಿ ತೋರಿಸಿವೆ.

ಕನ್ನಡ ವಿಶ್ವವಿದ್ಯಾಲಯದಲ್ಲಿ ದೂರಶಿಕ್ಷಣದ ಮೂಲಕ ಕನ್ನಡ, ಚರಿತ್ರೆ, ಸಮಾಜಶಾಸ್ತ್ರ ಹಾಗೂ ಪತ್ರಿಕೋದ್ಯಮ ಮತ್ತು ಮಾಧ್ಯಮ ಅಧ್ಯಯನಗಳ ಸ್ನಾತಕೋತ್ತರ ಪದವಿಗಳ ಜೊತೆಗೆ ವಿವಿಧ ಡಿಪ್ಲೊಮ ಮತ್ತು ಸ್ನಾತಕೋತ್ತರ ಡಿಪ್ಲೊಮಗಳನ್ನು ವಿಶಿಷ್ಟ ದೃಷ್ಟಿಧೋರಣೆಗಳಿಂದ ಆರಂಭಿಸಲಾಗಿದೆ. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯವು ಈ ಕಾರ್ಯಕ್ರಮಗಳನ್ನು ಕನ್ನಡದಲ್ಲಿ ನೀಡುವುದರ ಮೂಲಕವೇ ಆಸಕ್ತರೆಲ್ಲರನ್ನು ಜ್ಞಾನಪ್ರಸಾರ ಕೈಂಕರ್ಯದಲ್ಲಿ ತೊಡಗಿಸಿಕೊಂಡಿದೆ. ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಸಾಂಪ್ರದಾಯಿಕ ಅಧ್ಯಯನ ಕ್ರಮಗಳೇ ಪ್ರಧಾನವಾದರೆ, ನಮ್ಮಲ್ಲಿ ಸಾಂಪ್ರದಾಯಿಕ ವಿಷಯಗಳನ್ನು ಅಂತರಶಿಸ್ತೀಯ ವೈಚಾರಿಕ ದೃಷ್ಟಿಕೋನದಿಂದ ಬೋಧಿಸಲಾಗುತ್ತಿದೆ. ಅಲ್ಲದೆ ಇದರ ಜೊತೆ ಜೊತೆಗೆ ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ಮಹಿಳಾ ಅಧ್ಯಯನ, ಶಾಸನಶಾಸ್ತ್ರ ಅಧ್ಯಯನ, ಆಡಳಿತ ಕನ್ನಡ, ಪತ್ರಿಕೋದ್ಯಮ ಅಧ್ಯಯನ, ಕನ್ನಡ ಸಾಹಿತ್ಯ, ನಾಟಕ ಕಲೆ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಭಾಷಾಂತರ ಅಧ್ಯಯನ ಡಿಪ್ಲೊಮಗಳನ್ನು ಆರಂಭಿಸಿದೆ. ಈ ಬಗೆಯ ಕೋರ್ಸ್‌ಗಳಿಗೆ ಪ್ರಸ್ತುತ ಸಂದರ್ಭದಲ್ಲಿ ಹೆಚ್ಚಿನ ಬೇಡಿಕೆಯಿದ್ದರೂ ಇವುಗಳು ಮಾರುಕಟ್ಟೆಗೆ ಮಾತ್ರ ಮೀಸಲಾಗಿರುವ ಕೋರ್ಸ್‌ಗಳಲ್ಲ. ಇವುಗಳು ಕನ್ನಡ ಮತ್ತು ಕರ್ನಾಟಕ(ನಾಡು-ನುಡಿ)ಕ್ಕೆ ಸಂಬಂಧಪಟ್ಟವುಗಳಾಗಿವೆ. ಈ ಹಿನ್ನೆಲೆಯಲ್ಲಿ ನಮ್ಮಲ್ಲಿನ ಅಧ್ಯಯನ ಗಳನ್ನು ಸಾಂಪ್ರದಾಯಿಕ ಅಧ್ಯಯನ ಕ್ರಮಗಳಿಗಿಂತ ಭಿನ್ನವಾಗಿ ರೂಪಿಸಲಾಗಿದೆ. ಇತ್ತೀಚಿನ ಸಂಶೋಧನೆಗಳಾಧಾರಿತ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯಕ್ರಮಗಳನ್ನು ರೂಪಿಸಲಾಗಿದೆ. ಪತ್ರಿಕೋದ್ಯಮ ಮತ್ತು ಮಾಧ್ಯಮ ಅಧ್ಯಯನದಂತಹ ಪಠ್ಯಗಳು ಸಾಮಾನ್ಯವಾಗಿ ಇಂಗ್ಲಿಷ್ ಭಾಷೆಯಲ್ಲಿ ಲಭ್ಯವಾದರೂ ದೇಶೀ ಭಾಷೆಗಳಲ್ಲಿ ಅವುಗಳ ಬಗ್ಗೆ ಪಠ್ಯಗಳು ಇರುವುದಿಲ್ಲ. ನಮ್ಮ ಮಾಹಿತಿ ಪ್ರಕಾರ ಕನಿಷ್ಟ ದಕ್ಷಿಣ ಭಾರತದಲ್ಲೇ ಇದೊಂದು ವಿನೂತನ ಹೆಜ್ಜೆ. ಕನ್ನಡದಲ್ಲಿ ಇದರ ಪ್ರಕಟಣೆ ಮಾಡಿದ್ದೇವೆ. ಈ ಎಲ್ಲಾ ವಿಷಯಗಳಿಗೆ ಕರ್ನಾಟಕದಾದ್ಯಂತ ಬಹಳ ಬೇಡಿಕೆಯಿರುವುದು ಗಮನಾರ್ಹ ಸಂಗತಿ.

ಇತ್ತೀಚಿನವರೆಗೂ ಶ್ರೀಮಂತರ ಹಾಗೂ ಮೇಲ್ವರ್ಗಗಳ ಕೈಗೆ ಮಾತ್ರವೇ ಎಟಕುತ್ತಿದ್ದ ಈ ಉನ್ನತ ಶಿಕ್ಷಣ, ಜನಸಾಮಾನ್ಯರಿಗೂ ಅದರಲ್ಲೂ ಬಹಳ ಮುಖ್ಯವಾಗಿ ನಗರ ಕೇಂದ್ರಗಳಲ್ಲಿರುವ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿನ ಉನ್ನತ ಶಿಕ್ಷಣವನ್ನು ಪಡೆಯಲಾಗದ ಜನಸಮುದಾಯ ಗಳಿಗೆ ತಲುಪಿಸುವ ಮಹತ್ತರವಾದ ಉದ್ದೇಶವನ್ನು ನಾವು ಹೊಂದಿದ್ದೇವೆ.

ಜಾಗತೀಕರಣದಿಂದಾಗಿ ಕೆಲಸದ ಒತ್ತಡದಲ್ಲಿದ್ದವರು ಅರ್ಧಕ್ಕೆ ನಿಲ್ಲಿಸಿದ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿ ಪೂರ್ಣಗೊಳಿಸುವುದಕ್ಕೆ ಹಾಗೂ ಹೆಚ್ಚಿನ ಪದವಿ ಪಡೆಯಲು ಇಚ್ಛೆ ಇದ್ದರೂ ಅದು ನಿಯಮಿತವಾಗಿ ಸಾಕಾರಗೊಳ್ಳುತ್ತಿಲ್ಲ. ಇಂಥವರ ಮುಂದುವರಿಕೆಯ ಅಧ್ಯಯನಕ್ಕಾಗಿ ದೃಶ್ಯ-ಶ್ರವ್ಯ (ವೀಡಿಯೋ ಮತ್ತು ಆಡಿಯೋ) ಮಾಧ್ಯಮಗಳ ಮತ್ತು ಅಂತರಜಾಲದ ಮೂಲಕ ಪಠ್ಯಗಳನ್ನು ಬೋಧಿಸುವ, ವಿತರಿಸುವ ಹಾಗೂ ಪ್ರವೇಶಗಳನ್ನು ಪಡೆಯುವ ಕಾರ್ಯಕ್ರಮಗಳನ್ನು ಯೋಜಿಸಲಾಗುತ್ತಿದೆ. ತೀರಾ ನಿರ್ಲಕ್ಷಿತರಾದ ಜನವರ್ಗಗಳಿಗೂ ಉನ್ನತ ಶಿಕ್ಷಣದ ಜ್ಞಾನಾರ್ಜನೆಗೆ ಅವಕಾಶ ಮಾಡಿಕೊಡುವ ಉದ್ದೇಶವನ್ನು ಈಡೇರಿಸುವ ದೃಷ್ಟಿಯಿಂದ ನಾಡಿನಾದ್ಯಂತ ನಮ್ಮ ಅಧ್ಯಯನ ಕೇಂದ್ರಗಳನ್ನು ಆರಂಭಿಸಿದ್ದೇವೆ. ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದ ಪ್ರದೇಶಗಳಾದ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ನಮ್ಮ ವ್ಯಾಪ್ತಿಯನ್ನು ಹೆಚ್ಚಿಸುವ ಪ್ರಯತ್ನದಲ್ಲಿ ನಾವು ದಾಪುಗಾಲನ್ನಿಟ್ಟಿದ್ದೇವೆ. ಪರಿಣಾಮವಾಗಿ ನಮ್ಮ ದೂರಶಿಕ್ಷಣದಿಂದ ಪದವಿ ಪಡೆದ ನೂರಾರು ವಿದ್ಯಾರ್ಥಿಗಳು ನಾಡಿನಾದ್ಯಂತ ಅಧ್ಯಾಪಕರಾಗಿದ್ದಾರೆ, ಪಿಎಚ್.ಡಿ ಪದವೀಧರರಾಗಿದ್ದಾರೆ ಹಾಗೂ ಸಾರ್ವಜನಿಕ ಉನ್ನತ ವಲಯದಲ್ಲಿ ಸೇವಾನಿರತರಾಗಿದ್ದಾರೆ. ಇನ್ನೂ ಹೆಚ್ಚಿನ ಆಸ್ಥೆಗೆ ದೂರಶಿಕ್ಷಣದ ಆಶಯಕ್ಕೆ ತಮ್ಮೆಲ್ಲರ ಶುಭಾಶಯಗಳನ್ನು ಕೋರುತ್ತೇವೆ.

# ಪರಿವಿಡಿ


| | | |
|---|---|---|
| **೧.** | **ನಮ್ಮ ವಿಶ್ವವಿದ್ಯಾಲಯ** | ೧ |
| ೧.೧ | ಕನ್ನಡ ವಿಶ್ವವಿದ್ಯಾಲಯ | ೧ |
| ೧.೨ | ದೂರಶಿಕ್ಷಣ ನಿರ್ದೇಶನಾಲಯ | ೨ |
| ೧.೩ | ವಿಶಿಷ್ಟ ಲಕ್ಷಣಗಳು | ೨ |
| ೧.೪ | ಗ್ರಂಥಾಲಯ | ೩ |
| ೧.೫ | ಪ್ರಸಾರಾಂಗ | ೩ |
| ೧.೬ | ಅತಿಥಿಗೃಹ/ವಿದ್ಯಾರ್ಥಿನಿಲಯ | ೪ |
| ೧.೭ | ಬೋಧಕ ವರ್ಗ | ೪ |
| **೨.** | **ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಶಿಕ್ಷಣಕ್ರಮ** | ೪ |
| ೨.೧ | ಸ್ನಾತಕೋತ್ತರ ಡಿಪ್ಲೊಮ/ಡಿಪ್ಲೊಮ ಕಾರ್ಯಕ್ರಮಗಳ ನಿಯಮಗಳು | ೫ |
| ೨.೧.೧ | ಶಿಕ್ಷಣದ ಅವಧಿ | ೫ |
| ೨.೧.೨ | ಪ್ರವೇಶ ಶುಲ್ಕ | ೬ |
| ೨.೧.೩ | ಪರೀಕ್ಷಾ ಶುಲ್ಕ | ೬ |
| ೨.೧.೪ | ಸಾಮಾನ್ಯ ನಿಯಮ | ೬ |
| **೨.೨** | **ಸ್ನಾತಕೋತ್ತರ ಡಿಪ್ಲೊಮ/ಡಿಪ್ಲೊಮ ಕಾರ್ಯಕ್ರಮಗಳ ಅಡಿಯಲ್ಲಿಯ ಶಿಕ್ಷಣಕ್ರಮಗಳು** | ೭ |
| ೨.೨.೧ | ಪುರಾತತ್ವ ಸಂಸ್ಕೃತಿ ಮತ್ತು ಪ್ರವಾಸೋದ್ಯಮ | ೮ |
| ೨.೨.೨ | ಮಹಿಳಾ ಅಧ್ಯಯನ | ೯ |
| ೨.೨.೩ | ಪತ್ರಿಕೋದ್ಯಮ ಅಧ್ಯಯನ | ೧೦ |
| ೨.೨.೪ | ನಾಟಕ ಕಲೆ | ೧೦ |
| ೨.೨.೫ | ಭಾಷಾಂತರ ಅಧ್ಯಯನ | ೧೧ |
| ೨.೨.೬ | ಕನ್ನಡ ಸಾಹಿತ್ಯ | ೧೨ |
| ೨.೨.೭ | ಶಾಸನಶಾಸ್ತ್ರ | ೧೩ |
| ೨.೨.೮ | ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ | ೧೪ |
| **೨.೩** | **ಸ್ನಾತಕೋತ್ತರ ಕಾರ್ಯಕ್ರಮಗಳ ಅಡಿಯಲ್ಲಿಯ ಶಿಕ್ಷಣಕ್ರಮಗಳು** | ೧೫ |
| ೨.೩.೧ | ಶಿಕ್ಷಣದ ಅವಧಿ | ೧೫ |
| ೨.೩.೨ | ಪ್ರವೇಶ ಶುಲ್ಕ | ೧೫ |
| ೨.೩.೩ | ಪರೀಕ್ಷಾ ಶುಲ್ಕ | ೧೬ |
| ೨.೩.೪ | ಅಂತಿಮ ಎಂ ಎ ಗೆ ಪ್ರವೇಶಾತಿ | ೧೬ |
| ೨.೩.೫ | ಪ್ರವೇಶಾರ್ಹತೆ | ೧೬ |
| **೨.೪** | **ಸ್ನಾತಕೋತ್ತರ ಶಿಕ್ಷಣಕ್ರಮಗಳ ಪಠ್ಯಕ್ರಮ** | |
| ೨.೪.೧ | ಎಂ ಎ ಕನ್ನಡ | ೧೭ |
| ೨.೪.೨ | ಎಂ ಎ ಚರಿತ್ರೆ | ೧೮ |
| ೨.೪.೩ | ಎಂ ಎ ಪತ್ರಿಕೋದ್ಯಮ ಮತ್ತು ಮಾಧ್ಯಮ ಅಧ್ಯಯನ (MJMS) | ೧೯ |
| ೨.೪.೪ | ಎಂ ಎ ಸಮಾಜಶಾಸ್ತ್ರ | ೨೦ |
| **೩.** | **ಶೈಕ್ಷಣಿಕ ನಿಯಮಗಳು** | ೨೧ |
| **೪.** | **ಅಧ್ಯಯನ ಕೇಂದ್ರಗಳು** | ೩೪ |
| **೫.** | **ವಿದ್ಯಾರ್ಥಿ ವೇತನಗಳು** | ೩೭ |

# ೧. ನಮ್ಮ ವಿಶ್ವವಿದ್ಯಾಲಯ

## ೧.೧ ಕನ್ನಡ ವಿಶ್ವವಿದ್ಯಾಲಯ

ಕುವೆಂಪು, ಬೇಂದ್ರೆಯವರಂತಹ ಸಹಸ್ರಾರು ಕನ್ನಡಿಗರು ಕನ್ನಡ ನಾಡು ನುಡಿಯ ಶೋಧಕ್ಕಾಗಿ ಕನ್ನಡ ವಿಶ್ವವಿದ್ಯಾಲಯದ ಕನಸು ಕಂಡವರು. ೧೯೮೫ರಲ್ಲಿ ಮೈಸೂರಿನಲ್ಲಿ ಜರುಗಿದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಕನ್ನಡಿಗರ ಕನಸು ಗರಿಬಿಚ್ಚಿಕೊಂಡು ಕರ್ನಾಟಕ ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳಾಗಿದ್ದ ಪ್ರೊ ಎಸ್ ಎಸ್ ಒಡೆಯರ ಅವರ ಅಧ್ಯಕ್ಷತೆಯಲ್ಲಿ ಈ ಕುರಿತ ಅಧ್ಯಯನ ಸಮಿತಿಯೊಂದು ३೧.೧೨.೧೯೮೫ರಂದು ರಚನೆ ಗೊಂಡಿತು. ಸಮಿತಿಯು ಕನ್ನಡ ಭಾಷೆ ಮತ್ತು ಸಾಹಿತ್ಯ, ವಿಜ್ಞಾನ, ಕಲೆ, ಸಂಸ್ಕೃತಿ, ಚರಿತ್ರೆ ಮತ್ತು ಸಮಾಜ ವಿಜ್ಞಾನದಂತಹ ವಿಷಯಗಳ ಕುರಿತು ಆಳವಾಗಿ ಅಧ್ಯಯನ ಮಾಡಲು ಕನ್ನಡ ವಿಶ್ವವಿದ್ಯಾಲಯದ ಅಗತ್ಯತೆಯನ್ನು ಮನಗಂಡಿರುವ ಹಿನ್ನೆಲೆಯಲ್ಲಿ ೧.೧೧.೧೯೯೧ ರಂದು ವಿಧ್ಯುಕ್ತವಾಗಿ ಕನ್ನಡ ವಿಶ್ವವಿದ್ಯಾಲಯವು (ಕರ್ನಾಟಕ ರಾಜ್ಯ ಪತ್ರದಲ್ಲಿ ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ [Karnataka Act 23 of 1991 dt 21.5.1991] ಪ್ರಕಟಿಸ ಲಾಗಿದೆ) ಹುಟ್ಟಿಕೊಂಡಿತು. ಕನ್ನಡದ ಖ್ಯಾತ ಲೇಖಕರಾದ ಪ್ರೊ ಚಂದ್ರಶೇಖರ ಕಂಬಾರ ಅವರನ್ನು ಈ ನಿಮಿತ್ಯ ಮುಂದಿನ ಕಾರ್ಯಗಳಿಗಾಗಿ ವಿಶೇಷ ಅಧಿಕಾರಿಯಾಗಿ ೨೩.೧೧.೧೯೯೧ ರಂದು ಕರ್ನಾಟಕ ಘನ ಸರಕಾರ ನೇಮಿಸಿತು. ಕಂಬಾರರು ನಾಡಿನುದ್ದಕ್ಕೂ ಸಂಚರಿಸಿ ಕನ್ನಡ ವಿಶ್ವವಿದ್ಯಾಲಯುದ ಕನಸುಗಳನ್ನು ಕಟ್ಟಿಕೊಂಡು ೮.೧.೧೯೯೨ ರಿಂದ ೪.೩.೧೯೯೮ರವರೆಗೆ ಇದರ ಪ್ರಥಮ ಕುಲಪತಿಯಾಗಿ ವಿಶ್ವವಿಖ್ಯಾತ ಹಂಪಿಯಲ್ಲಿ ಕಾರ್ಯಾರಂಭ ಮಾಡಿದರು. ಆನಂತರ ಪ್ರೊ ಎಂ ಎಂ ಕಲಬುರ್ಗಿ (೪.೩.೧೯೯೮–೫.೩.೨೦೦೧), ಪ್ರೊ ಎಚ್ ಜೆ ಲಕ್ಕಪ್ಪಗೌಡ (೬.೩.೨೦೦೧–೫.೩.೨೦೦೪), ಪ್ರೊ ಕೆ ವಿ ನಾರಾಯಣ (ಪ್ರಭಾರ) (೬.೩.೨೦೦೪–೨೪.೯.೨೦೦೪), ಪ್ರೊ ಬಿ ಎ ವಿವೇಕ ರೈ (೨೪.೯.೨೦೦೪–೨೭.೬.೨೦೦೭), ಪ್ರೊ ಕೆ ವಿ ನಾರಾಯಣ (ಪ್ರಭಾರ) (೨೭.೬.೨೦೦೭–೩೧.೧೦.೨೦೦೭), ಪ್ರೊ ಹಿ ಚಿ ಬೋರಲಿಂಗಯ್ಯ (ಪ್ರಭಾರ) (೩೧.೧೦.೨೦೦೭–೧೫.೨.೨೦೦೮), ಅವರು ಕುಲಪತಿಗಳಾಗಿ ಕನ್ನಡ ನಾಡು ನುಡಿಯ ಶೋಧಕಾರ್ಯ ವಿಸ್ತರಿಸಿದರು. ಹಿಂದಿನ ಕುಲಪತಿಯವರಾದ ಪ್ರೊ ಎ ಮುರಿಗೆಪ್ಪ (೧೫.೨.೨೦೦೮–೧೪.೨.೨೦೧೨), ಪ್ರಸ್ತುತ ಕುಲಪತಿಗಳಾದ ಪ್ರೊ ಹಿ ಚಿ ಬೋರಲಿಂಗಯ್ಯ ಅವರು ಕನ್ನಡದ ಜ್ಞಾನ ವಿಸ್ತರಿಸುವ ಕಾರ್ಯವನ್ನು ದೂರಶಿಕ್ಷಣ ನಿರ್ದೇಶನಾಲಯದ ಮೂಲಕವೂ ಮಾಡುತ್ತಲಿದ್ದಾರೆ. ನವದೆಹಲಿಯ ವಿಶ್ವವಿದ್ಯಾಲಯ ಧನಸಹಾಯ ಆಯೋಗವು ತನ್ನ ಪತ್ರ F.9-1/92 (CPP-I) ದಲ್ಲಿ ದಿನಾಂಕ 2.6.1999 ರಂದು ಕನ್ನಡ ವಿಶ್ವವಿದ್ಯಾಲಯಕ್ಕೆ ೧೨ಬಿ ಯ ಮಾನ್ಯತೆಯನ್ನು ಘೋಷಿಸಿ ಅನುದಾನವನ್ನು ನೀಡುತ್ತಿದೆ. NAAC ಸಂಸ್ಥೆಯು ೨೦೧೨ರಲ್ಲಿ ‘A’ ದರ್ಜೆಯನ್ನು ನೀಡಿದೆ.

### ೧.೨ ದೂರಶಿಕ್ಷಣ ನಿರ್ದೇಶನಾಲಯ

ಕನ್ನಡ ವಿಶ್ವವಿದ್ಯಾಲಯವು ನಮ್ಮ ರಾಜ್ಯದ ಶೈಕ್ಷಣಿಕ ಅಗತ್ಯವನ್ನು ಗಮನದಲ್ಲಿರಿಸಿಕೊಂಡು ಜೂನ್ ೧೫, ೨೦೦೧ ರಂದು ಅಂದಿನ ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಮತ್ತು ಜೂನ್ ೩೦, ೨೦೦೧ರಂದಿನ ಆಡಳಿತ ಮಂಡಳಿಯ ನಿರ್ಣಯದ ಹಿನ್ನೆಲೆಯಲ್ಲಿ ೨೫.೦೮.೨೦೦೧ರಿಂದ ವಿಶ್ವವಿಖ್ಯಾತ ಹಂಪಿ ಪರಿಸರದಲ್ಲಿ ದೂರಶಿಕ್ಷಣದ ಕಾರ್ಯಕ್ರಮಗಳನ್ನು ಆರಂಭಿಸಿದೆ. ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯು ಆಗಸ್ಟ್ ೭, ೨೦೧೦ರ ತನ್ನ ೧೨೫ನೇ ಸಭೆಯಲ್ಲಿ ದೂರಶಿಕ್ಷಣ ಕೇಂದ್ರವು ದೂರಶಿಕ್ಷಣ ನಿರ್ದೇಶನಾಲಯವಾಗಿ ಕಾರ್ಯನಿರ್ವಹಿಸಲು ಅನುಮೋದನೆಯನ್ನು ನೀಡಿದೆ. ನವದೆಹಲಿಯ ದೂರಶಿಕ್ಷಣ ಪರಿಷತ್ತು (Distance Education Council) ದಿನಾಂಕ ೩.೯.೨೦೦೭ರಂದು ತಾತ್ಕಾಲಿಕ ಮಾನ್ಯತೆ (Provisional Recognition) ನೀಡಿದೆ ಮತ್ತು ದಿನಾಂಕ ೧೭.೧೨.೨೦೦೯ರಂದು ಮಾನ್ಯತೆ ಮುಂದುವರಿಕೆ (Continuation of Recognition) ಕುರಿತು ಪತ್ರಗಳನ್ನು ನೀಡಿದೆ. ಮತ್ತು ದೂರಶಿಕ್ಷಣ ನಿರ್ದೇಶನಾಲಯದ ಅಭಿವೃದ್ಧಿಗಾಗಿ ಪ್ರತಿವರ್ಷ ಅನುದಾನವನ್ನು ನೀಡುತ್ತಲಿದೆ. ಈ ಹಿನ್ನೆಲೆಯಲ್ಲಿ ದೂರಶಿಕ್ಷಣ ನಿರ್ದೇಶನಾಲಯವು ಕನ್ನಡ ವಿಶ್ವವಿದ್ಯಾಲಯದ ಆವರಣ ವಿದ್ಯಾರಣ್ಯದ ಕಾಯಕದ ಮನೆಯಲ್ಲಿ ಕಾರ್ಯನಿರ್ವಹಿಸುತ್ತಲಿದೆ. ಇದು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕು ಕೇಂದ್ರದಿಂದ ೧೫ ಕಿಲೋಮೀಟರು ದೂರದಲ್ಲಿದೆ. ವಿದ್ಯಾರಣ್ಯ ಆವರಣವು ಶೈಕ್ಷಣಿಕ ಚಟುವಟಿಕೆಗಳ ಮುಂದುವರಿಕೆಗೆ ಅನುಗುಣವಾದ ಪ್ರಶಾಂತ ಮತ್ತು ಸೂಕ್ತ ಅಭಯಾರಣ್ಯವನ್ನು ಹೊಂದಿದೆ. ಆಡಳಿತ ವಿಭಾಗ, ಶಿಕ್ಷಣ ವಿಭಾಗ ಹಾಗೂ ಉತ್ತಮ ಉಪನ್ಯಾಸ ಮಂದಿರಗಳನ್ನು ವಿಶ್ವವಿದ್ಯಾಲಯ ಹೊಂದಿದೆ. ಸುಸಜ್ಜಿತವಾದ ಗ್ರಂಥಾಲಯವಿದೆ. ಉಪಾಹಾರ ಗೃಹವಿದೆ.

### ೧.೩ ವಿಶಿಷ್ಟ ಲಕ್ಷಣಗಳು

ಮುಕ್ತ ಕಲಿಕೆ ವ್ಯವಸ್ಥೆಯು ವಿಶ್ವವಿದ್ಯಾಲಯ ಮಟ್ಟದಲ್ಲಿ ನೀಡುತ್ತಿರುವ ಅತ್ಯಂತ ವಿಶಿಷ್ಟವಾದ ಮತ್ತು ಸವಾಲುಗಳಿಂದ ಕೂಡಿದ ಶಿಕ್ಷಣಕ್ರಮವಾಗಿದೆ. ತಾವು ಕಾರ್ಯನಿರತರಾಗಿರುವ ಅಥವಾ ವಾಸಿಸುತ್ತಿರುವ ಸ್ಥಳದಲ್ಲಿಯೇ ಶಿಕ್ಷಣವನ್ನು ಮುಂದುವರೆಸುವ ಅಪೇಕ್ಷೆಯುಳ್ಳವರಿಗೆ ಈ ಶಿಕ್ಷಣ ವ್ಯವಸ್ಥೆ ವಿಪುಲ ಅವಕಾಶಗಳನ್ನು ಒದಗಿಸುತ್ತಿದೆ. ಈ ವಿಧಾನವೇ 'ದೂರಶಿಕ್ಷಣ' ಎಂದು ಜನಪ್ರಿಯವಾಗಿದೆ. ಅಭಿವೃದ್ಧಿಶೀಲ ರಾಷ್ಟ್ರವಾದ ಭಾರತದಲ್ಲಿ ದೂರಶಿಕ್ಷಣ ಮಾತ್ರವೇ ಉನ್ನತ ಶಿಕ್ಷಣಕ್ಕೆ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಬಲ್ಲದು. ದೂರಶಿಕ್ಷಣದ ಕ್ರಮಗಳನ್ನು ಈ ಕೆಳಕಂಡ ವಿದ್ಯಾರ್ಥಿ ವರ್ಗಗಳಿಗೆಂದೇ ವಿಶೇಷವಾಗಿ ರೂಪಿಸಲಾಗಿದೆ.

- ಆರ್ಥಿಕ ತೊಂದರೆ ಹಾಗೂ ಇತರ ಪರಿಸ್ಥಿತಿಗಳಿಂದಾಗಿ ತಮ್ಮ ಶಾಲಾ ಕಾಲೇಜುಗಳ ನಿಯತ ಶಿಕ್ಷಣವನ್ನು ಅನಿವಾರ್ಯವಾಗಿ ಸ್ಥಗಿತಗೊಳಿಸಿದ ವಿದ್ಯಾರ್ಥಿಗಳು.
- ಭೌಗೋಳಿಕವಾಗಿ ತುಂಬ ದೂರ ಪ್ರದೇಶದಲ್ಲಿ ವಾಸವಾಡುತ್ತಿರುವ ವಿದ್ಯಾರ್ಥಿಗಳು.
- ನಿಯತವಾಗಿ ಕಾಲೇಜು/ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಪ್ರವೇಶ ದೊರಕದ ವಿದ್ಯಾರ್ಥಿಗಳು.

- ಪೂರ್ಣಕಾಲಿಕ ವಿದ್ಯಾರ್ಥಿಗಳಂತೆ ಅಧ್ಯಯನ ಮುಂದುವರೆಸಲು ಸಾಧ್ಯವಾಗದ ಆಸಕ್ತ ಉದ್ಯೋಗಸ್ಥರು.
- ಜ್ಞಾನದ ಸಲುವಾಗಿಯೇ ವಿದ್ಯಾರ್ಥಿಗಳಂತೆ ಅಧ್ಯಯನ ಮಾಡಲಿಚ್ಛಿಸುವ ವ್ಯಕ್ತಿಗಳು.
- ಜ್ಞಾನ ಮತ್ತು ಕೌಶಲಗಳನ್ನು ಉನ್ನತೀಕರಿಸಿಕೊಳ್ಳಲು ಇಚ್ಛಿಸುವ ಅಭ್ಯರ್ಥಿಗಳು. ಮತ್ತು
- ಕನ್ನಡ ಮಾಧ್ಯಮದಲ್ಲಿಯೇ ಅಧ್ಯಯನ ಮಾಡಬಯಸುವ ಆಸಕ್ತರು.

**ಧ್ಯೇಯಗಳು**

- **ಜನಸಾಮಾನ್ಯರಿಗೆ ಉನ್ನತ ಶಿಕ್ಷಣ** ಎನ್ನುವ ಧ್ಯೇಯದೊಂದಿಗೆ ಕಲಿಯುವವರ ಮನೆ ಬಾಗಿಲಿಗೆ ಉನ್ನತ ಶಿಕ್ಷಣವನ್ನು ಕೊಂಡೊಯ್ಯುವುದರ ಮೂಲಕ ಉನ್ನತ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವುದು.
- ವಯೋಮಾನ, ವಾಸಸ್ಥಳ ಹಾಗೂ ವಿದ್ಯಾರ್ಹತೆಗಳು ಏನೇ ಇರಲಿ ಉನ್ನತ ಶಿಕ್ಷಣ ಬಯಸುವವರಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು.
- ವೃತ್ತಿಪರತೆ ಮತ್ತು ವೃತ್ತಿ ನೈಪುಣ್ಯತೆ ತಂದುಕೊಡುವ ರೀತಿಯಲ್ಲಿ ಅಗತ್ಯವಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುವುದು.

## ೧.೪ ಗ್ರಂಥಾಲಯ

೧೯೯೧ರಿಂದಲೂ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯವು ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಅಗತ್ಯಗಳನ್ನು ಪೂರೈಸುತ್ತಾ ಬಂದಿದೆ. ಒಂದು ಲಕ್ಷಕ್ಕೂ ಮೀರಿದ ಗ್ರಂಥಗಳ ಬಹುಶಾಸ್ತ್ರೀಯ ಸಂಪನ್ಮೂಲ ಸಂಗ್ರಹದ ಜೊತೆಗೆ ಯೋಗ್ಯ ಸೇವೆಯ ದಾಖಲೆ ಹೊಂದಿದೆ. ವಿಸ್ತೀರ್ಣದಲ್ಲಿ ವಿಶಾಲವು, ಸುಂದರವು ಹಾಗೂ ಆಕರ್ಷಣೀಯವು ಆಗಿರುವ ಭವ್ಯ ಕಟ್ಟಡಗಳನ್ನು ಅಕ್ಷರ ಮತ್ತು ಸಿರಿಗನ್ನಡ ಗ್ರಂಥಾಲಯಗಳು ಹೊಂದಿವೆ. ವಿಶ್ವವಿದ್ಯಾನಿಲಯದ ಗ್ರಂಥಾಲಯಗಳು ಎಲ್ಲಾ ವಿದ್ಯಾರ್ಥಿಗಳಿಗೆ ಅಭ್ಯಸಿಸಲೂ ಎಲ್ಲಾ ಕೆಲಸದ ದಿನ ಬೆಳಿಗ್ಗೆ ೧೦ಗಂಟೆಯಿಂದ ೫.೩೦ಗಂಟೆಯವರಿಗೆ ತೆರೆದಿರುತ್ತವೆ. ಪರಾಮರ್ಶನಕ್ಕಾಗಿ ನಿಯತಕಾಲಿಕೆಗಳು, ಆಧಾರಗ್ರಂಥಗಳು, ವಿಶ್ವಕೋಶಗಳು, ಹಳೆಯ ಪ್ರಶ್ನೆಪತ್ರಿಕೆಗಳು ಮುಂತಾದವುಗಳು ಇಲ್ಲಿ ಲಭ್ಯವಾಗುವವು. ಕನ್ನಡ ವಿಶ್ವವಿದ್ಯಾಲಯದ ಗಣಕ ಕೇಂದ್ರವು ಅಂತರ್ಜಾಲ ಸೇವೆಯನ್ನು ಒದಗಿಸುತ್ತದೆ.

## ೧.೫ ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಸಹಸ್ರಾರು ಶೈಕ್ಷಣಿಕ ಶೋಧಗಳ ವರದಿಗಳನ್ನು ಪ್ರಕಟಿಸಿ ಉತ್ತಮ ಸಾಧನೆಯನ್ನು ಮಾಡಿದೆ. ವಿವಿಧ ವಿಭಾಗಗಳ ಹತ್ತಾರು ನಿಯತಕಾಲಿಕೆಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ. ದೂರಶಿಕ್ಷಣವು ತನ್ನ ಶಿಕ್ಷಣಕ್ರಮಗಳಿಗೆ ಸಂಬಂಧಿಸಿದಂತೆ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಮತ್ತು ಅಧ್ಯಯನ ಯೋಗ್ಯ ಪರಾಮರ್ಶನ ಗ್ರಂಥಗಳನ್ನು ಪ್ರಕಟಿಸುತ್ತಿದೆ.

**೧.೬ ಅತಿಥಿಗೃಹ/ವಿದ್ಯಾರ್ಥಿನಿಲಯ**

ಕನ್ನಡ ವಿಶ್ವವಿದ್ಯಾಲಯದ ಶ್ರೀಶೈಲ, ಕಾವ್ಯ, ಕಾದಂಬರಿ ಅತಿಥಿಗೃಹ ಮತ್ತು ಘಟಿಕಾಲಯ ವಸತಿನಿಲಯಗಳಲ್ಲಿ ಅತಿಥಿಗಳ ಮತ್ತು ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅವಕಾಶವಿರುವುದು. ಅತಿಥಿಗಳು, ವಿದ್ಯಾರ್ಥಿಗಳು ಮತ್ತು ಸಂಯೋಜಕರು ವಿಶ್ವವಿದ್ಯಾಲಯದ ನಿಯಮಾನುಸಾರ ಬಾಡಿಗೆಯನ್ನು ಪಾವತಿಸಿ ಇದರ ಪ್ರಯೋಜನವನ್ನು ಪಡೆಯಬಹುದು.

**೧.೭ ಬೋಧಕ ವರ್ಗ**

ವಿವಿಧ ವಿಷಯಗಳ ಅಗತ್ಯಗಳಿಗೆ ಅನುಗುಣವಾಗಿ ಅಧ್ಯಯನ ಮಂಡಳಿಗಳು ಕಾರ್ಯ ನಿರ್ವಹಿಸುತ್ತಿವೆ. ವಿದ್ಯಾರ್ಥಿಗಳು ಶೈಕ್ಷಣಿಕ ಸಂಪರ್ಕ ಕಾರ್ಯಕ್ರಮದ ಸಂದರ್ಭದಲ್ಲಿ ಅಥವಾ ತಮ್ಮ ಬಿಡುವಿನ ಸಂದರ್ಭದಲ್ಲಿ ತಮ್ಮ ವಿಷಯಕ್ಕೆ ಸಂಬಂಧಿಸಿದ ಅಧ್ಯಯನ ಮಂಡಳಿಯ ಸದಸ್ಯರನ್ನು ಸಂಪರ್ಕಿಸಿ ಅಧ್ಯಯನ ವಿಷಯಗಳಿಗೆ ಸಂಬಂಧಿಸಿದಂತೆ ಸಮಾಲೋಚಿಸಬೇಕು. ಸಂಪರ್ಕಕ್ಕಾಗಿ ಸ್ವಯಂ ಕಲಿಕಾ ಸಾಮಗ್ರಿಯಲ್ಲಿಯ ಅಧ್ಯಯನ ಮಂಡಳಿಯ ಸದಸ್ಯರ ವಿವರವನ್ನು ಗಮನಿಸಬೇಕು.

**೨. ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಶಿಕ್ಷಣಕ್ರಮ**

ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯವು ಈ ಕೆಳಗಿನ ಶೈಕ್ಷಣಿಕ ಕಾರ್ಯಕ್ರಮಗಳ ಅಡಿಯಲ್ಲಿ ವಿವಿಧ ಶಿಕ್ಷಣಕ್ರಮಗಳನ್ನು ಹೊಂದಿರುವುದು.

| | | |
|---|---|---|
| **ಅ.** | **ಸರ್ಟಿಫಿಕೇಟ್ ಕಾರ್ಯಕ್ರಮ ಅಡಿಯಲ್ಲಿಯ ಶಿಕ್ಷಣಕ್ರಮಗಳು (ಅವಧಿ: ೧ ವರ್ಷ)** | **ಕೋಡ್** |
| ೧. | ಸಂಶೋಧನಾ ವಿಧಾನ * | ೧೫ |
| ೨. | ತಮಿಳು ಭಾಷೆ * | ೨೦ |
| ೩. | ತೆಲುಗು ಭಾಷೆ * | ೨೧ |
| ೪. | ಮಲೆಯಾಳಂ ಭಾಷೆ * | **೨೨** |

| | | |
|---|---|---|
| **ಆ.** | **ಸ್ನಾತಕೋತ್ತರ ಡಿಪ್ಲೊಮ/ಡಿಪ್ಲೊಮ ಕಾರ್ಯಕ್ರಮಗಳ ಅಡಿಯಲ್ಲಿಯ ಶಿಕ್ಷಣಕ್ರಮಗಳು (ಅವಧಿ: ೧ ವರ್ಷ)** | |
| ೦೧. | ಕರ್ನಾಟಕ ಅಧ್ಯಯನ * | ೦೧ |
| ೦೧ಅ. | ಕರ್ನಾಟಕ ಸ್ಟಡೀಸ್ * | ೦೧ಅ |
| ೦೨. | ಕ್ರಿಯಾತ್ಮಕ ಕನ್ನಡ * | ೦೨ |
| ೦೩. | ದಲಿತ ಅಧ್ಯಯನ * | ೦೩ |
| ೦೪. | ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ | ೦೪ |
| ೦೫. | ಮಹಿಳಾ ಅಧ್ಯಯನ | ೦೫ |
| ೦೬. | ಆಡಳಿತ ಕನ್ನಡ * | ೦೬ |
| ೦೭. | ಜನಪದ ಕಲೆಗಳು * | ೦೭ |

೦೮. ಪತ್ರಿಕೋದ್ಯಮ ಅಧ್ಯಯನ ೦೮
೦೯. ಕರಕುಶಲ ಕಲೆಗಳು * ೦೯
೧೦. ಜನಪದ ಸಂಗೀತ * ೧೦
೧೧. ನಾಟಕ ಕಲೆ ೧೧
೧೨. ಪಾರಂಪರಿಕ ಜ್ಞಾನ * ೧೨
೧೩. ಬುಡಕಟ್ಟು ಅಧ್ಯಯನ * ೧೩
೧೪. ಭಾಷಾಂತರ ಅಧ್ಯಯನ ೧೪
೧೫. ಕನ್ನಡ ಸಾಹಿತ್ಯ ೧೬
೧೬. ದ್ರಾವಿಡ ಅಧ್ಯಯನ * ೧೮
೧೭. ಶಾಸನಶಾಸ್ತ್ರ ಅಧ್ಯಯನ ೧೯
೧೮. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ
(ಕಂಪ್ಯೂಟರ್ ಡಿಪ್ಲೊಮ) ೨೩
೧೯. ಕುವೆಂಪು ಅಧ್ಯಯನ * ೨೪

**ಇ. ಸ್ನಾತಕೋತ್ತರ ಕಾರ್ಯಕ್ರಮ ಅಡಿಯಲ್ಲಿಯ ಶಿಕ್ಷಣಕ್ರಮಗಳು (ಅವಧಿ: ೨ ವರ್ಷ)**

೧. ಎಂ ಎ ಕನ್ನಡ ೧೭
೨. ಎಂ ಎ ಚರಿತ್ರೆ ೨೫
೩. ಎಂ ಎ ಪತ್ರಿಕೋದ್ಯಮ ಮತ್ತು
ಮಾಧ್ಯಮ ಅಧ್ಯಯನ ೨೬
೪. ಎಂ ಎ ಸಮಾಜಶಾಸ್ತ್ರ ೨೮
೫. ಎಂ ಎ ಪ್ರವಾಸೋದ್ಯಮ ಆಡಳಿತ * ೨೭

*(* ಈ ಚಿಹ್ನೆಯ ಕೋರ್ಸ್‌ಗಳು ಸದ್ಯ ಚಾಲ್ತಿಯಲ್ಲಿಲ್ಲ)*

## ೨.೧ ಸ್ನಾತಕೋತ್ತರ ಡಿಪ್ಲೊಮ/ಡಿಪ್ಲೊಮ ಶಿಕ್ಷಣಕ್ರಮಗಳ ನಿಯಮಗಳು

### ೨.೧.೧ ಶಿಕ್ಷಣದ ಅವಧಿ

ಯಾವುದೇ ಸ್ನಾತಕೋತ್ತರ ಡಿಪ್ಲೊಮ ಅಥವಾ ಡಿಪ್ಲೊಮ ಶಿಕ್ಷಣವನ್ನು ಪೂರ್ಣಗೊಳಿಸಲು ಇರುವ ಕನಿಷ್ಠ ಅವಧಿ ಒಂದು ವರ್ಷ. ಗರಿಷ್ಠ ಅವಧಿ ನಿರ್ದಿಷ್ಟ ಶಿಕ್ಷಣಕ್ಕೆ ಸೇರಿದ ವರ್ಷದಿಂದ ಎರಡು ವರ್ಷಗಳು ಮಾತ್ರ. ಎರಡು ವರ್ಷಗಳ ಒಳಗೆ ಡಿಪ್ಲೊಮ ಶಿಕ್ಷಣವನ್ನು ಪೂರ್ಣಗೊಳಿಸದ ಅಭ್ಯರ್ಥಿ ಮತ್ತೆ ಹೊಸದಾಗಿ ಪ್ರವೇಶ ಪಡೆಯಬೇಕಾಗುತ್ತದೆ.

### ೨.೧.೨ ಪ್ರವೇಶ ಶುಲ್ಕ

| | |
|---|---|
| *ನೋಂದಣಿ ಶುಲ್ಕ | ರೂ. ೨೦೦/- |
| *ಪ್ರವೇಶ ಶುಲ್ಕ | ರೂ. ೧೦೦೦/- |
| ಕೋರ್ಸ್/ಬೋಧನಾ ಶುಲ್ಕ | ರೂ. ೨೫೦೦/- |
| ಪ್ರಯೋಗ ಶುಲ್ಕ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಮತ್ತು ನಾಟಕ ಕಲೆ (ಸ್ನಾತಕೋತ್ತರ ಡಿಪ್ಲೊಮ ಅಥವಾ ಡಿಪ್ಲೊಮಕ್ಕಾಗಿ ಮಾತ್ರ) | ರೂ. ೫೦೦/- |
| (ಪತ್ರಿಕೋದ್ಯಮ ಅಧ್ಯಯನ ಡಿಪ್ಲೊಮಕ್ಕಾಗಿ ಮಾತ್ರ) | ರೂ. ೧೦೦೦/- |

***ನಿರುದ್ಯೋಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ವಿದ್ಯಾರ್ಥಿಗಳಿಗೆ ನೋಂದಣಿ ಮತ್ತು ಪ್ರವೇಶ ಶುಲ್ಕವಿರುವುದಿಲ್ಲ. (ವಾರ್ಷಿಕ ಆದಾಯ ೨.೦೦ ಲಕ್ಷ ಮಿತಿಯೊಳಗಿರಬೇಕು)***

### ೨.೧.೩ ಪರೀಕ್ಷಾ ಶುಲ್ಕ

| | |
|---|---|
| ಎಲ್ಲಾ **ಕೋರ್ಸ್(ಪತ್ರಿಕೆ)**ಗಳಿಗೆ | ರೂ. ೧೦೦೦/- |
| ಒಂದು **ಕೋರ್ಸ್(ಪತ್ರಿಕೆ)**ಗೆ | ರೂ. ೨೦೦/- |
| ಪುನರ್ **ಪರೀಕ್ಷೆ ಒಂದು ಕೋರ್ಸ್(ಪತ್ರಿಕೆ)**ಗೆ | ರೂ. ೨೦೦/- |

***ವಿ.ಸೂ.: ಇತರೆ ಶುಲ್ಕಗಳಿಗಾಗಿ ಪುಟ ಸಂಖ್ಯೆ ೨೭ನ್ನು ನೋಡಿ***

### ೨.೧.೪ ಸಾಮಾನ್ಯ ನಿಯಮ

ಎಲ್ಲಾ ಸ್ನಾತಕೋತ್ತರ ಡಿಪ್ಲೊಮ ಕೋರ್ಸ್‌ಗಳ A ಯಿಂದ Dವರೆಗಿನ ಪ್ರತಿ ಕೋರ್ಸಿ(ಪತ್ರಿಕೆ)ನಲ್ಲಿ ೧೦ ಅಂಕಗಳು ಆಂತರಿಕ ಮೌಲ್ಯಮಾಪನಕ್ಕಾಗಿ ಅಂದರೆ ಸಂಪರ್ಕ ಕಾರ್ಯಕ್ರಮ ಹಾಗೂ ಮೌಖಿಕ ಪರೀಕ್ಷೆ ಅಥವಾ ಗೃಹಲೇಖನಕ್ಕಾಗಿ ಸಾಮಾನ್ಯವಾಗಿ ಕಾಯ್ದಿರಿಸಲಾಗಿದೆ. ಸಂಪರ್ಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದವರು ಈ ೪ ಕೋರ್ಸು(ಪತ್ರಿಕೆ)ಗಳಲ್ಲಿ ತಲಾ ೧೦ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಪಡೆಯಲು ಎ೪ ಅಳತೆಯ ಕನಿಷ್ಠ ೧೦ ಪುಟಗಳ ೨ ಗೃಹಲೇಖನವನ್ನು ದೂರಶಿಕ್ಷಣ ನಿರ್ದೇಶನಾಲಯದ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮಾರ್ಗಸೂಚಿಯ ಮೇರೆಗೆ ಆಯಾ ಕೋರ್ಸು(ಪತ್ರಿಕೆ)ಗಳಲ್ಲಿಯ ಅಂಶಗಳನ್ನು ಓದಿ ಮನನಮಾಡಿಕೊಂಡು ಸ್ವಹಸ್ತದಿಂದ ಬರೆದು ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಇನ್ನುಳಿದಂತೆ ಎಲ್ಲ ಸ್ನಾತಕೋತ್ತರ ಡಿಪ್ಲೊಮ ಶಿಕ್ಷಣಕ್ರಮದ ಕೋರ್ಸ್ Aಯಿಂದ Dವರೆಗಿನ ಪ್ರತಿ ಕೋರ್ಸಿ(ಪತ್ರಿಕೆ)ನಲ್ಲಿ ತಲಾ ೯೦ ಅಂಕಗಳ ೩ ಗಂಟೆ ಅವಧಿಯ ಲಿಖಿತ ವಾರ್ಷಿಕ ಪರೀಕ್ಷೆ ಕಡ್ಡಾಯ. ಉತ್ತೀರ್ಣ ಹೊಂದಲು ಪ್ರತಿ ಕೋರ್ಸಿನಲ್ಲಿ ಆಂತರಿಕ ಅಂಕಗಳನ್ನು ಸೇರಿ ಸರಾಸರಿ ೪೦% ಅಂಕಗಳನ್ನು ಗಳಿಸುವುದು ಕಡ್ಡಾಯವಾಗಿರುತ್ತದೆ. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಡಿಪ್ಲೊಮದ ಎರಡು ಪತ್ರಿಕೆಗಳು ಈ ಸಾಮಾನ್ಯ ನಿಯಮಕ್ಕೆ ಅನ್ವಯಿಸುತ್ತವೆ. ಉಳಿದಂತೆ ಇರುವ ೩,೪,೫ರ ಪತ್ರಿಕೆಗೂ (ಲಿಖಿತ ಮತ್ತು ಆಂತರಿಕ ಅಂಕಗಳು ಸೇರಿದಂತೆ) ಮೇಲಿನ ನಿಯಮವೇ ಅನ್ವಯಿಸುತ್ತದೆ.

ಈ ಕೆಳಗಿನ ಶಿಕ್ಷಣಕ್ರಮಗಳು ಡಿಪ್ಲೊಮ ಮತ್ತು ಸ್ನಾತಕೋತ್ತರ ಡಿಪ್ಲೊಮಗಳನ್ನು ಒಳಗೊಂಡಿರುತ್ತವೆ. ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆಯ ಮೇಲೆ ಪ್ರವೇಶ ಪಡೆದು ಅಧ್ಯಯನ ಪೂರ್ಣಗೊಳಿಸಿದವರಿಗೆ ಡಿಪ್ಲೊಮ ಪ್ರಮಾಣಪತ್ರ ಮತ್ತು ಯಾವುದೇ ಸ್ನಾತಕ ಪದವಿ ವಿದ್ಯಾರ್ಹತೆಯ ಮೇಲೆ ಪ್ರವೇಶ ಪಡೆದು ಅಧ್ಯಯನ ಪೂರ್ಣಗೊಳಿಸಿದವರಿಗೆ ಸ್ನಾತಕೋತ್ತರ ಡಿಪ್ಲೊಮ ಪ್ರಮಾಣ ಪತ್ರವನ್ನು ನೀಡಲಾಗುವುದು.

**ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯವು ೨೦೧೩–೧೪ ನೇ ಸಾಲಿಗಾಗಿ ಈ ಕೆಳಗಿನ ಕಾರ್ಯಕ್ರಮಗಳ ಅಡಿಯಲ್ಲಿಯ ವಿವಿಧ ಶಿಕ್ಷಣಕ್ರಮಗಳಿಗೆ ಮಾತ್ರ ಅರ್ಹರಿಂದ ಅರ್ಜಿ ಆಹ್ವಾನಿಸಿರುವುದು.**

### ೨.೨ ಸ್ನಾತಕೋತ್ತರ ಡಿಪ್ಲೊಮ/ಡಿಪ್ಲೊಮ ಕಾರ್ಯಕ್ರಮಗಳ ಅಡಿಯಲ್ಲಿಯ ಶಿಕ್ಷಣಕ್ರಮಗಳು (ಪ್ರವೇಶಾರ್ಹತೆ : ಯಾವುದೇ ಪದವಿ/SSLC)

| ಕ್ರ.ಸಂ. | ಶಿಕ್ಷಣಕ್ರಮ ಸಂಖ್ಯೆ | ಕೋಡ್ |
|---|---|---|
| ೧. | ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ | ೦೪ |
| ೨. | ಮಹಿಳಾ ಅಧ್ಯಯನ | ೦೫ |
| ೩. | ಪತ್ರಿಕೋದ್ಯಮ ಅಧ್ಯಯನ | ೦೮ |
| ೪. | ನಾಟಕ ಕಲೆ | ೧೧ |
| ೫. | ಭಾಷಾಂತರ ಅಧ್ಯಯನ | ೧೪ |
| ೬. | ಕನ್ನಡ ಸಾಹಿತ್ಯ | ೧೬ |
| ೭. | ಶಾಸನಶಾಸ್ತ್ರ ಅಧ್ಯಯನ | ೧೯ |
| ೮. | ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಕಂಪ್ಯೂಟರ್ ಡಿಪ್ಲೊಮ) | ೨೩ |

**ಸೂಚನೆ:** ಪ್ರತಿ ಶಿಕ್ಷಣಕ್ರಮದಲ್ಲಿ ಕನಿಷ್ಟ ೧೦ ಅಭ್ಯರ್ಥಿಗಳ ಪ್ರವೇಶವೂ ಸಾಧ್ಯವಾಗದಿದ್ದಲ್ಲಿ ಪ್ರವೇಶ ಪಡೆದ ಅಂತಹ ಅಭ್ಯರ್ಥಿಗಳು ತಮ್ಮ ಶಿಕ್ಷಣಕ್ರಮವನ್ನು ಸಂಪರ್ಕ ಕಾರ್ಯಕ್ರಮದ ಪೂರ್ವದಲ್ಲಿಯೇ ಬದಲಾಯಿಸಿಕೊಂಡು ಸ್ವಯಂಕಲಿಕಾ ಸಾಮಗ್ರಿಯನ್ನು ಬದಲಾಯಿಸಿ ಕೊಳ್ಳಬಹುದು ಇಲ್ಲವೇ ಸ್ವಯಂಕಲಿಕಾ ಸಾಮಗ್ರಿ ಹಿಂದಿರುಗಿಸಿ ಪ್ರವೇಶವನ್ನು ರದ್ದುಗೊಳಿಸಿಕೊಂಡು ಅರ್ಜಿ ಶುಲ್ಕ ಹೊರತುಪಡಿಸಿ ಪಾವತಿಸಿದ ಇತರ ಎಲ್ಲ ಶುಲ್ಕವನ್ನು ಹಿಂಪಡೆಯಬಹುದು.

## ೨.೨.೧ ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ

### ಕೋರ್ಸ್ ಮತ್ತು ನಿಯಮಗಳು

| ಕೋರ್ಸ್ | ಕೋರ್ಸಿನ ಶೀರ್ಷಿಕೆ | ಅಂಕಗಳು | | | |
|---|---|---|---|---|---|
| ಸಂಕೇತ | | ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
| ೦೪A | ೧. ಪುರಾತತ್ವ | ೬ | ೯೦ | ೧೦ | ೧೦೦ |
| ೦೪B | ೨. ಕರ್ನಾಟಕ ಚರಿತ್ರೆ ಮತ್ತು ಸಂಸ್ಕೃತಿ | ೬ | ೯೦ | ೧೦ | ೧೦೦ |
| ೦೪C | ೩. ಪ್ರವಾಸೋದ್ಯಮ ಪರಿಚಯ | ೬ | ೯೦ | ೧೦ | ೧೦೦ |
| ೦೪D | ೪. ಪ್ರವಾಸೋದ್ಯಮ | ೬ | ೯೦ | ೧೦ | ೧೦೦ |
| ೦೪E | ೫ಅ. ಸಂಪ್ರಬಂಧ | ೩ | – | ೫೦ | ೫೦ |
| | ೫ಆ. ಪ್ರವಾಸ ವರದಿ | ೩ | – | ೫೦ | ೫೦ |
| | **ಒಟ್ಟು** | **೩೦** | **೩೬೦** | **೧೪೦** | **೫೦೦** |

**ಸಂಪ್ರಬಂಧ, ಪ್ರವಾಸ ವರದಿ**

೦೪E ಕೋರ್ಸು(ಪತ್ರಿಕೆ) ಸಂಪ್ರಬಂಧ ಮತ್ತು ಪ್ರವಾಸ ವರದಿಯನ್ನು ಒಳಗೊಂಡಿರುತ್ತದೆ. ಸ್ನಾತಕೋತ್ತರ ಡಿಪ್ಲೊಮ ಅಭ್ಯರ್ಥಿಗಳು ಕನಿಷ್ಠ ೩೦ ಪುಟಗಳ ಸಂಪ್ರಬಂಧ ಮತ್ತು ಕನಿಷ್ಠ ೩೦ ಪುಟಗಳ ಪ್ರವಾಸ ವರದಿಯನ್ನು ಸಲ್ಲಿಸುವುದು ಕಡ್ಡಾಯ. ಈ ಸಂಪ್ರಬಂಧ ಮತ್ತು ಪ್ರವಾಸ ವರದಿಗಳು ಎ೪ ಅಳತೆಯ ಪ್ರತಿ ಹಾಳೆಯಲ್ಲಿ ೩೦ ಸಾಲುಗಳನ್ನು ಡಿಟಿಪಿ ಮಾಡಿರಬೇಕು. ಒಟ್ಟಾರೆ ೬೦ ಪುಟಗಳ ವರದಿಯನ್ನು ಒಂದರಲ್ಲೇ ಬೈಂಡ್ ಮಾಡಿಸಿ ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ನಿಗದಿತ ದಿನಾಂಕದೊಳಗೆ ಮೌಲ್ಯಮಾಪನಕ್ಕಾಗಿ ೨ ಪ್ರತಿಗಳಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮೂಲಕ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

ಡಿಪ್ಲೊಮ ಅಭ್ಯರ್ಥಿಗಳು ಕನಿಷ್ಠ ೨೦ ಪುಟಗಳ ಸಂಪ್ರಬಂಧ ಮತ್ತು ಕನಿಷ್ಠ ೨೦ ಪುಟಗಳ ಪ್ರವಾಸ ವರದಿಯನ್ನು ಸಲ್ಲಿಸುವುದು ಕಡ್ಡಾಯ. ಈ ಸಂಪ್ರಬಂಧ ಮತ್ತು ಪ್ರವಾಸ ವರದಿಗಳು ಎ೪ ಅಳತೆಯ ಪ್ರತಿ ಹಾಳೆಯಲ್ಲಿ ೩೦ ಸಾಲುಗಳನ್ನು ಡಿಟಿಪಿ ಮಾಡಿರಬೇಕು. ಒಟ್ಟಾರೆ ೪೦ ಪುಟಗಳ ವರದಿಯನ್ನು ಒಂದರಲ್ಲೇ ಬೈಂಡ್ ಮಾಡಿಸಿ ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ೨ ಪ್ರತಿಗಳಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮೂಲಕ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

ದೂರಶಿಕ್ಷಣ ನಿರ್ದೇಶನಾಲಯದ ಮಾರ್ಗದರ್ಶನದ ಮೇರೆಗೆ ಅಭ್ಯರ್ಥಿಯು ಕರ್ನಾಟಕದ ಸ್ಮಾರಕ, ಪ್ರಕೃತಿದತ್ತ ಪ್ರವಾಸಿತಾಣ, ಸಾಹಸ ಕ್ರೀಡೆ ಮುಂತಾದ ಯಾವುದಾದರೊಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಕ್ಷೇತ್ರಕಾರ್ಯ ಮಾಡಿ ಅಧ್ಯಯನ ಕೈಗೊಂಡು ಸಂಪ್ರಬಂಧ ರಚಿಸಬೇಕು.

ಸಂಪ್ರಬಂಧ ಮತ್ತು ಪ್ರವಾಸ ವರದಿಗೆ ಸಂಬಂಧಿಸಿದ ವಿಷಯವನ್ನು ಸಂಪರ್ಕ ಕಾರ್ಯಕ್ರಮದ ಒಳಗಾಗಿ ಅಥವಾ ಸಂಪರ್ಕ ಕಾರ್ಯಕ್ರಮ ಸಂದರ್ಭದಲ್ಲಿ ತಜ್ಞ/ಬೋಧಕರೊಂದಿಗೆ ಅಥವಾ ಅಧ್ಯಯನ ಮಂಡಳಿಯವರೊಂದಿಗೆ ಚರ್ಚಿಸಿ ಖಚಿತಪಡಿಸಿಕೊಂಡು ದೂರಶಿಕ್ಷಣಕ್ಕೆ ತಿಳಿಸಬೇಕು.

## ೨.೨.೨ ಮಹಿಳಾ ಅಧ್ಯಯನ

### ಕೋರ್ಸ್ ಮತ್ತು ನಿಯಮಗಳು

| ಕೋರ್ಸ್ ಸಂಕೇತ | ಕೋರ್ಸಿನ ಶೀರ್ಷಿಕೆ | ಅಂಕಗಳು | | | |
|---|---|---|---|---|---|
| | | ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
| ೦೫A | ೧. ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು | ೬ | ೯೦ | ೧೦ | ೧೦೦ |
| ೦೫B | ೨. ಮಹಿಳೆ ಸಮಾಜ ಮತ್ತು ಸಂಸ್ಕೃತಿ | ೬ | ೯೦ | ೧೦ | ೧೦೦ |
| ೦೫C | ೩. ಮಹಿಳೆ ಕಾನೂನು ಮತ್ತು ರಾಜಕಾರಣ | ೬ | ೯೦ | ೧೦ | ೧೦೦ |
| ೦೫D | ೪. ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ | ೬ | ೯೦ | ೧೦ | ೧೦೦ |
| ೦೫E | ೫.ಅ. ಸಂಪ್ರಬಂಧ | ೩ | – | ೫೦ | ೫೦ |
| | ೫.ಆ. ವಿಷಯ/ವ್ಯಕ್ತಿ ಅಧ್ಯಯನ ವರದಿ | ೩ | – | ೫೦ | ೫೦ |
| | ಒಟ್ಟು | ೩೦ | ೩೬೦ | ೧೪೦ | ೫೦೦ |

**ಸಂಪ್ರಬಂಧ, ವರದಿ**

೦೫E ಕೋರ್ಸು(ಪತ್ರಿಕೆ) ಸಂಪ್ರಬಂಧ ಮತ್ತು ವಿಷಯ/ವ್ಯಕ್ತಿ ಅಧ್ಯಯನ ವರದಿಯನ್ನು ಒಳಗೊಂಡಿರುತ್ತದೆ. ಸ್ನಾತಕೋತ್ತರ ಡಿಪ್ಲೊಮ ಅಭ್ಯರ್ಥಿಗಳು ಕನಿಷ್ಠ ೩೦ ಪುಟಗಳ ಸಂಪ್ರಬಂಧ ಮತ್ತು ಕನಿಷ್ಠ ೩೦ ಪುಟಗಳ ವಿಷಯ/ವ್ಯಕ್ತಿ ಅಧ್ಯಯನ ವರದಿಯನ್ನು ಸಲ್ಲಿಸುವುದು ಕಡ್ಡಾಯ. ಈ ಸಂಪ್ರಬಂಧ ಮತ್ತು ವಿಷಯ/ವ್ಯಕ್ತಿ ಅಧ್ಯಯನ ವರದಿಗಳು ಎಳ ಅಳತೆಯ ಪ್ರತಿ ಹಾಳೆಯಲ್ಲಿ ೩೦ ಸಾಲುಗಳನ್ನು ಡಿಟಿಪಿ ಮಾಡಿರಬೇಕು. ಒಟ್ಟಾರೆ ೬೦ ಪುಟಗಳ ವರದಿಯನ್ನು ಒಂದರಲ್ಲೇ ಬೈಂಡ್ ಮಾಡಿಸಿ ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ೨ ಪ್ರತಿಗಳಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮೂಲಕ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

ಡಿಪ್ಲೊಮ ಅಭ್ಯರ್ಥಿಗಳು  ಕನಿಷ್ಠ ೨೦ ಪುಟಗಳ ಸಂಪ್ರಬಂಧ ಮತ್ತು ಕನಿಷ್ಠ ೨೦ ಪುಟಗಳ ವಿಷಯ/ವ್ಯಕ್ತಿ ಅಧ್ಯಯನ ವರದಿಯನ್ನು ಸಲ್ಲಿಸುವುದು ಕಡ್ಡಾಯ. ಈ ಸಂಪ್ರಬಂಧ ಮತ್ತು ವಿಷಯ/ವ್ಯಕ್ತಿ ಅಧ್ಯಯನ ವರದಿಗಳು ಎಳ ಅಳತೆಯ ಪ್ರತಿ ಹಾಳೆಯಲ್ಲಿ ೩೦ ಸಾಲುಗಳನ್ನು ಡಿಟಿಪಿ ಮಾಡಿರಬೇಕು. ಒಟ್ಟಾರೆ ೪೦ ಪುಟಗಳ ವರದಿಯನ್ನು ಒಂದರಲ್ಲೇ ಬೈಂಡ್ ಮಾಡಿಸಿ ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ೨ ಪ್ರತಿಗಳಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮೂಲಕ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

ದೂರಶಿಕ್ಷಣ ನಿರ್ದೇಶನಾಲಯದ ಮಾರ್ಗದರ್ಶನದ ಮೇರೆಗೆ ಅಭ್ಯರ್ಥಿಯು ಸಮಾಜದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಹಿಳಾ ವಿಷಯಗಳನ್ನು ಸಂಪ್ರಬಂಧ ರಚನೆಗೆ ಆಯ್ಕೆ ಮಾಡಿಕೊಳ್ಳಬೇಕು. ಮಹಿಳಾ ಅಧ್ಯಯನವು ಮುಖ್ಯವಾಗಿ ಬಹುಶಿಸ್ತೀಯ ಅಧ್ಯಯನ ಎಂಬುದನ್ನು ಗಮನಿಸಿ, ಯಾವುದೇ ಜ್ಞಾನಕ್ಷೇತ್ರಕ್ಕೆ ಸಂಬಂಧಿಸಿದ ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಕೈಗೊಳ್ಳಬಹುದು.

ಸಂಪ್ರಬಂಧ ಮತ್ತು ವಿಷಯ/ವ್ಯಕ್ತಿ ಅಧ್ಯಯನ ವರದಿಗೆ ಸಂಬಂಧಿಸಿದ ವಿಷಯವನ್ನು ಸಂಪರ್ಕ ಕಾರ್ಯಕ್ರಮದ ಒಳಗಾಗಿ ಅಥವಾ ಸಂಪರ್ಕ ಕಾರ್ಯಕ್ರಮ ಸಂದರ್ಭದಲ್ಲಿ ತಜ್ಞ/ಬೋಧಕರೊಂದಿಗೆ ಅಥವಾ ಅಧ್ಯಯನ ಮಂಡಳಿಯವ ರೊಂದಿಗೆ ಚರ್ಚಿಸಿ ಖಚಿತಪಡಿಸಿಕೊಂಡು ದೂರಶಿಕ್ಷಣಕ್ಕೆ ತಿಳಿಸಬೇಕು.

## ೨.೨.೩. ಪತ್ರಿಕೋದ್ಯಮ ಅಧ್ಯಯನ

**ಕೋರ್ಸ್ ಮತ್ತು ನಿಯಮಗಳು**

| ಕೋರ್ಸ್ ಸಂಕೇತ | ಕೋರ್ಸಿನ ಶೀರ್ಷಿಕೆ | ಅಂಕಗಳು ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
|---|---|---|---|---|---|
| ೦೮A | ೧. ಸಮೂಹ ಮಾಧ್ಯಮಗಳ ಪರಿಚಯ | ೬ | ೯೦ | ೧೦ | ೧೦೦ |
| ೦೮B | ೨. ವರದಿಗಾರಿಕೆ | ೬ | ೯೦ | ೧೦ | ೧೦೦ |
| ೦೮C | ೩. ಸುದ್ದಿ ಸಂಪಾದನೆ | ೬ | ೯೦ | ೧೦ | ೧೦೦ |
| ೦೮D | ೪. ಅಭಿವೃದ್ಧಿ ಪತ್ರಿಕೋದ್ಯಮ | ೬ | ೯೦ | ೧೦ | ೧೦೦ |
| ೦೮E | ೫. ಪ್ರಾಯೋಗಿಕ | | | | |
| | ಅ. ಪತ್ರಿಕೆ ಪ್ರಕಟಣೆ | ೨ | – | ೨೫ | ೨೫ |
| | ಆ. ನಿಯತಕಾಲಿಕೆ ಪ್ರಕಟಣೆ | ೨ | – | ೨೫ | ೨೫ |
| | ಇ. ಸಂಪಾದನೆ | ೧ | – | ೨೫ | ೨೫ |
| | ಈ. ಮೌಖಿಕ ಪರೀಕ್ಷೆ | ೧ | – | ೨೫ | ೨೫ |
| | ಒಟ್ಟು | ೩೦ | ೩೬೦ | ೧೪೦ | ೫೦೦ |

**ಪ್ರಾಯೋಗಿಕ**

೦೮E ಕೋರ್ಸು(ಪತ್ರಿಕೆ) ಪ್ರಾಯೋಗಿಕವಾಗಿದ್ದು ಕಡ್ಡಾಯವಾಗಿರುತ್ತದೆ. ಇದು ಪತ್ರಿಕೆ ಪ್ರಕಟಣೆ, ನಿಯತಕಾಲಿಕೆ ಪ್ರಕಟಣೆ, ಸಂಪಾದನೆ ಮತ್ತು ಮೌಖಿಕ ಪರೀಕ್ಷೆಗಳನ್ನು ಒಳಗೊಂಡಿರುತ್ತದೆ. ಡಿಪ್ಲೊಮ ವಿದ್ಯಾರ್ಥಿಗಳಿಗೆ ಈ ಪರೀಕ್ಷೆಗಳು ಸರಳವಾಗಿರುವವು. ಸಂಪರ್ಕ ಕಾರ್ಯಕ್ರಮದ ಸಂದರ್ಭದಲ್ಲಿ ಈ ಎಲ್ಲ ಪ್ರಯೋಗಗಳು ಜರುಗುವವು.

## ೨.೨.೪. ನಾಟಕ ಕಲೆ

**ಕೋರ್ಸ್ ಮತ್ತು ನಿಯಮಗಳು**

| ಕೋರ್ಸ್ ಸಂಕೇತ | ಕೋರ್ಸಿನ ಶೀರ್ಷಿಕೆ | ಅಂಕಗಳು ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
|---|---|---|---|---|---|
| ೧೧A | ೧. ಆಂಗಿಕ ಮತ್ತು ವಾಚಿಕ (ದೇಹ ಮತ್ತು ಧ್ವನಿ) | ೬ | ೯೦ | ೧೦ | ೧೦೦ |
| ೧೧B | ೨. ಆಹಾರ್ಯ (ತಂತ್ರಕೌಶಲ) | ೬ | ೯೦ | ೧೦ | ೧೦೦ |
| ೧೧C | ೩. ಸಾತ್ವಿಕ (ಸೈದ್ಧಾಂತಿಕ ಚಿಂತನೆಗಳು) | ೬ | ೯೦ | ೧೦ | ೧೦೦ |
| ೧೧D | ೪. ಕನ್ನಡ ಸಾಹಿತ್ಯ ಮತ್ತು ನಾಟಕ ಪ್ರಜ್ಞೆ | ೬ | ೯೦ | ೧೦ | ೧೦೦ |
| ೧೧E | ೫.ಅ. ಪ್ರಯೋಗ | ೨ | – | ೫೦ | ೫೦ |
| | ೫.ಆ. ಮೌಖಿಕ ಪರೀಕ್ಷೆ | ೨ | – | ೨೫ | ೨೫ |
| | ೫.ಇ. ಸಂಪ್ರಬಂಧ | ೨ | – | ೨೫ | ೨೫ |
| | ಒಟ್ಟು | ೩೦ | ೩೬೦ | ೧೪೦ | ೫೦೦ |

**ಪ್ರಯೋಗ, ಸಂಪ್ರಬಂಧ ವರದಿ**

೧೧E ಕೋರ್ಸು(ಪತ್ರಿಕೆ) ೫೦ ಅಂಕಗಳ ಪ್ರಯೋಗ ಮತ್ತು ಎಳ ಅಳತೆಯ ಕನಿಷ್ಠ

೧೫ ಮತ್ತು ೨೫ ಪುಟಗಳ ೨೫ ಅಂಕಗಳ ಸಂಪ್ರಬಂಧ ಹಾಗೂ ೨೫ ಅಂಕಗಳ ಮೌಖಿಕ ಪರೀಕ್ಷೆಯನ್ನು ಒಳಗೊಂಡಿರುತ್ತದೆ.

ದೂರಶಿಕ್ಷಣ ನಿರ್ದೇಶನಾಲಯದ ಮಾರ್ಗದರ್ಶನದ ಮೇರೆಗೆ ಅಭ್ಯರ್ಥಿಯು ವಿವಿಧ ನಾಟಕಗಳಿಗೆ ಸಂಬಂಧಿಸಿದಂತೆ ವಿಷಯಗಳನ್ನು ಪ್ರಯೋಗ ಮತ್ತು ಸಂಪ್ರಬಂಧ ರಚನೆಗೆ ಆಯ್ಕೆ ಮಾಡಿಕೊಳ್ಳಬೇಕು. ನಾಟಕ ಕಲೆ ಅಧ್ಯಯನವು ಮುಖ್ಯವಾಗಿ ಬಹುಶಿಸ್ತೀಯ ಅಧ್ಯಯನ ಎಂಬುದನ್ನು ಗಮನಿಸಿ, ಯಾವುದೇ ಜ್ಞಾನಕ್ಷೇತ್ರಕ್ಕೆ ಸಂಬಂಧಿಸಿದ ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಕೈಗೊಳ್ಳಬಹುದು.

ಸಂಪ್ರಬಂಧ ಮತ್ತು ಪ್ರಯೋಗ ವಿಷಯಕ್ಕೆ ಸಂಬಂಧಿಸಿದ ವಿಷಯವನ್ನು ಸಂಪರ್ಕ ಕಾರ್ಯಕ್ರಮದ ಒಳಗಾಗಿ ಅಥವಾ ಸಂಪರ್ಕ ಕಾರ್ಯಕ್ರಮ ಸಂದರ್ಭದಲ್ಲಿ ತಜ್ಞ/ಬೋಧಕರೊಂದಿಗೆ ಅಥವಾ ಅಧ್ಯಯನ ಮಂಡಳಿಯವರೊಂದಿಗೆ ಚರ್ಚಿಸಿ ಖಚಿತಪಡಿಸಿಕೊಂಡು ದೂರಶಿಕ್ಷಣ ನಿರ್ದೇಶನಾಲಯಕ್ಕೆ ತಿಳಿಸಬೇಕು. ಸಂಪ್ರಬಂಧದ ಎಳಿ ಅಳತೆಯ ಡಿಟಿಪಿ ಮಾಡಿದ ಕನಿಷ್ಠ ೨೫ ಪುಟಗಳ ವರದಿಯನ್ನು ಸ್ನಾತಕೋತ್ತರ ಡಿಪ್ಲೊಮ ಮತ್ತು ೧೫ ಪುಟಗಳ ವರದಿಯನ್ನು ಡಿಪ್ಲೊಮ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ೨ ಪ್ರತಿಗಳಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮೂಲಕ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು. ಸಂಪರ್ಕ ಕಾರ್ಯಕ್ರಮ ಸಂದರ್ಭದಲ್ಲಿಯೇ ಪ್ರಯೋಗ ಮತ್ತು ಮೌಖಿಕ ಪರೀಕ್ಷೆಗಳು ಜರುಗುವುವು.

## ೨.೨.೫. ಭಾಷಾಂತರ ಅಧ್ಯಯನ

### ಕೋರ್ಸ್ ಮತ್ತು ನಿಯಮಗಳು

| ಕೋರ್ಸ್ | ಕೋರ್ಸಿನ ಶೀರ್ಷಿಕೆ | ಅಂಕಗಳು | | | |
|---|---|---|---|---|---|
| ಸಂಕೇತ | | ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
| ೧೪A | ೧. ಭಾಷಾಂತರ ಅಧ್ಯಯನ ಸಿದ್ಧಾಂತ ಮತ್ತು ವಾಗ್ವಾದಗಳು | ೬ | ೯೦ | ೧೦ | ೧೦೦ |
| ೧೧B | ೨. ಭಾರತ, ಬಹುಭಾಷಿಕತೆ, ಭಾಷಾಂತರ | ೬ | ೯೦ | ೧೦ | ೧೦೦ |
| ೧೧C | ೩. ಮಾಧ್ಯಮ ಮತ್ತು ಭಾಷಾಂತರ | ೬ | ೯೦ | ೧೦ | ೧೦೦ |
| ೧೧D | ೪. ಭಾಷಾಂತರ ವಿವಿಧ ನೆಲೆಗಳು | ೬ | ೯೦ | ೧೦ | ೧೦೦ |
| ೧೧E | ೫ ಪ್ರಾಯೋಗಿಕ ಭಾಷಾಂತರ | | | | |
| | ೫.ಅ. ಯೋಜನೆ | ೨ | – | ೬೦ | ೬೦ |
| | ೫.ಆ. ಯೋಜನೆ ವಿಶ್ಲೇಷಣೆ | ೨ | – | ೨೦ | ೨೦ |
| | ೫.ಇ. ಮೌಖಿಕ ಪರೀಕ್ಷೆ | ೨ | – | ೨೦ | ೨೦ |
| | **ಒಟ್ಟು** | ೩೦ | ೩೬೦ | ೧೪೦ | ೫೦೦ |

ರಾಜ್ಯ ಮತ್ತು ರಾಷ್ಟ್ರದ ಗಡಿಗಳನ್ನು ಮೀರಿ ಇಂದಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕ್ರಿಯೆಗಳು ಸಾಗುತ್ತಿವೆ. ಈ ಸಂದರ್ಭದಲ್ಲಿ ಹಲವು ಭಾಷೆ, ಸಂಸ್ಕೃತಿಗಳ ರಾಷ್ಟ್ರ, ರಾಜ್ಯಗಳ ನಡುವೆ ಸಂಪರ್ಕಕೊಂಡಿಯಾಗಿ ಭಾಷಾಂತರ ಕ್ರಿಯೆ ಕೆಲಸ ಮಾಡುತ್ತದೆ. ದೈನಂದಿನ ವ್ಯವಹಾರಗಳ ನಡುವೆಯೂ ಅಪ್ರಜ್ಞಾಪೂರ್ವಕವಾಗಿ ಭಾಷಾಂತರ ಪ್ರಕ್ರಿಯೆ

ನಡೆಯುತ್ತಲೇ ಇರುತ್ತದೆ. ಈ ಪ್ರಕ್ರಿಯೆಯನ್ನು ಕುರಿತು ಗಮನಹರಿಸದೇ ಇರುವುದರಿಂದ ಅನೇಕ ವೇಳೆ ಭಾಷಾಂತರ ಕ್ರಿಯೆ ತನ್ನ ಪೋಷಕ ಉದ್ದೇಶಗಳ ಗುರಿಯತ್ತ ತಲುಪುವುದೇ ಇಲ್ಲ. ಹಾಗಾಗಿ ಇಂತಹ ಭಾಷಾಂತರ ಪ್ರಕ್ರಿಯೆಗಳನ್ನು ಪ್ರಜ್ಞಾಪೂರ್ವಕವಾಗಿ ಗುರುತಿಸಿ ಆ ಮೂಲಕ ಭಾಷಾಂತರ ಕ್ರಿಯೆಯ ಉದ್ದೇಶಗಳನ್ನು ಈಡೇರಿಸಿಕೊಳ್ಳುವತ್ತ ಗಮನಹರಿಸುವುದು ಅಗತ್ಯವಿದೆ. ಹಲವು ಭಾಷೆಗಳ ನಡುವೆ ಸಂವಹನ ಏರ್ಪಡಬೇಕಾದ ಇಂದಿನ ದಿನಗಳಲ್ಲಿ ಭಾಷಾಂತರ ಪ್ರಕ್ರಿಯೆಗಳಿಗೆ ಅತ್ಯಂತ ಪ್ರಾಶಸ್ತ್ಯವಿದೆ. ಭಾಷಾಂತರ ಅಧ್ಯಯನ ಡಿಪ್ಲೊಮಾವನ್ನು ಪಡೆದು ಭಾಷಾಂತರ ಕೆಲಸ ನಿರ್ವಹಿಸಲು ಸಮರ್ಥರಾಗುವ ಅಭ್ಯರ್ಥಿಗಳಿಗೆ ಕೇಂದ್ರ, ರಾಜ್ಯ ಸರಕಾರಗಳ ವಿವಿಧ ಇಲಾಖೆಗಳಲ್ಲಿ, ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗದ ಅವಕಾಶ ವಿಪುಲವಾಗಿದೆ. ಹಾಗೆಯೇ ವಿವಿಧ ಮಾಧ್ಯಮಗಳಲ್ಲಿ ಕೆಲಸ ಮಾಡುವ ಆಸಕ್ತರು ಹಾಗೂ ಭಾಷಾಂತರ ಕೆಲಸಗಳಲ್ಲಿ ತೊಡಗಿಸಿಕೊಳ್ಳಲು ಇಚ್ಛಿಸುವವರನ್ನು ದೃಷ್ಟಿಯಲ್ಲಿರಿಸಿಕೊಂಡು ಭಾಷಾಂತರ ಅಧ್ಯಯನ ಡಿಪ್ಲೊಮಾವನ್ನು ಆರಂಭಿಸಿದೆ.

**ಪ್ರಯೋಗ, ಸಂಪ್ರಬಂಧ ವರದಿ**

ಈ ಕೋರ್ಸ್‌ನಲ್ಲಿ ಐದು ಪತ್ರಿಕೆಗಳು ಇರುತ್ತವೆ. ಪ್ರತಿ ಪತ್ರಿಕೆಗೆ ೧೦೦ ಅಂಕಗಳು. ಇವುಗಳಲ್ಲಿ ನಾಲ್ಕು ಪತ್ರಿಕೆಗಳಿಗೆ ೮೦ ಅಂಕಗಳ ಲಿಖಿತ ಪರೀಕ್ಷೆ ಮತ್ತು ೨೦ ಅಂಕಗಳ ಮನೆಗೆಲಸ ಇರುತ್ತದೆ. ಪಾಠಗಳೊಂದಿಗೆ ಕಳಿಸುವ ಅಭ್ಯಾಸಗಳನ್ನು ಪೂರ್ಣಗೊಳಿಸಿ ಹಿಂತಿರುಗಿಸುವುದು, ನೇರ ಸಂಪರ್ಕ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಹಾಗೂ ನಿಗದಿತ ಚಟುವಟಿಕೆಗಳಲ್ಲಿ ಕ್ರಮಬದ್ಧವಾಗಿ ತೊಡಗಿಸಿಕೊಳ್ಳುವುದು – ಇವು ಆಂತರಿಕ ಮೌಲ್ಯಮಾಪನಕ್ಕೆ ಆಧಾರಗಳಾಗಿರುತ್ತವೆ. ಐದನೆಯ ಪತ್ರಿಕೆಯಲ್ಲಿ ಸಂಪ್ರಬಂಧಗಳನ್ನು ರಚಿಸಿಕೊಡಬೇಕಾಗಿರುತ್ತದೆ. ಭಾಷಾಂತರ ಯೋಜನೆಗೆ ೬೦ ಅಂಕಗಳು, ಯೋಜನೆಯ ವಿಶ್ಲೇಷಣೆಗೆ ೨೦ ಅಂಕಗಳು ಹಾಗೂ ಮೌಖಿಕ ಪರೀಕ್ಷೆಗೆ ೨೦ ಅಂಕಗಳು ಹೀಗೆ ಒಟ್ಟು ೧೦೦ ಅಂಕಗಳು ಇರುತ್ತವೆ.

## ೨.೨.೬ ಕನ್ನಡ ಸಾಹಿತ್ಯ

**ಕೋರ್ಸ್ ಮತ್ತು ನಿಯಮಗಳು**

| ಕೋರ್ಸ್ ಸಂಕೇತ | ಕೋರ್ಸಿನ ಶೀರ್ಷಿಕೆ | ಅಂಕಗಳು: ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
|---|---|---|---|---|---|
| ೧೬A | ೧. ಚಂಪೂ ಸಾಹಿತ್ಯ | ೬ | ೯೦ | ೧೦ | ೧೦೦ |
| ೧೬B | ೨. ಭಕ್ತಿ ಸಾಹಿತ್ಯ | ೬ | ೯೦ | ೧೦ | ೧೦೦ |
| ೧೬C | ೩. ಮಧ್ಯಕಾಲೀನ ಕನ್ನಡ ಸಾಹಿತ್ಯ | ೬ | ೯೦ | ೧೦ | ೧೦೦ |
| ೧೬D | ೪. ಸಾಹಿತ್ಯಧ್ಯಯನ ಸಾಮಗ್ರಿ | ೬ | ೯೦ | ೧೦ | ೧೦೦ |
| ೧೬E | ೫.ಅ ಸಂಪ್ರಬಂಧ | ೩ | – | ೫೦ | ೫೦ |
| | ೫.ಆ ವಿಷಯ/ವ್ಯಕ್ತಿ ಅಧ್ಯಯನ ವರದಿ | ೩ | – | ೫೦ | ೫೦ |
| | **ಒಟ್ಟು** | **೩೦** | **೩೬೦** | **೧೪೦** | **೫೦೦** |

## ಸಂಪ್ರಬಂಧ ವರದಿ

೧೬E ಕೋರ್ಸು(ಪತ್ರಿಕೆ) ಸಂಪ್ರಬಂಧ ಮತ್ತು ವಿಷಯ/ವ್ಯಕ್ತಿ ಅಧ್ಯಯನ ವರದಿಯನ್ನು ಒಳಗೊಂಡಿರುತ್ತದೆ. ಸ್ನಾತಕೋತ್ತರ ಡಿಪ್ಲೊಮ ಅಭ್ಯರ್ಥಿಗಳು ಕನಿಷ್ಠ ೩೦ ಪುಟಗಳ ಸಂಪ್ರಬಂಧ ಮತ್ತು ಕನಿಷ್ಠ ೩೦ ಪುಟಗಳ ವಿಷಯ/ವ್ಯಕ್ತಿ ಅಧ್ಯಯನ ವರದಿಯನ್ನು ಸಲ್ಲಿಸುವುದು ಕಡ್ಡಾಯ. ಈ ಸಂಪ್ರಬಂಧ ಮತ್ತು ವಿಷಯ/ವ್ಯಕ್ತಿ ಅಧ್ಯಯನ ವರದಿಗಳು ಎ೪ ಅಳತೆಯ ಪ್ರತಿ ಹಾಳೆಯಲ್ಲಿ ೩೦ ಸಾಲುಗಳನ್ನು ಡಿಟಿಪಿ ಮಾಡಿರಬೇಕು. ಒಟ್ಟಾರೆ ೬೦ ಪುಟಗಳ ಬರವಣಿಗೆಯನ್ನು ಒಂದರಲ್ಲೇ ಬೈಂಡ್ ಮಾಡಿಸಿ ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ೨ ಪ್ರತಿಗಳಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮೂಲಕ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

ಡಿಪ್ಲೊಮ ಅಭ್ಯರ್ಥಿಗಳು ಕನಿಷ್ಠ ೨೦ ಪುಟಗಳ ಸಂಪ್ರಬಂಧ ಮತ್ತು ಕನಿಷ್ಠ ೨೦ ಪುಟಗಳ ವಿಷಯ/ವ್ಯಕ್ತಿ ಅಧ್ಯಯನ ವರದಿಯನ್ನು ಸಲ್ಲಿಸುವುದು ಕಡ್ಡಾಯ. ಈ ಸಂಪ್ರಬಂಧ ಮತ್ತು ವಿಷಯ/ವ್ಯಕ್ತಿ ಅಧ್ಯಯನ ವರದಿಗಳು ಎ೪ ಅಳತೆಯ ಪ್ರತಿ ಹಾಳೆಯಲ್ಲಿ ೩೦ ಸಾಲುಗಳನ್ನು ಡಿಟಿಪಿ ಮಾಡಿರಬೇಕು. ಒಟ್ಟಾರೆ ೪೦ ಪುಟಗಳ ಬರವಣಿಗೆಯನ್ನು ಒಂದರಲ್ಲೇ ಬೈಂಡ್ ಮಾಡಿಸಿ ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ೨ ಪ್ರತಿಗಳಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮೂಲಕ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು. ದೂರಶಿಕ್ಷಣ ನಿರ್ದೇಶನಾಲಯದ ಮಾರ್ಗದರ್ಶನದ ಮೇರೆಗೆ ಅಭ್ಯರ್ಥಿಯು ಸಮಾಜದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ವಿಷಯಗಳನ್ನು ಸಂಪ್ರಬಂಧ ರಚನೆಗೆ ಆಯ್ಕೆ ಮಾಡಿಕೊಳ್ಳಬೇಕು.

ಸಂಪ್ರಬಂಧ ಮತ್ತು ವಿಷಯ/ವ್ಯಕ್ತಿ ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ವಿಷಯವನ್ನು ಸಂಪರ್ಕ ಕಾರ್ಯಕ್ರಮದ ಒಳಗಾಗಿ ಅಥವಾ ಸಂಪರ್ಕ ಕಾರ್ಯಕ್ರಮ ಸಂದರ್ಭದಲ್ಲಿ ತಜ್ಞ/ಬೋಧಕರೊಂದಿಗೆ ಅಥವಾ ಅಧ್ಯಯನ ಮಂಡಳಿಯವರೊಂದಿಗೆ ಚರ್ಚಿಸಿ ಖಚಿತಪಡಿಸಿಕೊಂಡು ದೂರಶಿಕ್ಷಣ ನಿರ್ದೇಶನಾಲಯಕ್ಕೆ ತಿಳಿಸಬೇಕು.

## ೨.೨.೭ ಶಾಸನಶಾಸ್ತ್ರ ಅಧ್ಯಯನ

### ಕೋರ್ಸ್ ಮತ್ತು ನಿಯಮಗಳು

| ಕೋರ್ಸ್ | ಕೋರ್ಸಿನ ಶೀರ್ಷಿಕೆ | ಅಂಕಗಳು | | | |
|---|---|---|---|---|---|
| ಸಂಕೇತ | | ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
| ೧೯A | ೧. ಶಾಸನಶಾಸ್ತ್ರ ಲಿಪಿಶಾಸ್ತ್ರ ಪರಿಚಯ | ೬ | ೯೦ | ೧೦ | ೧೦೦ |
| ೧೯B | ೨. ಕನ್ನಡ ಲಿಪಿಯ ಹುಟ್ಟು ಮತ್ತು ಬೆಳವಣಿಗೆ | ೬ | ೯೦ | ೧೦ | ೧೦೦ |
| ೧೯C | ೩. ಕರ್ನಾಟಕ ಶಾಸನಗಳ ಪರಿಚಯ | ೬ | ೯೦ | ೧೦ | ೧೦೦ |
| ೧೯D | ೪. ಆಯ್ದ ಶಾಸನಗಳ ಪಠ್ಯ | ೬ | ೯೦ | ೧೦ | ೧೦೦ |
| ೧೯E | ೫.ಅ. ಸಂಪ್ರಬಂಧ | ೩ | – | ೫೦ | ೫೦ |
| | ೫.ಆ. ವಿಷಯ/ವ್ಯಕ್ತಿ ಅಧ್ಯಯನ ವರದಿ | ೩ | – | ೫೦ | ೫೦ |
| | **ಒಟ್ಟು** | **೩೦** | **೩೬೦** | **೧೪೦** | **೫೦೦** |

**ಸಂಪ್ರಬಂಧ ವರದಿ**

೧೯E ಕೋರ್ಸು(ಪತ್ರಿಕೆ) ಸಂಪ್ರಬಂಧ ಮತ್ತು ವಿಷಯ/ವ್ಯಕ್ತಿ ಅಧ್ಯಯನ ವರದಿಯನ್ನು ಒಳಗೊಂಡಿರುತ್ತದೆ. ಸ್ನಾತಕೋತ್ತರ ಡಿಪ್ಲೊಮ ಅಭ್ಯರ್ಥಿಗಳು ಕನಿಷ್ಠ ೩೦ ಪುಟಗಳ ಸಂಪ್ರಬಂಧ ಮತ್ತು ಕನಿಷ್ಠ ೩೦ ಪುಟಗಳ ವಿಷಯ/ವ್ಯಕ್ತಿ ಅಧ್ಯಯನ ವರದಿಯನ್ನು ಸಲ್ಲಿಸುವುದು ಕಡ್ಡಾಯ. ಈ ಸಂಪ್ರಬಂಧ ಮತ್ತು ವಿಷಯ/ವ್ಯಕ್ತಿ ಅಧ್ಯಯನ ವರದಿಗಳು ಎ೪ ಅಳತೆಯ ಪ್ರತಿ ಹಾಳೆಯಲ್ಲಿ ೩೦ ಸಾಲುಗಳನ್ನು ಡಿಟಿಪಿ ಮಾಡಿರಬೇಕು. ಒಟ್ಟಾರೆ ೬೦ ಪುಟಗಳ ವರದಿಯನ್ನು ಒಂದರಲ್ಲೇ ಬೈಂಡ್ ಮಾಡಿಸಿ ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ೨ ಪ್ರತಿಗಳಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮೂಲಕ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

ಡಿಪ್ಲೊಮ ಅಭ್ಯರ್ಥಿಗಳು ಕನಿಷ್ಠ ೨೦ ಪುಟಗಳ ಸಂಪ್ರಬಂಧ ಮತ್ತು ಕನಿಷ್ಠ ೨೦ ಪುಟಗಳ ವಿಷಯ/ವ್ಯಕ್ತಿ ಅಧ್ಯಯನ ವರದಿಯನ್ನು ಸಲ್ಲಿಸುವುದು ಕಡ್ಡಾಯ. ಈ ಸಂಪ್ರಬಂಧ ಮತ್ತು ವಿಷಯ/ವ್ಯಕ್ತಿ ಅಧ್ಯಯನ ವರದಿಗಳು ಎ೪ ಅಳತೆಯ ಪ್ರತಿ ಹಾಳೆಯಲ್ಲಿ ೩೦ ಸಾಲುಗಳನ್ನು ಡಿಟಿಪಿ ಮಾಡಿರಬೇಕು. ಒಟ್ಟಾರೆ ೪೦ ಪುಟಗಳ ವರದಿಯನ್ನು ಒಂದರಲ್ಲೇ ಬೈಂಡ್ ಮಾಡಿಸಿ ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ೨ ಪ್ರತಿಗಳಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮೂಲಕ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

ದೂರಶಿಕ್ಷಣ ನಿರ್ದೇಶನಾಲಯದ ಮಾರ್ಗದರ್ಶನದ ಮೇರೆಗೆ ಅಭ್ಯರ್ಥಿಯು ಕ್ಷೇತ್ರಕಾರ್ಯ ಮಾಡಿ ಯಾವುದಾದರೂ ಹೊಸ ಶಾಸನಗಳನ್ನು ಹುಡುಕಿ ಅಥವಾ ಪ್ರಕಟವಾಗಿರುವ ಶಾಸನಗಳನ್ನು ಪುನರ್ ಪರಿಶೀಲಿಸಿ, ಅಭ್ಯರ್ಥಿಯ ವಾಸಸ್ಥಳದ ಪರಿಸರದಲ್ಲಿನ ಸ್ಮಾರಕ ಶಿಲೆಗಳನ್ನು, ಶಾಸನಗಳನ್ನು ಕುರಿತು ಅಥವಾ ಯಾವುದಾದರೂ ಶಾಸನದ ಮಹತ್ವವನ್ನು ಶಾಸನಶಾಸ್ತ್ರದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ ಸಂಪ್ರಬಂಧ ರಚಿಸಬೇಕು.

ಸಂಪ್ರಬಂಧ ಮತ್ತು ವಿಷಯ ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ವಿಷಯವನ್ನು ಸಂಪರ್ಕ ಕಾರ್ಯಕ್ರಮದ ಮುನ್ನ ಅಥವಾ ಆ ಸಂದರ್ಭದಲ್ಲಿ ತಜ್ಞ/ಬೋಧಕರೊಂದಿಗೆ ಅಥವಾ ಅಧ್ಯಯನ ಮಂಡಳಿಯವರೊಂದಿಗೆ ಚರ್ಚಿಸಿ ಖಚಿತಪಡಿಸಿಕೊಂಡು ದೂರಶಿಕ್ಷಣ ನಿರ್ದೇಶನಾಲಯಕ್ಕೆ ತಿಳಿಸಬೇಕು.

## ೨.೨.೮ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ

**ಕೋರ್ಸ್ ಮತ್ತು ನಿಯಮಗಳು**

| ಕೋರ್ಸ್ ಸಂಕೇತ | ಕೋರ್ಸಿನ ಶೀರ್ಷಿಕೆ | ಅಂಕಗಳು ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
|---|---|---|---|---|---|
| ೨೩A | ೧. ಗಣಕ ಪರಿಚಯ | ೬ | ೯೦ | ೧೦ | ೧೦೦ |
| ೨೩B | ೨. ಹಾರ್ಡ್‌ವೇರ್ (ಯಂತ್ರಾಂಶ) | ೬ | ೯೦ | ೧೦ | ೧೦೦ |
| ೨೩C | ೩. ವಿಂಡೋಸ್ ಎಕ್ಸ್‌ಪಿ ಕಾರ್ಯಾಚರಿಸುವ ವಿಧಾನ | ೬ | ೬೦ | ೪೦* | ೧೦೦ |
| ೨೩D | ೪. ಎಂ ಎಸ್ ಆಫೀಸ್ ೨೦೦೩ | ೬ | ೬೦ | ೪೦* | ೧೦೦ |
| ೨೩E | ೫. ಅಂತರಜಾಲ (ಇಂಟರ್‌ನೆಟ್) | ೬ | ೭೦ | ೩೦* | ೧೦೦ |
| | ಒಟ್ಟು | ೩೦ | ೩೫೦ | ೧೫೦ | ೫೦೦ |

* **ಪ್ರಯೋಗ**

**ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ** ಸ್ನಾತಕೋತ್ತರ ಡಿಪ್ಲೊಮದ ಕೋರ್ಸ್ ೨೩A ಮತ್ತು ೨೩B ಕೋರ್ಸಿ(ಪತ್ರಿಕೆ)ನಲ್ಲಿ ೧೦ ಅಂಕಗಳು ಆಂತರಿಕ ಮೌಲ್ಯಮಾಪನಕ್ಕಾಗಿ ಅಂದರೆ ಸಂಪರ್ಕ ಕಾರ್ಯಕ್ರಮ ಹಾಗೂ ಮೌಖಿಕ ಪರೀಕ್ಷೆಗಾಗಿ ಕಾಯ್ದಿರಿಸಲಾಗಿದೆ. ಸಂಪರ್ಕ ಕಾರ್ಯಕ್ರಮ ಕಡ್ಡಾಯ. ಸಂಪರ್ಕ ಕಾರ್ಯಕ್ರಮದಲ್ಲಿಯೇ ೨೩C ಮತ್ತು ೨೩D ಕೋರ್ಸಿ(ಪತ್ರಿಕೆ)ನಲ್ಲಿ ೪೦ ಅಂಕಗಳ ಮೌಲ್ಯಮಾಪನಕ್ಕಾಗಿ ಪ್ರಾಯೋಗಿಕ ಪರೀಕ್ಷೆಗಳನ್ನು ಏರ್ಪಡಿಸಲಾಗುವುದು ಡಿಪ್ಲೊಮದ ವಿದ್ಯಾರ್ಥಿಗಳಿಗೂ ಈ ಪ್ರಯೋಗಗಳು ಸರಳವಾಗಿರುವವು. **ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ** ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮದ ಕೋರ್ಸ್ ೨೩A ಮತ್ತು ೨೩B ಕೋರ್ಸಿ(ಪತ್ರಿಕೆ)ನಲ್ಲಿ ತಲಾ ೯೦ ಅಂಕಗಳ ೩ ಗಂಟೆ ಅವಧಿಯ ಮತ್ತು ಕೋರ್ಸ್ ೨೩C ಮತ್ತು ೨೩D ಕೋರ್ಸಿ(ಪತ್ರಿಕೆ)ನಲ್ಲಿ ತಲಾ ೬೦ ಅಂಕಗಳ ಹಾಗೂ ೨೩E ಕೋರ್ಸಿ(ಪತ್ರಿಕೆ)ನಲ್ಲಿ ೭೦ ಅಂಕಗಳ ೨ ಗಂಟೆ ಅವಧಿಯ ಲಿಖಿತ ವಾರ್ಷಿಕ ಪರೀಕ್ಷೆ ಕಡ್ಡಾಯವಾಗಿರುವುದು. ಉತ್ತೀರ್ಣ ಹೊಂದಲು ಪ್ರತಿ ಕೋರ್ಸಿನಲ್ಲಿ ಆಂತರಿಕ ಅಂಕಗಳನ್ನು ಸೇರಿ ಕನಿಷ್ಠ ೩೫ ಅಂಕಗಳನ್ನು ಗಳಿಸುವುದು ಕಡ್ಡಾಯವಾಗಿರುತ್ತದೆ.

## ೨.೩ ಸ್ನಾತಕೋತ್ತರ ಕಾರ್ಯಕ್ರಮ ಅಡಿಯಲ್ಲಿಯ ಶಿಕ್ಷಣಕ್ರಮಗಳು

| ಕ್ರ ಸಂ | ಶಿಕ್ಷಣಕ್ರಮ | ಕೋಡ್ ಸಂಖ್ಯೆ |
|---|---|---|
| ೧. | ಎಂ ಎ ಕನ್ನಡ | ೧೭ |
| ೨. | ಎಂ ಎ ಚರಿತ್ರೆ | ೨೫ |
| ೩. | ಎಂ ಎ ಪತ್ರಿಕೋದ್ಯಮ ಮತ್ತು ಮಾಧ್ಯಮ ಅಧ್ಯಯನ(**MJMS**) | ೨೬ |
| ೪. | ಎಂ ಎ ಸಮಾಜಶಾಸ್ತ್ರ | ೨೮ |

## ೨.೩.೧ ಶಿಕ್ಷಣದ ಅವಧಿ

ಯಾವುದೇ ಸ್ನಾತಕೋತ್ತರ ಶಿಕ್ಷಣವನ್ನು ಪೂರ್ಣಗೊಳಿಸಲು ಇರುವ ಕನಿಷ್ಠ ಅವಧಿ ಎರಡು ವರ್ಷಗಳು. ಗರಿಷ್ಠ ಅವಧಿ ನಿರ್ದಿಷ್ಟ ಶಿಕ್ಷಣಕ್ಕೆ ಸೇರಿದ ವರ್ಷದಿಂದ ನಾಲ್ಕು ವರ್ಷಗಳು ಮಾತ್ರ. ನಾಲ್ಕು ವರ್ಷಗಳ ಒಳಗೆ ಎಂ ಎ ಶಿಕ್ಷಣವನ್ನು ಪೂರ್ಣಗೊಳಿಸದ ಅಭ್ಯರ್ಥಿ ಮತ್ತೆ ಹೊಸದಾಗಿ ಪ್ರವೇಶ ಪಡೆಯಬೇಕಾಗುತ್ತದೆ.

## ೨.೩.೨ ಪ್ರವೇಶ ಶುಲ್ಕ

| **ನಿಯಮ–೧ ಮತ್ತು ೨** | **ಪ್ರಥಮ ಎಂ ಎ** | **ಅಂತಿಮ ಎಂ ಎ** |
|---|---|---|
| *ನೋಂದಣಿ ಶುಲ್ಕ | ರೂ. ೨೦೦/– | – |
| ಎಂಪಿಪಿ ಶುಲ್ಕ **(ನಿಯಮ–೧ಕ್ಕೆ)** | ರೂ. ೫೦೦/– | – |
| ಹೊರ ರಾಜ್ಯದ ಪದವೀಧರರ | | |
| ಅರ್ಹತಾ ಶುಲ್ಕ | ರೂ. ೫೦೦೦/– | |
| *ಪ್ರವೇಶ ಶುಲ್ಕ | ರೂ. ೧೦೦೦/– | ರೂ. ೧೦೦೦/– |
| ಕೋರ್ಸ್/ಬೋಧನಾ ಶುಲ್ಕ | ರೂ. ೩೫೦೦/– | ರೂ. ೩೫೦೦/– |
| ಪ್ರಯೋಗ ಶುಲ್ಕ (ಎಂಜೆಎಂಎಸ್) | ರೂ. ೧೦೦೦/– | ರೂ. ೧೦೦೦/– |

***ನಿರುದ್ಯೋಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ವಿದ್ಯಾರ್ಥಿಗಳಿಗೆ ನೋಂದಣಿ ಮತ್ತು ಪ್ರವೇಶ ಶುಲ್ಕವಿರುವುದಿಲ್ಲ. (ವಾರ್ಷಿಕ ಆದಾಯ ೨.೦೦ ಲಕ್ಷ ಮಿತಿಯೊಳಗಿರಬೇಕು)***

**೨.೩.೩ ಪರೀಕ್ಷಾ ಶುಲ್ಕ**

| | | |
|---|---|---|
| ಎಲ್ಲಾ ಕೋರ್ಸ್ (ಪತ್ರಿಕೆ)ಗಳಿಗೆ | ರೂ. ೧೦೦೦/- | ರೂ. ೧೦೦೦/- |
| ಒಂದು ಕೋರ್ಸ್ (ಪತ್ರಿಕೆ)ಗೆ | ರೂ. ೨೦೦/- | ರೂ. ೨೦೦/- |
| ಪುನರ್ ಪರೀಕ್ಷೆ ಒಂದು ಕೋರ್ಸ್ (ಪತ್ರಿಕೆ)ಗೆ | ರೂ. ೨೦೦/- | ರೂ. ೨೦೦/- |

***ವಿ.ಸೂ.: ಇತರೆ ಶುಲ್ಕಗಳಿಗಾಗಿ ಪುಟ ಸಂಖ್ಯೆ ೨೭ನ್ನು ನೋಡಿ***

**೨.೩.೪ ಅಂತಿಮ ಎಂ ಎ ಗೆ ಪ್ರವೇಶಾತಿ**

ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣದಲ್ಲಿ ಪ್ರಥಮ ಎಂ ಎ ಶಿಕ್ಷಣಕ್ರಮವನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಅಂತಿಮ ವರ್ಷದ ಎಂ ಎ ಶಿಕ್ಷಣಕ್ರಮಕ್ಕೆ ಹೊಸತಾಗಿ ವಿವರಣಾ ಪುಸ್ತಕ ಖರೀದಿಸಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ಮತ್ತು ಅದರ ಅಧ್ಯಯನ ಕೇಂದ್ರಗಳು ಕಳುಹಿಸುವ ಸುತ್ತೋಲೆ/ ಸೂಚನೆಗಳನ್ನು ಪಡೆದ ಮೇಲೆ ಈಗ್ಗೆ ನಿಗದಿಪಡಿಸಿದ ಶಿಕ್ಷಣಕ್ರಮದ ಶುಲ್ಕವನ್ನು ಪಾವತಿಸುವುದು. ಪ್ರಥಮ ವರ್ಷದ ಪರೀಕ್ಷೆ ತೆಗೆದುಕೊಳ್ಳದಿರಬಹುದು ಅಥವಾ ಪರೀಕ್ಷೆ ತೆಗೆದುಕೊಂಡು ಅನುತ್ತೀರ್ಣರಾಗಿರಬಹುದು ಅವರೂ ಅಂತಿಮ ವರ್ಷಕ್ಕೆ ಪ್ರವೇಶ ಪಡೆದು ವ್ಯಾಸಂಗವನ್ನು ಮುಂದುವರಿಸಬಹುದು.

**೨.೩.೫ ಪ್ರವೇಶಾರ್ಹತೆ**

ಎಂ ಎ ಪದವಿ ಶಿಕ್ಷಣಕ್ರಮಕ್ಕೆ **ನಿಯಮ-೧** ಮತ್ತು **ನಿಯಮ-೨** ಎಂಬ ಎರಡು ನಿಯಮಗಳಡಿಯಲ್ಲಿ ಪ್ರವೇಶಾತಿಯನ್ನು ಮಾಡಿಕೊಳ್ಳಲಾಗುತ್ತದೆ.

**ನಿಯಮ-೧ ಕನಿಷ್ಠ ಮೂರು ವರ್ಷಗಳ ಅವಧಿಯ ಯಾವುದೇ ಬ್ಯಾಚುಲರ್ಸ್ ಪದವಿ ಪಡೆದವರು.**

ಕನಿಷ್ಠ ಮೂರು ವರ್ಷಗಳ ಅವಧಿಯ ಯಾವುದೇ ಪದವಿ (ಬ್ಯಾಚುಲರ್ಸ್ ಡಿಗ್ರಿ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಎಂ ಎ ಶಿಕ್ಷಣಕ್ರಮಕ್ಕೆ ನಿಗದಿಪಡಿಸಿದ ವಿಷಯಗಳನ್ನು (Cognate Subjects) **ವ್ಯಾಸಂಗ ಮಾಡದಿದ್ದಲ್ಲಿ** ಅಂತಹ ಅಭ್ಯರ್ಥಿಗಳು ನಿಯಮ-೧ರ ಅಡಿಯಲ್ಲಿ, ಯಾವುದೇ ಎಂ ಎ ಶಿಕ್ಷಣಕ್ರಮಕ್ಕೆ ಪ್ರವೇಶಾತಿ ಪಡೆಯಬಹುದು. ಆದರೆ, ಇವರು ಕನ್ನಡ ವಿಶ್ವವಿದ್ಯಾಲಯದಲ್ಲಿ ದೂರಶಿಕ್ಷಣ ನಿರ್ದೇಶನಾಲಯವು ನಡೆಸುವ ಸಂಬಂಧಪಟ್ಟ ಶಿಕ್ಷಣಕ್ರಮಗಳ ಸ್ನಾತಕೋತ್ತರ ಪ್ರವೇಶ ಪೂರ್ವಸಿದ್ಧತಾ (Master Preparatory Programme) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು.

**ಸ್ನಾತಕೋತ್ತರ ಪ್ರವೇಶ ಪೂರ್ವಸಿದ್ಧತಾ (Master Preparatory Programme) ಪರೀಕ್ಷೆ**

ಈ ಪರೀಕ್ಷೆಯು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಜಾರಿಯಲ್ಲಿರುವ ಆಯಾ ಶಿಕ್ಷಣಕ್ರಮ(ವಿಷಯ)ದ ಮೂರು ವರ್ಷಗಳ ಬ್ಯಾಚುಲರ್ಸ್ ಡಿಗ್ರಿಯ ಸಾಮಾನ್ಯ ತಿಳುವಳಿಕೆಯ ೧೦೦ ಅಂಕಗಳ ವಸ್ತುನಿಷ್ಠ (Objective type) ಮಾದರಿಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಈ ಪರೀಕ್ಷೆಗಳು **೨೦೧೪ರ ಫೆಬ್ರವರಿ ೨೫ ರಂದು ಕನ್ನಡ ವಿಶ್ವವಿದ್ಯಾಲಯದಲ್ಲಿ** ಮಾತ್ರ ಜರುಗುವವು. ಈ ಪರೀಕ್ಷೆಯಲ್ಲಿ ಕನಿಷ್ಠ ೩೫ ಅಂಕಗಳನ್ನು ಪಡೆದು ಉತ್ತೀರ್ಣರಾದವರನ್ನು ಮಾತ್ರ ಖಾಯಂ ಪ್ರವೇಶಾತಿಗೆ ಅವಕಾಶ

ನೀಡಲಾಗುವುದು. ಇದು ವಿದ್ಯಾರ್ಥಿಗಳಲ್ಲಿ ಜ್ಞಾನವನ್ನು ಹೆಚ್ಚಿಸುತ್ತದೆ. ದೂರಶಿಕ್ಷಣ ಕಲಿಕಾ ವ್ಯವಸ್ಥೆಯಲ್ಲಿನ ಎಂ ಎ ಪದವಿಗಳು ಅಖಿಲ ಭಾರತ ಮಟ್ಟದಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವುದಕ್ಕಾಗಿ ಇದನ್ನು ಪರಿಚಯಿಸಲಾಗಿದೆ.

**ನಿಯಮ-೨ ಸಂಬಂಧಿತ ವಿಷಯಗಳಲ್ಲಿ ಬ್ಯಾಚುಲರ್ಸ್ ಪದವಿ ಪಡೆದವರು**
ಈ ಪದ್ಧತಿಯ ಮೂಲಕ ಪ್ರವೇಶ ಬಯಸಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅಂದರೆ ಎಂ ಎ ಶಿಕ್ಷಣಕ್ರಮದ ಪ್ರವೇಶಕ್ಕೆ ಬಿ ಎ ಅಥವಾ ತತ್ಸಮಾನ ಪದವಿಯಲ್ಲಿ ಸಂಬಂಧಪಟ್ಟ ವಿಷಯದೊಂದಿಗೆ ತೇರ್ಗಡೆಯಾಗಿರಬೇಕು.

## ೨.೪ ಸ್ನಾತಕೋತ್ತರ ಶಿಕ್ಷಣ ಕ್ರಮಗಳ ಪಠ್ಯಕ್ರಮ

### ೨.೪.೧ ಎಂ ಎ ಕನ್ನಡ

**ಕೋರ್ಸ್‌ಗಳು ಮತ್ತು ಪ್ರವೇಶ ನಿಯಮಗಳು**

**ಪ್ರಥಮ ವರ್ಷ**

| ಕೋರ್ಸ್ | ಕೋರ್ಸಿನ ಶೀರ್ಷಿಕೆ | ಅಂಕಗಳು | | | |
|---|---|---|---|---|---|
| ಸಂಕೇತ | | ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
| ೧೭A | ೧. ಚಂಪೂ ಸಾಹಿತ್ಯ | ೬ | ೯೦ | ೧೦ | ೧೦೦ |
| ೧೭B | ೨. ಭಕ್ತಿ ಸಾಹಿತ್ಯ | ೬ | ೯೦ | ೧೦ | ೧೦೦ |
| ೧೭C | ೩. ಮಧ್ಯಕಾಲೀನ ಕನ್ನಡ ಸಾಹಿತ್ಯ | ೬ | ೯೦ | ೧೦ | ೧೦೦ |
| ೧೭D | ೪. ಸಾಹಿತ್ಯ ಅಧ್ಯಯನ ಸಾಮಗ್ರಿ | ೬ | ೯೦ | ೧೦ | ೧೦೦ |
| ೧೭E | ೫. ಪ್ರಧಾನ ಕೃತಿಗಳು | ೬ | ೯೦ | ೧೦ | ೧೦೦ |
| | **ಒಟ್ಟು** | **೩೦** | **೪೫೦** | **೫೦** | **೫೦೦** |

**ಅಂತಿಮ ವರ್ಷ**

| | | | | | |
|---|---|---|---|---|---|
| ೧೭F | ೬. ಆಧುನಿಕ ಕನ್ನಡ ಕಾವ್ಯ | ೬ | ೯೦ | ೧೦ | ೧೦೦ |
| ೧೭G | ೭. ಆಧುನಿಕ ಕಥನ ಸಾಹಿತ್ಯ | ೬ | ೯೦ | ೧೦ | ೧೦೦ |
| ೧೭H | ೮. ಆಧುನಿಕ ಕನ್ನಡ ನಾಟಕ | ೬ | ೯೦ | ೧೦ | ೧೦೦ |
| ೧೭I | ೯. ಆಧುನಿಕ ಭಾರತೀಯ ಸಾಹಿತ್ಯ | ೬ | ೯೦ | ೧೦ | ೧೦೦ |
| ೧೭J | ೧೦. ಆಧುನಿಕ ಕನ್ನಡ ಸಾಹಿತ್ಯ: ಆಯ್ದ ಕೃತಿಗಳು | ೬ | ೯೦ | ೧೦ | ೧೦೦ |
| | **ಒಟ್ಟು** | **೩೦** | **೪೫೦** | **೫೦** | **೫೦೦** |

**ಪ್ರವೇಶಾರ್ಹತೆ**

೧. ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಮೂರು ವರ್ಷಗಳ ಬಿಎ/ ಬಿಎ ಲಲಿತಕಲೆ ಪರೀಕ್ಷೆಯಲ್ಲಿ ಕನ್ನಡವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು ಅಥವಾ ತತ್ಸಮಾನವೆಂದು ಪರಿಗಣಿತವಾದ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

೨. ಕರ್ನಾಟಕ ಸರ್ಕಾರ ನಡೆಸುವ ಕನ್ನಡ ಪಂಡಿತ/ರತ್ನ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

೩. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಅಥವಾ ಕನ್ನಡ ವಿಷಯದೊಂದಿಗೆ ಯಾವುದೇ ವಿಶ್ವವಿದ್ಯಾನಿಲಯದ ಬಿ ಇಡಿ ಪದವೀಧರ ಅಭ್ಯರ್ಥಿಗಳು.

೪. ಪದವಿ ನಂತರದ ಕನ್ನಡ ಡಿಪ್ಲೊಮ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು, ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಪದವೀಧರರು.

೫. ಮೂರು ವರ್ಷಗಳ ಬಿಎ/ ಬಿಎಸ್ಸಿ/ ಬಿಕಾಂ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರಥಮ/ದ್ವಿತೀಯ ಬಿಎ/ ಬಿಎಸ್ಸಿ/ ಬಿಕಾಂ ತರಗತಿಯಲ್ಲಿ ಕನ್ನಡ ವಿಷಯ ಓದಿಕೊಂಡ ವಿದ್ಯಾರ್ಥಿಗಳು ಪ್ರಥಮ ಎಂಎ ಕನ್ನಡ ತರಗತಿಗೆ ಪ್ರವೇಶಾತಿ ಪಡೆಯಬಹುದು.

**೨.೪.೨ ಎಂ ಎ ಚರಿತ್ರೆ**

**ಕೋರ್ಸ್‌ಗಳು ಮತ್ತು ಪ್ರವೇಶ ನಿಯಮಗಳು**

**ಪ್ರಥಮ ವರ್ಷ**

| ಕೋರ್ಸ್ | ಕೋರ್ಸಿನ ಶೀರ್ಷಿಕೆ | ಅಂಕಗಳು | | | |
|---|---|---|---|---|---|
| ಸಂಕೇತ | | ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
| ೨೫A | ೧. ಚರಿತ್ರೆ ಲೇಖನ ಪರಂಪರೆ | ೬ | ೯೦ | ೧೦ | ೧೦೦ |
| ೨೫B | ೨. ಪಾಶ್ಚಿಮಾತ್ಯ ನಾಗರಿಕತೆ | ೬ | ೯೦ | ೧೦ | ೧೦೦ |
| ೨೫C | ೩. ಭಾರತೀಯ ಚರಿತ್ರೆ-ಆಯ್ದ ವಿಷಯಗಳು | ೬ | ೯೦ | ೧೦ | ೧೦೦ |
| ೨೫D | ೪. ದಕ್ಷಿಣ ಭಾರತದ ಚರಿತ್ರೆ- ಆಯ್ದ ವಿಷಯಗಳು | ೬ | ೯೦ | ೧೦ | ೧೦೦ |
| ೨೫E | ೫. ಕರ್ನಾಟಕ ಚರಿತ್ರೆ-ಆಯ್ದ ವಿಷಯಗಳು | ೬ | ೯೦ | ೧೦ | ೧೦೦ |
| | **ಒಟ್ಟು** | **೩೦** | **೪೫೦** | **೫೦** | **೫೦೦** |

**ಅಂತಿಮ ವರ್ಷ**

| | | | | | |
|---|---|---|---|---|---|
| ೨೫F | ೬. ಚರಿತ್ರೆ ಸಂಶೋಧನಾ ವಿಧಾನಗಳು | ೬ | ೯೦ | ೧೦ | ೧೦೦ |
| ೨೫G | ೭. ಪಾಶ್ಚಿಮಾತ್ಯ ನಾಗರಿಕತೆ - ಆಯ್ದ ವಿಷಯಗಳು | ೬ | ೯೦ | ೧೦ | ೧೦೦ |
| ೨೫H | ೮. ಏಷ್ಯಾ:ವಸಾಹತುಶಾಹಿ ಮತ್ತು ರಾಷ್ಟ್ರೀಯತೆ | ೬ | ೯೦ | ೧೦ | ೧೦೦ |
| ೨೫I | ೯. ಆಧುನಿಕ ಭಾರತ-ಆಯ್ದ ವಿಷಯಗಳು | ೬ | ೯೦ | ೧೦ | ೧೦೦ |
| ೨೫J | ೧೦. ವಿಜಯನಗರ | ೬ | ೯೦ | ೧೦ | ೧೦೦ |
| | **ಒಟ್ಟು** | **೩೦** | **೪೫೦** | **೫೦** | **೫೦೦** |

**ಪ್ರವೇಶಾರ್ಹತೆ**

ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಮೂರು ವರ್ಷಗಳ ಬಿಎ/ ಬಿಎ ಲಲಿತಕಲೆ ಪದವಿ ಪರೀಕ್ಷೆಯಲ್ಲಿ ಇತಿಹಾಸವನ್ನು ಪ್ರಧಾನ/ಐಚ್ಛಿಕ ವಿಷಯವಾಗಿ

ಪದವಿ ಮಟ್ಟದಲ್ಲಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು ಅಥವಾ ಇತರ ಯಾವುದೇ ವಿಶ್ವವಿದ್ಯಾಲಯಗಳ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

**೨.೪.೩. ಎಂ ಎ ಪತ್ರಿಕೋದ್ಯಮ ಮತ್ತು ಮಾಧ್ಯಮ ಅಧ್ಯಯನ**

**ಕೋರ್ಸ್‌ಗಳು ಮತ್ತು ಪ್ರವೇಶ ನಿಯಮಗಳು**

**ಪ್ರಥಮ ವರ್ಷ**

| ಕೋರ್ಸ್ | ಕೋರ್ಸಿನ ಶೀರ್ಷಿಕೆ | ಅಂಕಗಳು | | | |
|---|---|---|---|---|---|
| ಸಂಕೇತ | | ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
| ೨೬A | ೧. ಸಮೂಹ ಮಾಧ್ಯಮಗಳ ಪರಿಚಯ | ೬ | ೯೦ | ೧೦ | ೧೦೦ |
| ೨೬B | ೨. ವರದಿಗಾರಿಕೆ | ೬ | ೯೦ | ೧೦ | ೧೦೦ |
| ೨೬C | ೩. ಸುದ್ದಿ ಸಂಪಾದನೆ | ೬ | ೯೦ | ೧೦ | ೧೦೦ |
| ೨೬D | ೪. ಅಭಿವೃದ್ಧಿ ಪತ್ರಿಕೋದ್ಯಮ | ೬ | ೯೦ | ೧೦ | ೧೦೦ |
| ೨೬E | ೫. **ಪ್ರಾಯೋಗಿಕ ೧** | | | | |
| | ಅ. ಪತ್ರಿಕೆ ಪ್ರಕಟಣೆ | ೨ | – | ೨೫ | ೨೫ |
| | ಆ. ನಿಯತಕಾಲಿಕೆ ಪ್ರಕಟಣೆ | ೨ | – | ೨೫ | ೨೫ |
| | ಇ. ಸಂಪಾದನೆ | ೧ | – | ೨೫ | ೨೫ |
| | ಈ. ಮೌಖಿಕ ಪರೀಕ್ಷೆ | ೧ | – | ೨೫ | ೨೫ |
| | **ಒಟ್ಟು** | **೩೦** | **೩೬೦** | **೧೪೦** | **೫೦೦** |

**ಅಂತಿಮ ವರ್ಷ**

| | | | | | |
|---|---|---|---|---|---|
| ೨೬F | ೬. ಸಂವಹನ ಪರಿಚಯ | ೬ | ೯೦ | ೧೦ | ೧೦೦ |
| ೨೬G | ೭. ಜಾಹಿರಾತು ಮತ್ತು ಸಾರ್ವಜನಿಕ ಸಂಪರ್ಕ | ೬ | ೯೦ | ೧೦ | ೧೦೦ |
| ೨೬H | ೮. ಸಂವಹನ ಸಂಶೋಧನಾ ವಿಧಾನಗಳು | ೬ | ೯೦ | ೧೦ | ೧೦೦ |
| ೨೬I | ೯. ಮಾಧ್ಯಮ ನಿರ್ವಹಣೆ | ೬ | ೯೦ | ೧೦ | ೧೦೦ |
| ೨೬J | ೧೦. **ಪ್ರಾಯೋಗಿಕ ೨** | | | | |
| | ಅ. ಪತ್ರಿಕೆ ಪ್ರಕಟಣೆ | ೨ | – | ೨೫ | ೨೫ |
| | ಆ. ನಿಯತಕಾಲಿಕೆ ಪ್ರಕಟಣೆ | ೨ | – | ೨೫ | ೨೫ |
| | ಇ. ಸಂಪಾದನೆ | ೨ | – | ೫೦ | ೫೦ |
| | **ಒಟ್ಟು** | **೩೦** | **೩೬೦** | **೧೪೦** | **೫೦೦** |

**ಪ್ರವೇಶಾರ್ಹತೆ**

೧. ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಮೂರು ವರ್ಷಗಳ ಪದವಿ ಪರೀಕ್ಷೆಯಲ್ಲಿ ಪತ್ರಿಕೋದ್ಯಮ ವಿಷಯವನ್ನು ಪದವಿ ಮಟ್ಟದಲ್ಲಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು ಪದವಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಪ್ರಥಮ ವರ್ಷದ **ಎಂ ಎ ಪತ್ರಿಕೋದ್ಯಮ ಮತ್ತು ಮಾಧ್ಯಮ ಅಧ್ಯಯನ** ಕಾರ್ಯಕ್ರಮಕ್ಕೆ ಪ್ರವೇಶ ಕೋರಿ ಅರ್ಜಿ ಸಲ್ಲಿಸಬಹುದು.

೨. ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯ ಅಥವಾ ಸಂಸ್ಥೆಯಿಂದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಥವಾ ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣದ ಪತ್ರಿಕೋದ್ಯಮ ಅಧ್ಯಯನದಲ್ಲಿ ಸ್ನಾತಕೋತ್ತರ ಡಿಪ್ಲೊಮ ಪಡೆದಿರುವ ಅಭ್ಯರ್ಥಿಗಳು.

**ಪ್ರಾಯೋಗಿಕ**

೨೬E ಕೋರ್ಸು(ಪತ್ರಿಕೆ) ಪ್ರಾಯೋಗಿಕವಾಗಿದ್ದು ಇದರಲ್ಲಿ ಪತ್ರಿಕೆ ಪ್ರಕಟಣೆಗಾಗಿ ೨೫ ಅಂಕಗಳನ್ನು, ನಿಯತಕಾಲಿಕೆ ಪ್ರಕಟಣೆಗಾಗಿ ೨೫ ಅಂಕಗಳನ್ನು, ಸಂಪಾದನೆಗಾಗಿ ೨೫ ಅಂಕಗಳನ್ನು ಮತ್ತು ಮೌಖಿಕ ಪರೀಕ್ಷೆಗಾಗಿ ೨೫ ಅಂಕಗಳನ್ನು ಕಾಯ್ದಿರಿಸಲಾಗಿದೆ. ೨೬J ಕೋರ್ಸ್(ಪತ್ರಿಕೆ) ಪ್ರಾಯೋಗಿಕವಾಗಿದ್ದು, ಇದರಲ್ಲಿ ದೂರದರ್ಶನ ಕಾರ್ಯಕ್ಕಾಗಿ ೨೫ ಅಂಕಗಳು, ಆಕಾಶವಾಣಿ ಕಾರ್ಯಕ್ಕಾಗಿ ೨೫ ಅಂಕಗಳು ಮತ್ತು ಸಂಪ್ರಬಂಧಕ್ಕಾಗಿ ೫೦ ಅಂಕಗಳನ್ನು ಕಾಯ್ದಿರಿಸಲಾಗಿದೆ. ಸಂಪರ್ಕ ಕಾರ್ಯಕ್ರಮದ ಸಂದರ್ಭದಲ್ಲಿ ತಜ್ಞ ಮಾರ್ಗದರ್ಶಕರ ನಿರ್ದೇಶನದಲ್ಲಿ ಈ ಎಲ್ಲ ಪ್ರಯೋಗಗಳು ಜರುಗುವವು.

### ೨.೪.೪ ಎಂ ಎ ಸಮಾಜಶಾಸ್ತ್ರ

**ಕೋರ್ಸ್‌ಗಳು ಮತ್ತು ಪ್ರವೇಶ ನಿಯಮಗಳು**

**ಪ್ರಥಮ ವರ್ಷ**

| ಕೋರ್ಸ್ ಸಂಕೇತ | ಕೋರ್ಸಿನ ಶೀರ್ಷಿಕೆ | ಅಂಕಗಳು | | | |
|---|---|---|---|---|---|
| | | ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
| ೨೮A | ೧. ಆರಂಭಿಕ ಸಮಾಜಶಾಸ್ತ್ರದ ಚಿಂತನೆಗಳು | ೬ | ೯೦ | ೧೦ | ೧೦೦ |
| ೨೮B | ೨. ಸಾಮಾಜಿಕ ಸಂಶೋಧನಾ ವಿಧಾನ | ೬ | ೯೦ | ೧೦ | ೧೦೦ |
| ೨೮C | ೩. ಭಾರತೀಯ ಸಮಾಜ | ೬ | ೯೦ | ೧೦ | ೧೦೦ |
| ೨೮D | ೪. ಅಲಕ್ಷಿತರ ಸಮಾಜಶಾಸ್ತ್ರ | ೬ | ೯೦ | ೧೦ | ೧೦೦ |
| ೨೮E | ೫. ಲಿಂಗ ವ್ಯವಸ್ಥೆ ಮತ್ತು ಸಮಾಜ | ೬ | ೯೦ | ೧೦ | ೧೦೦ |
| | **ಒಟ್ಟು** | **೩೦** | **೪೫೦** | **೫೦** | **೫೦೦** |

**ಅಂತಿಮ ವರ್ಷ**

| ಕೋರ್ಸ್ ಸಂಕೇತ | ಕೋರ್ಸಿನ ಶೀರ್ಷಿಕೆ | ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
|---|---|---|---|---|---|
| ೨೮F | ೬. ಆಧುನಿಕ ಸಮಾಜಶಾಸ್ತ್ರೀಯ ಸಿದ್ಧಾಂತಗಳು | ೬ | ೯೦ | ೧೦ | ೧೦೦ |
| ೨೮G | ೭. ಅಭಿವೃದ್ಧಿ ಸಮಾಜಶಾಸ್ತ್ರ | ೬ | ೯೦ | ೧೦ | ೧೦೦ |
| ೨೮H | ೮. ವೈದ್ಯಕೀಯ ಸಮಾಜಶಾಸ್ತ್ರ | ೬ | ೯೦ | ೧೦ | ೧೦೦ |
| ೨೮I | ೯. ಸಾಮಾಜಿಕ ನೀತಿ ಮತ್ತು ಯೋಜನೆ | ೬ | ೯೦ | ೧೦ | ೧೦೦ |
| ೨೮J | ೧೦. ಸಮಾಜ ಮತ್ತು ಜಾಗತೀಕರಣ | ೬ | ೯೦ | ೧೦ | ೧೦೦ |
| | **ಒಟ್ಟು** | **೩೦** | **೪೫೦** | **೫೦** | **೫೦೦** |

**ಪ್ರವೇಶಾರ್ಹತೆ**

ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಮೂರು ವರ್ಷಗಳ ಬಿಎ/ ಬಿಎಸ್‌ಡಬ್ಲ್ಯು/ಬಿಎ ಲಲಿತಕಲೆ ಪದವಿ ಪರೀಕ್ಷೆಯಲ್ಲಿ ಸಮಾಜಶಾಸ್ತ್ರವನ್ನು ಪದವಿ ಮಟ್ಟದಲ್ಲಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು ಅಥವಾ ಇತರ ಯಾವುದೇ ವಿಶ್ವವಿದ್ಯಾಲಯಗಳ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

# ೩. ಶೈಕ್ಷಣಿಕ ನಿಯಮಗಳು

## ೩.೧ ಬೋಧನಾ ವಿಧಾನ

ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ಬೋಧನಾ ಪದ್ಧತಿಯು ಇತರ ಪಾರಂಪರಿಕ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾಗಿರುತ್ತದೆ. ದೂರಶಿಕ್ಷಣದ ಬೋಧನಾ ಪದ್ಧತಿಯು ಹೆಚ್ಚಾಗಿ 'ಕಲಿಕಾರ್ಥಿ ಕೇಂದ್ರಿತ' ವಾಗಿರುತ್ತದೆ ಮತ್ತು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಆಸಕ್ತ ವಿದ್ಯಾರ್ಥಿಗಳನ್ನು ತೊಡಗಿಸುವಂತೆ ಪ್ರೇರೇಪಿಸುತ್ತದೆ. ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಬಹುಮಾಧ್ಯಮದಲ್ಲಿ ಅಂದರೆ, ಮುದ್ರಿತ ಸಾಮಗ್ರಿಗಳು ಹಾಗೂ ಸಂಪರ್ಕ ಕಾರ್ಯಕ್ರಮವೆಂಬ ಮುಖಾಮುಖಿ ಗುರುಶಿಷ್ಯ ಸಂವಾದ ಇತ್ಯಾದಿ ರೂಪಗಳಲ್ಲಿ ನೀಡಲಾಗುತ್ತದೆ. ದೂರಶಿಕ್ಷಣವು ಈ ಕೆಳಕಂಡ ಬಹುವಾಹಿನಿ ಮಾಧ್ಯಮ ರೂಪಗಳ ಸಮರ್ಪಕ ಸಂಯೋಜಿತ ಶಿಕ್ಷಣ ಪದ್ಧತಿಯನ್ನು ಅನುಸರಿಸುತ್ತದೆ.

- ಮುದ್ರಿತ ಸ್ವಯಂ ಕಲಿಕಾ ಸಾಮಗ್ರಿಗಳು
- ಪ್ರಾಧ್ಯಾಪಕರಿಂದ ಅಲ್ಪ ಕಾಲಾವಧಿಯ ಸಂಪರ್ಕ ಕಾರ್ಯಕ್ರಮ
- ಮೌಖಿಕ ಪರೀಕ್ಷೆ/ನಿಯೋಜಿತ ನಿಬಂಧಗಳು

## ೩.೨ ಬೋಧನಾ ಮಾಧ್ಯಮ

ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಕಾರ್ಯಕ್ರಮಗಳ ಬೋಧನಾ ಮಾಧ್ಯಮ ಕನ್ನಡದಲ್ಲಿರುತ್ತದೆ. ಅಭ್ಯರ್ಥಿಗಳು ವಾರ್ಷಿಕ ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ಬರೆಯಬೇಕು. ಅಧ್ಯಯನ ಸಾಮಗ್ರಿಗಳನ್ನು ಕನ್ನಡದಲ್ಲಿ ಮಾತ್ರ ಈ ಶಿಕ್ಷಣಕ್ರಮಗಳಿಗೆ ಒದಗಿಸಲಾಗುತ್ತದೆ.

## ೩.೩ ಸ್ವಯಂ ಕಲಿಕಾ ಅಧ್ಯಯನ ಸಾಮಗ್ರಿ

ಸ್ವಯಂ ಕಲಿಕಾ ಸಾಮಗ್ರಿಗಳಲ್ಲಿ ಮುದ್ರಿತ ಸಾಮಗ್ರಿಗಳು ಪ್ರಧಾನ ಕಲಿಕಾ ಸಾಮಗ್ರಿಗಳಾಗಿವೆ. ಹಲವಾರು ಬ್ಲಾಕ್‌ಗಳಲ್ಲಿ ಮುದ್ರಿತ ಕೋರ್ಸಿನ ಸಾಮಗ್ರಿಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತದೆ. ಕೆಲವು ಘಟಕಗಳನ್ನು ಒಳಗೊಂಡ ಬ್ಲಾಕ್ ಪುಸ್ತಕ ರೂಪದಲ್ಲಿರುತ್ತದೆ. ಒಂದು ಘಟಕದಲ್ಲಿ ನೀಡಿರುವ ಅಧ್ಯಯನ ಸಾಮಗ್ರಿಯು ೫ ರಿಂದ ೧೦ ಗಂಟೆಗಳ ಅಧ್ಯಯನವನ್ನು ವಿದ್ಯಾರ್ಥಿಯು ಮಾಡುವಂತಿರುತ್ತದೆ. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲ ಯವು ಒದಗಿಸಿರುವ ಮುದ್ರಿತ ಕಲಿಕಾ ಸಾಮಗ್ರಿಗಳನ್ನು ಪೂರ್ಣವಾಗಿ ವಿದ್ಯಾರ್ಥಿಯು ಅಧ್ಯಯನ ಮಾಡಬೇಕಾಗುತ್ತದೆ. ವಸ್ತು ವಿಷಯದ ಬಗೆಗಿನ ವಿಸ್ತೃತ ಜ್ಞಾನವನ್ನು ಪಡೆಯಲು ಘಟಕ/ಬ್ಲಾಕ್‌ಗಳಲ್ಲಿ ಸೂಚಿಸಲಾಗಿರುವ ಗ್ರಂಥಗಳನ್ನು ವಿದ್ಯಾರ್ಥಿಗಳು ಪರಾಮರ್ಶಿಸಬೇಕು.

### ೩.೩.೧ ಅಧ್ಯಯನ ಸಾಮಗ್ರಿಗಳ ವಿತರಣೆ

೧. ದೂರಶಿಕ್ಷಣ ನಿದೇಶನಾಲಯದಲ್ಲಿ ಹಾಗೂ ಮಾನ್ಯತೆ ಪಡೆದ ಅಧ್ಯಯನ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಗ್ರಿಗಳನ್ನು ಪ್ರವೇಶಾತಿ ಸಂದರ್ಭದಲ್ಲಿ ವಿತರಿಸಲಾಗುವುದು.

೨. ಪ್ರವೇಶಾತಿ ದಾಖಲೆಯ ಆಧಾರವನ್ನು ಸಲ್ಲಿಸಿ ಅಧ್ಯಯನ ಕೇಂದ್ರಗಳಲ್ಲಿ ಅಧ್ಯಯನ ಸಾಮಗ್ರಿ ಪಡೆಯಬಹುದು.

೩. ದೂರಶಿಕ್ಷಣ ನಿದೇಶನಾಲಯದಲ್ಲಿ ಮತ್ತು ಅಧ್ಯಯನ ಕೇಂದ್ರಗಳಿಂದ ಅಧ್ಯಯನ ಸಾಮಗ್ರಿಗಳನ್ನು ಪಡೆದುಕೊಳ್ಳಲಾಗದ ವಿದ್ಯಾರ್ಥಿಗಳಿಗೆ ಅಂಚೆಯ ಮೂಲಕ ರವಾನಿಸಲಾಗುವುದು.

೪. ಅಧ್ಯಯನ ಸಾಮಗ್ರಿಗಳು ಸಕಾಲದಲ್ಲಿ ತಲುಪದಿದ್ದರೆ ವಿದ್ಯಾರ್ಥಿ ಕೂಡಲೇ ದೂರಶಿಕ್ಷಣ ನಿರ್ದೇಶನಾಲಯ ಅಥವಾ ಸಂಬಂಧಪಟ್ಟ ದೂರಶಿಕ್ಷಣದ ಅಧ್ಯಯನ ಕೇಂದ್ರಗಳ ಸಂಯೋಜಕರಿಗೆ ಸಂಪರ್ಕಿಸಬೇಕು. ಒಂದು ವೇಳೆ ಆಯ್ದುಕೊಂಡಿರುವ ಶಿಕ್ಷಣಕ್ರಮಕ್ಕೆ ಸಂಬಂಧಪಟ್ಟ ಅಧ್ಯಯನ ಸಾಮಗ್ರಿಗಳು ಬಾರದೆ ಇದ್ದರೆ ಕೂಡಲೇ (ಎಲ್ಲ ವಿವರಗಳನ್ನೊಳಗೊಂಡ) ಹದಿನೈದು ದಿನಗಳ ಒಳಗೆ ಪತ್ರವನ್ನು ಬರೆದು ತಿಳಿಸಬೇಕು. ಸಂಬಂಧಪಡದ ಅಧ್ಯಯನ ಸಾಮಗ್ರಿಗಳನ್ನು ಇರುವ ಸ್ಥಿತಿಯಲ್ಲಿಯೇ ತಡಮಾಡದೆ ದೂರಶಿಕ್ಷಣ ನಿರ್ದೇಶನಾಲಯ ಅಥವಾ ಸಂಬಂಧಪಟ್ಟ ದೂರಶಿಕ್ಷಣದ ಅಧ್ಯಯನ ಕೇಂದ್ರಗಳ ಸಂಯೋಜಕರಿಗೆ ವಾಪಸ್ಸು ಕಳುಹಿಸಿಕೊಡಬೇಕು. ಮತ್ತು ತನಗೆ ಸಂಬಂಧಪಟ್ಟ ಅಧ್ಯಯನ ಸಾಮಗ್ರಿಯನ್ನು ಪಡೆದುಕೊಂಡು ಹೋಗಬೇಕು.

೫. ಅಂಚೆ ಮೂಲಕ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ನಿರ್ದೇಶಕರ ಅನುಮೋದನೆ ಪಟ್ಟಿಯ ಪ್ರಕಾರ ಅಧ್ಯಯನ ಸಾಮಗ್ರಿಗಳನ್ನು ವಿಪಿಪಿ, ಎಕ್ಸ್‌ಪ್ರೆಸ್ ಪೋಸ್ಟ್ ಪಾರ್ಸಲ್ ಅಥವಾ ಕೋರಿಯರ್ ಮೂಲಕ ಕಳುಹಿಸಲಾಗುತ್ತದೆ. ಹೀಗೆ ಕಳುಹಿಸಲ್ಪಟ್ಟ ಅಧ್ಯಯನ ಸಾಮಗ್ರಿಗಳನ್ನು ವಿದ್ಯಾರ್ಥಿಗಳು ಕಾರಣಾಂತರಗಳಿಂದ ನೇರವಾಗಿ ಸ್ವೀಕರಿಸಲು ಸಾಧ್ಯವಾಗದಿದ್ದಾಗ ಅಧ್ಯಯನ ಸಾಮಗ್ರಿಗಳು ಪುನಃ ಕಚೇರಿಗೆ ವಾಪಸ್ಸಾಗಿ ಬರುತ್ತವೆ. ಅಂಥ ಸಂದರ್ಭದಲ್ಲಿ ಅಧ್ಯಯನ ಸಾಮಗ್ರಿಗಳನ್ನು ಪುನಃ ರವಾನಿಸಲು ತಗಲುವ ಅಂಚೆ ವೆಚ್ಚವನ್ನು ಸಂಬಂಧಪಟ್ಟ ವಿದ್ಯಾರ್ಥಿಯಿಂದ ಭರಿಸಿಕೊಂಡ ನಂತರವೇ ಕಳುಹಿಸಿಕೊಡಲಾಗುವುದು. ನಿಗದಿತ ಅರ್ಜಿ ತುಂಬಿಸಿ ಕಳುಹಿಸಿದ ವಿದ್ಯಾರ್ಥಿಗಳಿಗೆ ವಾಪಸ್ಸಾದ ಅಧ್ಯಯನ ಸಾಮಗ್ರಿಗಳನ್ನು ಪುನಃ ಕಳುಹಿಸಿಕೊಡಲಾಗುತ್ತದೆ. ಈ ಬಗ್ಗೆ ಯಾರಿಗೂ ವೈಯಕ್ತಿಕವಾಗಿ ಪತ್ರ ಬರೆಯಲಾಗುವುದಿಲ್ಲ.

೬. ಅಂಚೆಯಲ್ಲಿ ರವಾನಿಸಿದ ಸ್ವಯಂ ಕಲಿಕಾ ಸಾಮಗ್ರಿ(ಪಾಠ)ಗಳು ಅಭ್ಯರ್ಥಿಗಳಿಗೆ ತಲುಪದಿದ್ದಲ್ಲಿ ದೂರಶಿಕ್ಷಣ ನಿರ್ದೇಶನಾಲಯವು ಜವಾಬ್ದಾರಿಯಲ್ಲ. ಅಂತಹ ಸಂದರ್ಭದಲ್ಲಿ ಹೆಚ್ಚುವರಿ ಪಾಠಗಳನ್ನು ಬಯಸುವವರು ಪ್ರತಿ ಪತ್ರಿಕೆಯಲ್ಲಿ ಸೂಚಿಸಿದ ಬೆಲೆಯ ಶುಲ್ಕ ಪಾವತಿಸಿ ಸ್ವಯಂ ಕಲಿಕಾ ಸಾಮಗ್ರಿ(ಪಾಠ)ಗಳನ್ನು ಪಡೆಯಬಹುದಾಗಿದೆ.

### ೩.೪ ಸಂಪರ್ಕ ಕಾರ್ಯಕ್ರಮ

ಒಂದು ವಾರದ ಸಂಪರ್ಕ ಕಾರ್ಯಕ್ರಮವನ್ನು ಎಲ್ಲ ಅಧ್ಯಯನ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗುವುದು. ತಮಗಿಷ್ಟ ಬಂದ ಕೇಂದ್ರಗಳಲ್ಲಿ

ವಿದ್ಯಾರ್ಥಿಗಳು ಸಂಪರ್ಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಅದರ ಉಪಯೋಗವನ್ನು ಪಡೆದುಕೊಳ್ಳಬಹುದು. ಕನ್ನಡ ವಿಶ್ವವಿದ್ಯಾಲಯ ಮತ್ತು ಇತರೆ ವಿಶ್ವವಿದ್ಯಾಲಯಗಳ ಅಧ್ಯಾಪಕರಿಂದ ಉಪನ್ಯಾಸ (ಸಮಾಲೋಚನೆಗಳ) ಗಳನ್ನು ಸಂಪರ್ಕ ಕಾರ್ಯಕ್ರಮದ ಅವಧಿಯಲ್ಲಿ ನೀಡಲಾಗುವುದು. ಆಂತರಿಕ ನಿಬಂಧಗಳ ಭಾಗವಾಗಿ ಪ್ರತಿಯೊಂದು ಕೋರ್ಸ್‌ನಲ್ಲೂ ೧೦ ಅಂಕಗಳಿಗೆ ಮೌಖಿಕ ಪರೀಕ್ಷೆ ಅಥವಾ ಸೂಕ್ತ ಚಟುವಟಿಕೆಗಳನ್ನು ಸಂಪರ್ಕಕಾರ್ಯಕ್ರಮದಲ್ಲಿ ನಡೆಸಲಾಗುವುದು.

ಸಂಪರ್ಕ ಕಾರ್ಯಕ್ರಮ ನಡೆಯುವ ದಿನಾಂಕವನ್ನು ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ತಿಳಿಸಲಾಗುವುದು. ಸಂಪರ್ಕ ಕಾರ್ಯಕ್ರಮ ನಡೆಯುವ ಕೇಂದ್ರಗಳಲ್ಲಿಯೂ ಈ ಬಗೆಗೆ ಮಾಹಿತಿ ನೀಡಲಾಗುವುದು. ಅಲ್ಲದೆ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿಯೂ ಮಾಹಿತಿ ಲಭ್ಯವಾಗುವುದು.

## ೩.೫ ಆಂತರಿಕ ಮೌಲ್ಯಮಾಪನ (Internal Assessment)

ಆಂತರಿಕ ಮೌಲ್ಯಮಾಪನವು ದೂರಶಿಕ್ಷಣ ಶಿಕ್ಷಣಕ್ರಮದ ಅವಿಭಾಜ್ಯ ಅಂಗವಾಗಿದೆ. ದೂರಶಿಕ್ಷಣ ನಿರ್ದೇಶನಾಲಯದಿಂದ ಪಡೆದ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಕಲಿಕಾರ್ಥಿಗಳು ಎಷ್ಟರ ಮಟ್ಟಿಗೆ ಗ್ರಹಿಸಿದ್ದಾರೆ ಎಂಬುದನ್ನು ಪರೀಕ್ಷಿಸುವುದು ಇದರ ಉದ್ದೇಶವಾಗಿರುತ್ತದೆ. ಅಲ್ಲದೇ, ಇದು ಕಲಿಕಾರ್ಥಿಯ ಅಧ್ಯಯನದ ಪ್ರಗತಿಗೂ ಸಹಕಾರಿಯಾಗುತ್ತದೆ. ಕಲಿಕಾರ್ಥಿಗಳ ಅನುಕೂಲಕ್ಕಾಗಿ ಆಂತರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ದೂರಶಿಕ್ಷಣವು ಎರಡು ಬಗೆಯ ಪದ್ಧತಿಗಳನ್ನು ಅನುಸರಿಸುತ್ತದೆ.

೧. ಅನಿವಾರ್ಯ ಕಾರಣಗಳಿಂದಾಗಿ ಸಂಪರ್ಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದವರು ಪ್ರತಿ ಕೋರ್ಸಿನಲ್ಲಿ ಎಳ ಅಳತೆಯ ೧೦ ಪುಟಗಳ ೨ ಸ್ವಲಿಖಿತ ನಿಬಂಧ (ಗೃಹಪತ್ರ)ಗಳನ್ನು ಸಲ್ಲಿಸಬೇಕು.

೨. ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ (www.kannadauniversity.org) ಮತ್ತು ದೂರಶಿಕ್ಷಣ ನಿರ್ದೇಶನಾಲಯ ಹಾಗೂ ಮಾನ್ಯತೆ ಪಡೆದ ಅಧ್ಯಯನ ಕೇಂದ್ರಗಳಲ್ಲಿ ನಿಬಂಧ(ಗೃಹಪತ್ರ)ಗಳ ಪ್ರಶ್ನೆಗಳು ದೊರಕುತ್ತವೆ. ವೈಯಕ್ತಿಕವಾಗಿ ನಿಬಂಧಗಳ ಪ್ರಶ್ನೆಗಳಿಗೆ ಸಂಬಂಧಿಸಿ ದಂತೆ ಪ್ರತ್ಯೇಕ ಸೂಚನೆಯನ್ನು ಕಳುಹಿಸಲಾಗುವುದಿಲ್ಲ. ನಿಬಂಧಗಳನ್ನು ಸಲ್ಲಿಸುವ ಮುಂಚೆ ಅವುಗಳ ಪ್ರತಿಯನ್ನು ಹಾಗೂ ಸಲ್ಲಿಸಿದುದರ ಬಗೆಗಿನ ಸಾಕ್ಷಿ ಪುರಾವೆಯನ್ನು ತಮ್ಮ ಆಧಾರಕ್ಕಾಗಿ ಇಟ್ಟುಕೊಳ್ಳತಕ್ಕದ್ದು.

೩. ಸ್ವೀಕೃತಿಯೊಂದಿಗೆ ವೈಯಕ್ತಿಕವಾಗಿ ಅಥವಾ ನೋಂದಣಿ ಅಂಚೆ ಮೂಲಕ ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲ ಯದ ನಿರ್ದೇಶಕರಿಗೆ ನಿಬಂಧ(ಗೃಹಪತ್ರ)ಗಳನ್ನು ಕಳುಹಿಸತಕ್ಕದ್ದು.

೪. ವಾರ್ಷಿಕ ಪರೀಕ್ಷಾ ಪೂರ್ವದಲ್ಲಿಯೇ ನಿಬಂಧ(ಗೃಹಪತ್ರ)ಗಳನ್ನು ಮೌಲ್ಯಮಾಪನಕ್ಕಾಗಿ ಸಲ್ಲಿಸಬೇಕು. ಉನ್ನತಿಗೋಸ್ಕರ ಎರಡನೇ ಬಾರಿಗೆ ನಿಬಂಧಗಳನ್ನು ಸಲ್ಲಿಸುವಂತಿಲ್ಲ.

೫. ಮೌಲ್ಯಮಾಪನದ ನಂತರ ಬಂದ ನಿಬಂಧ(ಗೃಹಪತ್ರ)ಗಳನ್ನು ಮೌಲ್ಯಮಾಪನಕ್ಕಾಗಿ ಸ್ವೀಕರಿಸಲಾಗುವುದಿಲ್ಲ.

## ೩.೬ ಫಲಿತಾಂಶ ಘೋಷಣೆ

೧. ಪ್ರತಿಯೊಂದು ಕೋರ್ಸ್‌ನಲ್ಲಿ ವಿನಾಯಿತಿ ಪಡೆಯಲು ಆಂತರಿಕ ಮೌಲ್ಯಮಾಪನದ ಅಂಕಗಳು ಸೇರಿದಂತೆ ಶೇಕಡ ೪೦ರಷ್ಟು ಅಂಕಗಳನ್ನು ಗಳಿಸಬೇಕು.

೨. ಪ್ರತಿಯೊಂದು ಕೋರ್ಸ್‌ನಲ್ಲೂ ಲಿಖಿತ ಪರೀಕ್ಷೆಯಲ್ಲಿ ೩೫ ಅಂಕಗಳನ್ನು ಅಭ್ಯರ್ಥಿ ಪಡೆಯಬೇಕು ಮತ್ತು ಆಂತರಿಕ ಮೌಲ್ಯಮಾಪನದ ಅಂಕಗಳು ಸೇರಿದಂತೆ ಒಟ್ಟಾರೆಯಾಗಿ ಎಲ್ಲಾ ಕೋರ್ಸ್‌ಗಳಿಂದ ಶೇಕಡ ೪೦ ಅಂಕಗಳನ್ನು ಪಡೆಯಬೇಕು. ಪ್ರಥಮ ಅಥವಾ ಅಂತಿಮ ಅಥವಾ ಎರಡೂ ಪರೀಕ್ಷೆಗಳಲ್ಲಿ ವಿದ್ಯಾರ್ಥಿಯು ಎಲ್ಲಾ ಐದು ಕೋರ್ಸ್‌ಗಳಲ್ಲಿ ಪರೀಕ್ಷೆ ತೆಗೆದುಕೊಂಡಾಗ ಈ ನಿಯಮ ಅನ್ವಯವಾಗುತ್ತದೆ. ಅಭ್ಯರ್ಥಿಯು ಐದು ಕೋರ್ಸ್‌ಗಳಿಗಿಂತ ಕಡಿಮೆ ಕೋರ್ಸ್‌ಗಳಲ್ಲಿ ಪರೀಕ್ಷೆ ತೆಗೆದುಕೊಂಡಾಗ ಪರೀಕ್ಷೆ ತೆಗೆದುಕೊಂಡ ಎಲ್ಲಾ ಕೋರ್ಸ್‌ಗಳಲ್ಲು ಆಂತರಿಕ ನಿಬಂಧಗಳ ಅಂಕಗಳು ಸೇರಿದಂತೆ ಶೇಕಡ ೪೦ ಅಂಕಗಳನ್ನು ಗಳಿಸಲೇಬೇಕು.

೩. ಅಭ್ಯರ್ಥಿಗಳು ಎರಡನೇ ಪ್ರಯತ್ನದಲ್ಲಿ ಯಾವುದೇ ಕೋರ್ಸ್‌ನಲ್ಲಿ ಶೇಕಡ ೪೦ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಾಗ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವುದಾಗಿ ಘೋಷಿಸುವುದಿಲ್ಲ. ಇದರರ್ಥ, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಅಭ್ಯರ್ಥಿ ಎರಡನೆ ಪ್ರಯತ್ನದಲ್ಲಿ ಶೇ.೪೦ರಷ್ಟು ಅಂಕಗಳನ್ನು ಪಡೆಯಲೇಬೇಕು.

೪. ವಾರ್ಷಿಕ ಪರೀಕ್ಷೆಯ ಕೊನೆಯಲ್ಲಿ ಒಟ್ಟಾರೆ ಶೇ.೪೦ರಷ್ಟು ಅಂಕಗಳನ್ನು ವಿದ್ಯಾರ್ಥಿ ಪಡೆಯಬೇಕು. ಶೇಕಡ ೪೦ಕ್ಕಿಂತ ಕಡಿಮೆ ಅಂಕಗಳನ್ನು ವಿದ್ಯಾರ್ಥಿ ಪಡೆದರೆ ಅನುತ್ತೀರ್ಣನಾಗಿದ್ದಾನೆಂದು/ಳೆಂದು ಪರಿಗಣಿಸಲಾಗುತ್ತದೆ. ಹೀಗಾಗಿ ವಿದ್ಯಾರ್ಥಿ ಪುನಃ ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾಗುತ್ತದೆ.

೫. ಕಾರಣಾಂತರಗಳಿಂದ ಆಂತರಿಕ ಅಂಕಗಳನ್ನು ಪಡೆಯಲು ಆಗದಿದ್ದಾಗ ಉತ್ತೀರ್ಣ ಹೊಂದಲು ಕನಿಷ್ಠ ಅಂಕಗಳಾದ ಶೇ. ೪೦ನ್ನು ಲಿಖಿತ ಪರೀಕ್ಷೆಯಲ್ಲಿಯೇ ಗಳಿಸುವುದು ಕಡ್ಡಾಯವಾಗಿರುವುದು.

### ೩.೬.೧ ಶ್ರೇಯಾಂಕ ಪದ್ಧತಿ

ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದವು ಎಲ್ಲ ಕಾರ್ಯಕ್ರಮಗಳ ಅಡಿಯಲ್ಲಿಯ ಶಿಕ್ಷಣ ಕ್ರಮಗಳಿಗೆ ಶ್ರೇಯಾಂಕ ಪದ್ಧತಿ(ಕ್ರೆಡಿಟ್)ಯನ್ನು ಅನುಸರಿಸಿದೆ. ಒಂದು ಶ್ರೇಯಾಂಕ ೧೮ ಗಂಟೆಗಳ ಅಧ್ಯಯನ ಅವಧಿಯದಾಗಿದ್ದು ಎಲ್ಲಾ ಕಲಿಕಾ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಪ್ರತಿ ಕೋರ್ಸ್‌ನಲ್ಲಿ ೬ ಶ್ರೇಯಾಂಕಗಳಿದ್ದು ಇದು ಒಟ್ಟು ೧೮೦ ಗಂಟೆಗಳ ಅಧ್ಯಯನ ಅವಧಿಯನ್ನು ಒಳಗೊಂಡಿರುತ್ತದೆ. ಸ್ನಾತಕೋತ್ತರ ಕಾರ್ಯಕ್ರಮಗಳ ಅಡಿಯಲ್ಲಿಯ ಶಿಕ್ಷಣಕ್ರಮವನ್ನು ಪೂರ್ಣಗೊಳಿಸಲು ವಿದ್ಯಾರ್ಥಿಯು ೬೦ ಶ್ರೇಯಾಂಕಗಳನ್ನು ಮತ್ತು ಸ್ನಾತಕೋತ್ತರ ಡಿಪ್ಲೊಮ ಹಾಗೂ ಡಿಪ್ಲೊಮ ಅಧ್ಯಯನ ಪೂರ್ಣಗೊಳಿಸಲು ವಿದ್ಯಾರ್ಥಿಯು ೩೦ ಶ್ರೇಯಾಂಕಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಅಗತ್ಯವಿದೆ. ಈ ಶ್ರೇಯಾಂಕ ಪದ್ಧತಿಯು ಕೋರ್ಸ್‌ನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ವಿದ್ಯಾರ್ಥಿಯು ಮಾಡಬಹುದಾದ ಶೈಕ್ಷಣಿಕ ಪ್ರಯತ್ನಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಮುಕ್ತ ದೂರಕಲಿಕಾ ವ್ಯವಸ್ಥೆಯಲ್ಲಿ 'ಪತ್ರಿಕೆ' ಎಂದರೆ 'ಕೋರ್ಸ್' ಎಂದು ಪರಿಗಣಿತವಾಗುತ್ತದೆ. ಈ ಹಿಂದೆ ಪರಿಭಾವಿಸಿಕೊಳ್ಳಲಾದ ಕೋರ್ಸ್‌ಗಳು ಇಲ್ಲಿ 'ಶಿಕ್ಷಣಕ್ರಮ' ವೆನ್ನಿಸಿಕೊಳ್ಳುತ್ತವೆ. ಉದಾ: ಎಂ ಎ ಕನ್ನಡ, ಚರಿತ್ರೆ, ಸಮಾಜಶಾಸ್ತ್ರ ಇತ್ಯಾದಿ. ಡಿಪ್ಲೊಮ, ಸ್ನಾತಕೋತ್ತರ ಡಿಪ್ಲೊಮ, ಸ್ನಾತಕೋತ್ತರ ಎಂಬ ಶೀರ್ಷಿಕೆಗಳಿಗೆ 'ಕಾರ್ಯಕ್ರಮ' ಎನ್ನಲಾಗುವುದು. ಸ್ನಾತಕೋತ್ತರ ಶಿಕ್ಷಣಕ್ರಮದ ಪ್ರಥಮ ವರ್ಷದಲ್ಲಿ ೫ ಕೋರ್ಸ್‌ಗಳು ಮತ್ತು ಅಂತಿಮ ವರ್ಷದಲ್ಲಿ ೫ ಕೋರ್ಸ್‌ಗಳು ಇರುತ್ತವೆ. ಒಂದು ವರ್ಷದ ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮದಲ್ಲಿ ೫ ಕೋರ್ಸ್‌ಗಳಿರುವವು. ಆದರೆ ಡಿಪ್ಲೊಮದಲ್ಲಿ ೫ ಕೋರ್ಸ್‌ಗಳಿದ್ದರೂ ೫ನೇ ಕೋರ್ಸಿನಲ್ಲಿ ಪ್ರಯೋಗ/ಸಂಪ್ರಬಂಧ/ಪ್ರವಾಸ/ಮೌಖಿಕ ಪರೀಕ್ಷೆ ಇರುವುದು.

### ೩.೬.೨ ಉತ್ತೀರ್ಣಗೊಂಡ ಅಭ್ಯರ್ಥಿಗಳ ವರ್ಗೀಕರಣ

ಪ್ರಥಮ ಮತ್ತು ಅಂತಿಮ ಪರೀಕ್ಷೆಗಳೆರಡರಲ್ಲೂ ವಿದ್ಯಾರ್ಥಿಗಳಿಸಿದ ಒಟ್ಟು ಅಂಕಗಳನ್ನು ಕ್ರೋಡೀಕರಿಸಿ ಶ್ರೇಣಿ ಮತ್ತು ವರ್ಗವನ್ನು ಘೋಷಿಸಲಾಗುವುದು. ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಕಾರ್ಯಕ್ರಮಗಳಲ್ಲಿಯ ಒಂದು ವರ್ಷದ ಒಟ್ಟು ಅಂಕಗಳನ್ನು ಕ್ರೋಡೀಕರಿಸಿ ಶ್ರೇಣಿ ಮತ್ತು ವರ್ಗವನ್ನು ಘೋಷಿಸಲಾಗುವುದು.

೧. ಶಿಕ್ಷಣಕ್ರಮಗಳ ಶ್ರೇಣಿ

| ಅಕ್ಷರ ಶ್ರೇಣಿ | ಶ್ರೇಣಿ | ಗಣಾಂಕ | ಶೇಕಡ |
|---|---|---|---|
| ಎ | ಉತ್ಕೃಷ್ಟ | ೫ | ಶೇಕಡ ೮೦ ಕ್ಕಿಂತ ಹೆಚ್ಚು |
| ಬಿ | ಅತ್ಯುತ್ತಮ | ೪ | ೬೦-೭೯.೯ |
| ಸಿ | ಉತ್ತಮ | ೩ | ೫೦-೫೯.೯ |
| ಡಿ | ತೃಪ್ತಿಕರ | ೨ | ೪೦-೪೯.೯ |
| ಇ | ತೃಪ್ತಿಕರವಲ್ಲ | ೧ | ಶೇಕಡ ೫೯.೯ಕ್ಕಿಂತ ಕಡಿಮೆ |

೨. ಶಿಕ್ಷಣಕ್ರಮಗಳ ವರ್ಗ

| | |
|---|---|
| ಪ್ರಥಮ ದರ್ಜೆ | ಶೇಕಡ ೬೦ ಮತ್ತು ಅದಕ್ಕಿಂತ ಹೆಚ್ಚು |
| ದ್ವಿತೀಯ ದರ್ಜೆ | ಶೇಕಡ ೫೦ ಆದರೆ ೬೦ಕ್ಕಿಂತ ಕಡಿಮೆ |
| ತೃತೀಯ ದರ್ಜೆ | ಶೇಕಡ ೪೦ ಆದರೆ ೫೦ಕ್ಕಿಂತ ಕಡಿಮೆ |

### ೩.೭ ಮರು ಎಣಿಕೆ ಮತ್ತು ಮರು/ಸವಾಲು ಮೌಲ್ಯಮಾಪನ

ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯವು ವೆಬ್‌ಸೈಟ್‌ನಲ್ಲಿ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಿದ ಒಂದು ತಿಂಗಳ ಒಳಗಾಗಿ ಡಿಪ್ಲೊಮಗಳ ಪರೀಕ್ಷಾರ್ಥಿಗಳು ಅಂಕಗಳ ಮರು ಎಣಿಕೆ ಅಥವಾ ಕೋರ್ಸ್(ಪತ್ರಿಕೆ)ನ ಮರು ಮೌಲ್ಯಮಾಪನಕ್ಕೆ ಮತ್ತು ಸ್ನಾತಕೋತ್ತರ ಪರೀಕ್ಷಾರ್ಥಿಗಳು ಕೋರ್ಸ್‌ನ ಸವಾಲು ಮೌಲ್ಯಮಾಪನಕ್ಕೆ ನಿಗದಿತ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಬಹುದು. ಫಲಿತಾಂಶ ಪ್ರಕಟವಾದ ೩೦ ದಿನಗಳ ಒಳಗೆ ಅರ್ಜಿಯನ್ನು ನೋಂದಣಿಯುತ ಅಂಚೆಯ ಮೂಲಕ ಅಥವಾ ಖುದ್ದಾಗಿ ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ ಇವರಿಗೆ ಸಲ್ಲಿಸಬೇಕು.

### ೩.೮ ಪರೀಕ್ಷೆ ಪುನಃ ತೆಗೆದುಕೊಳ್ಳಲು

ಪರೀಕ್ಷೆಯಲ್ಲಿ ಅನುತ್ತೀರ್ಣರೆಂದು ಘೋಷಿತರಾದ ಅಭ್ಯರ್ಥಿಗಳು ಈ ಕೆಳಕಂಡ ನಿಯಮಾನುಸಾರ ಪರೀಕ್ಷೆಗೆ ಪುನಃ ಕೂರಬಹುದು.

೧. ಡಿಪ್ಲೊಮ ಅಥವಾ ಸ್ನಾತಕೋತ್ತರ ಡಿಪ್ಲೊಮ ಪರೀಕ್ಷೆಯ ಮೊದಲ ಕೂರುವಿಕೆಯು ಸೇರಿದಂತೆ ಇಂಥ ಪರೀಕ್ಷೆ ತೆಗೆದುಕೊಳ್ಳುವ ಅವಕಾಶಗಳನ್ನು ಎರಡಕ್ಕೆ ಸೀಮಿತಗೊಳಿಸಿದೆ. ಈ ಅವಕಾಶಗಳನ್ನು ಪ್ರವೇಶ ಪಡೆದ ವರ್ಷವೂ ಸೇರಿದಂತೆ ಎರಡು ವರ್ಷಗಳೊಳಗೆ ಉಪಯೋಗಿಸಿಕೊಳ್ಳಬೇಕು.

೨. ಸ್ನಾತಕೋತ್ತರ ಪರೀಕ್ಷೆಯ ಮೊದಲ ಕೂರುವಿಕೆಯು ಸೇರಿದಂತೆ ಇಂಥ ಪರೀಕ್ಷೆ ತೆಗೆದುಕೊಳ್ಳುವ ಅವಕಾಶಗಳನ್ನು ನಾಲ್ಕಕ್ಕೆ ಸೀಮಿತಗೊಳಿಸಿದೆ. ಈ ಅವಕಾಶಗಳನ್ನು ಪ್ರವೇಶ ಪಡೆದ ವರ್ಷವೂ ಸೇರಿದಂತೆ ನಾಲ್ಕು ವರ್ಷಗಳೊಳಗೆ ಉಪಯೋಗಿಸಿಕೊಳ್ಳಬೇಕು.

೩. ಪುನಃ ಪರೀಕ್ಷೆ ತೆಗೆದುಕೊಳ್ಳುವವರಿಗೆ ಹಳೆಯ ಪಠ್ಯ ಹಾಗೂ ಪರೀಕ್ಷಾಕ್ರಮ ಜಾರಿಯಲ್ಲಿರುವುದು.

### ೩.೯ ದರ್ಜೆಯ ಉತ್ತಮೀಕರಣ

ಪ್ರಥಮ ಅಥವಾ ಅಂತಿಮ ವರ್ಷದ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣ ಎಂದು ಘೋಷಿಸಲಾದ ಅಭ್ಯರ್ಥಿ ತನ್ನ ಘೋಷಿತ ಫಲಿತಾಂಶವನ್ನು ತಿರಸ್ಕರಿಸದೆ ಉತ್ತಮೀಕರಿಸಲು ಪ್ರಥಮ ಅಥವಾ ಅಂತಿಮ ಅಥವಾ ಎರಡೂ ವರ್ಷಗಳ ಪರೀಕ್ಷೆಯನ್ನು ತೆಗೆದುಕೊಂಡು ಅಂತಿಮವಾಗಿ ತನಗೆ ಅನುಕೂಲವಾದ ಮೊದಲಿನ ಫಲಿತಾಂಶವನ್ನೋ ಅಥವಾ ನಂತರ ಪರೀಕ್ಷೆ ತೆಗೆದುಕೊಂಡು ಬಂದ ಫಲಿತಾಂಶವನ್ನೋ ಉಳಿಸಿಕೊಳ್ಳುವ ಅವಕಾಶ ಒದಗಿಸಿರುವುದು ಕೆಳಗಿನ ನಿಬಂಧನೆಗೆ ಒಳಪಟ್ಟಿದೆ.

೧. ಉತ್ತಮೀಕರಣದ ಪ್ರಯತ್ನದ ಅವಕಾಶಗಳನ್ನು ಮೂರು ಬಾರಿಗೆ ಸೀಮಿತಗೊಳಿಸಲಾಗಿದೆ. ಇಂತಹ ಅವಕಾಶಗಳನ್ನು ಮೊದಲು ಪರೀಕ್ಷೆಯನ್ನು ತೆಗೆದುಕೊಂಡ ವರ್ಷದಿಂದ ನಾಲ್ಕು ವರ್ಷಗಳೊಳಗೆ ಬಳಸಿಕೊಳ್ಳಬೇಕು.

೨. ದರ್ಜೆಯ ಉತ್ತಮೀಕರಣವನ್ನು ಕೋರುವ ಅರ್ಜಿಯನ್ನು ಪರೀಕ್ಷೆಯು ಆರಂಭವಾಗುವುದಕ್ಕೆ ಮುಂಚಿತವಾಗಿ ನಿಗದಿತ ದಿನಾಂಕದೊಳಗೆ ನಿಗದಿತ ಅರ್ಜಿಯಲ್ಲಿ ಸಲ್ಲಿಸಿ ಅನುಮತಿಯನ್ನು ಪಡೆದುಕೊಳ್ಳಬೇಕು. ಅನುಮತಿ ಪಡೆದ ನಂತರವೇ ದರ್ಜೆಯ ಉತ್ತಮೀಕರಣದ ಪರೀಕ್ಷಾ ಶುಲ್ಕ ಪಾವತಿಸಬೇಕು.

೩. ಪದವಿ ಪ್ರಮಾಣ ಪತ್ರವನ್ನು ಪಡೆದ ಮೇಲೆ ವಿದ್ಯಾರ್ಥಿಗೆ ಉತ್ತಮೀಕರಣಕ್ಕೆ ಅವಕಾಶವಿರುವುದಿಲ್ಲ.

### ೩.೧೦ ಪರೀಕ್ಷಾ ಕೇಂದ್ರಗಳು

ಪರೀಕ್ಷಾ ಕೇಂದ್ರಗಳನ್ನು ನಿರ್ಣಯಿಸುವ ಹಕ್ಕನ್ನು ಕನ್ನಡ ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ. ವಿಶ್ವವಿದ್ಯಾಲಯವು ನಿಗದಿಪಡಿಸಿದ ಸ್ಥಳಗಳಲ್ಲಿ ಪರೀಕ್ಷೆಯನ್ನು ನಡೆಸಲಾಗುತ್ತದೆ. ಪರೀಕ್ಷೆಗಳು ವಿಶ್ವವಿದ್ಯಾಲಯದ ಆವರಣದಲ್ಲಿಯೂ ನಡೆಯಬಹುದು. ಪರೀಕ್ಷಾ ವೇಳಾಪಟ್ಟಿ, ಮತ್ತು ಕೇಂದ್ರಗಳ ವಿವರಗಳು ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ (www.kannadauniversity.org) ನಲ್ಲಿ ದೊರಕುತ್ತವೆ.

## ೩.೧೧ ಇತರೆ ಶುಲ್ಕಗಳು

| | | |
|---|---|---|
| ೧. | ಪರೀಕ್ಷಾ/ಅಧ್ಯಯನ ಕೇಂದ್ರ ಬದಲಾವಣೆ ಶುಲ್ಕ | ರೂ. ೧೫೦೦/- |
| ೨. | ಶಿಕ್ಷಣಕ್ರಮ(ವಿಷಯ) ಬದಲಾವಣೆ ಶುಲ್ಕ | ರೂ. ೫೦೦/- |
| ೩. | ಮರು/ಸವಾಲು ಮೌಲ್ಯಮಾಪನ ಶುಲ್ಕ (ಪ್ರತಿ ಪತ್ರಿಕೆ(ಕೋರ್ಸ್)ಗೆ) | ರೂ. ೫೦೦/- |
| ೪. | ಉತ್ತರಪತ್ರಿಕೆ(ಕೋರ್ಸ್) ವೀಕ್ಷಣೆ ಶುಲ್ಕ (ಪ್ರತಿ ಉತ್ತರಪತ್ರಿಕೆ(ಕೋರ್ಸ್)ಗೆ) | ರೂ. ೨೦೦/- |
| ೫. | ಪ್ರತಿ ಉತ್ತರಪತ್ರಿಕೆಯ ಅಂಕಗಳ ಪುನರ್ ಎಣಿಕೆ ಶುಲ್ಕ | ರೂ. ೩೦೦/- |
| ೬. | ನಕಲು ಅಂಕಪಟ್ಟಿ ಶುಲ್ಕ (ಪ್ರತಿ ವರ್ಷ ವಿಳಂಬ ಶುಲ್ಕ ರೂ. ೫೦/-) | ರೂ. ೩೦೦/- |
| ೭. | ಕ್ರೋಢೀಕೃತ ಅಂಕಪಟ್ಟಿ ಶುಲ್ಕ (ಪ್ರತಿ ವರ್ಷ ವಿಳಂಬ ಶುಲ್ಕ ರೂ. ೫೦/-) | ರೂ. ೩೦೦/- |
| ೮. | ತಾತ್ಕಾಲಿಕ ತೇರ್ಗಡೆ/ನಡತೆ/ವ್ಯಾಸಂಗ ಪ್ರಮಾಣಪತ್ರ ಶುಲ್ಕ | ರೂ. ೧೦೦/- |
| ೯. | ವಲಸೆ ಪ್ರಮಾಣ ಪತ್ರ ಶುಲ್ಕ (ಪ್ರತಿ ವರ್ಷ ವಿಳಂಬ ಶುಲ್ಕ ರೂ. ೫೦/-) | ರೂ. ೩೦೦/- |
| ೧೦. | ಘಟಿಕೋತ್ಸವ ಪ್ರಮಾಣಪತ್ರ ಶುಲ್ಕ (ಪ್ರತಿ ವರ್ಷ ವಿಳಂಬ ಶುಲ್ಕ ರೂ. ೫೦/-) | ರೂ. ೮೦೦/- |
| ೧೧. | ನಕಲು ಗುರುತಿನ ಚೀಟಿ ಶುಲ್ಕ | ರೂ. ೧೦೦/- |
| ೧೨. | ಹೆಸರು ಬದಲಾವಣೆ ಶುಲ್ಕ | ರೂ. ೫೦೦/- |
| ೧೩. | ಎರಡು ವರ್ಷಗಳು ಬಿಟ್ಟ ನಂತರ ಮತ್ತೆ ಶಿಕ್ಷಣಕ್ಕೆ ಸೇರಬಯಸುವವರು ಪಾವತಿಸಬೇಕಾದ ಪುನರ್ ನೋಂದಣಿ ಶುಲ್ಕ (ಪೂರ್ವಾನುಮತಿ ಪಡೆಯಬೇಕು) | ರೂ. ೫೦೦/- |
| ೧೪. | ಬೇಬಾಕಿ ಪತ್ರ | ರೂ. ೨೦೦/- |
| ೧೫. | ನೈಜತೆ ಪ್ರಮಾಣ ಪತ್ರ | ರೂ. ೫೦೦/- |
| ೧೬. | ವಿಳಂಬ ದಂಡ ಶುಲ್ಕ | |
| ೧೬.೧. | ಸಂಪರ್ಕ ತರಗತಿ ಶುಲ್ಕ (ಹಿಂದಿನ ಸಾಲಿನ ವಿದ್ಯಾರ್ಥಿಗಳಿಗೆ ಮಾತ್ರ) | ರೂ. ೫೦೦/- |
| ೧೬.೨. | ಗೃಹಲೇಖನಗಳನ್ನು ತಡವಾಗಿ ಸಲ್ಲಿಸಿದರೆ | ರೂ. ೩೦೦/- |
| | ಒಂದು ವರ್ಷ ಹಿಂದಿನವರಿಗೆ | ರೂ. ೬೦೦/- |
| | ಎರಡು ವರ್ಷ ಅಥವಾ ಅದಕ್ಕಿಂತ ಹಿಂದಿನವರಿಗೆ | ರೂ. ೧೦೦೦/- |

### ೩.೧೧.೧ ಶುಲ್ಕ ಪಾವತಿ

೧. ಅರ್ಜಿ ಸಲ್ಲಿಸಲು ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯವು ನಿಗದಿಪಡಿಸುವ ಕೊನೆಯ ದಿನಾಂಕದಂದು ಅಥವಾ ಆ ದಿನಾಂಕದೊಳಗೆ ಶಿಕ್ಷಣಕ್ರಮಕ್ಕೆ ನಿಗದಿಪಡಿಸಿರುವ ಶುಲ್ಕ ಪಾವತಿಸಬೇಕು.

೨. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯವು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಥವಾ ಮುಂಚೆ ಶುಲ್ಕ ಪಾವತಿ ಮಾಡದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

೩. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಪಾವತಿಸಲಾದ ಎಲ್ಲಾ ಬಗೆಯ ಶುಲ್ಕಗಳ ಚಲನ್/ಡಿಡಿಗಳ ನೆರಳಚ್ಚು ಪ್ರತಿಯನ್ನು ಎಚ್ಚರಿಕೆಯಿಂದ ಸಂರಕ್ಷಿಸುವುದು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿರುತ್ತದೆ. ಪರೀಕ್ಷಾ ಪ್ರವೇಶಪತ್ರ, ಅಂಕಪಟ್ಟಿ ಮತ್ತಿತರೆ ದಾಖಲೆಗಳನ್ನು ಪಡೆಯುವ ಸಂದರ್ಭದಲ್ಲಿ ವಿದ್ಯಾರ್ಥಿ ಇವುಗಳನ್ನು ಸಲ್ಲಿಸಬೇಕು/ಸಾದರಪಡಿಸಬೇಕು..

೪. ಪ್ರವೇಶಾತಿ ಅನುಮೋದನೆಗೊಂಡ ಮೇಲೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಶಾಶ್ವತ ನೋಂದಣಿ ಸಂಖ್ಯೆಯ 'ಗುರುತು ಪತ್ರ'ವನ್ನು ನೀಡಲಾಗುವುದು. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದೊಂದಿಗೆ ವ್ಯವಹರಿಸುವ ಎಲ್ಲಾ ವ್ಯವಹಾರಗಳಿಗೂ ವಿದ್ಯಾರ್ಥಿಯು ನೋಂದಣಿ ಸಂಖ್ಯೆ ಮತ್ತು ಶಿಕ್ಷಣಕ್ರಮವನ್ನು ಉಲ್ಲೇಖಿಸಬೇಕು.

### ೩.೧೨ ಸಾಮಾನ್ಯ ಮಾಹಿತಿ

೧. ಪ್ರಸಕ್ತ ವರ್ಷದ ಪ್ರವೇಶ ಅರ್ಜಿಯನ್ನು ಮಾತ್ರ ಬಳಸಿರಿ. ಹಿಂದಿನ ವರ್ಷಗಳಲ್ಲಿ ನೀಡಲಾದ ಪ್ರವೇಶ ಅರ್ಜಿಗಳನ್ನು ಮಾನ್ಯ ಮಾಡುವುದಿಲ್ಲ.

೨. ಪ್ರವೇಶ ಅರ್ಜಿಯ ವಿವರಣಾ ಪುಸ್ತಕವನ್ನು ಓದಿಕೊಂಡ ನಂತರ ಸ್ಪಷ್ಟವಾಗಿ ಭರ್ತಿ ಮಾಡಿ. ಅಧ್ಯಯನ ಮಾಡಲು ಇಚ್ಛಿಸುವ ಶಿಕ್ಷಣಕ್ರಮವನ್ನು ಈ ಉದ್ದೇಶಕ್ಕಾಗಿ ಪ್ರವೇಶ ಅರ್ಜಿಯಲ್ಲಿ ಒದಗಿಸಿರುವ ಕಾಲಂನಲ್ಲಿ ನಮೂದಿಸಬೇಕು.

೩. ಅಭ್ಯರ್ಥಿಗಳು ಪ್ರವೇಶ ಅರ್ಜಿಯನ್ನು ಭರ್ತಿ ಮಾಡುವಾಗ ಪ್ರವೇಶಕ್ಕೆ ನಿಗದಿಪಡಿಸಿದ ಅರ್ಹತೆಯ ಅಂಕಪಟ್ಟಿಯಲ್ಲಿಯ ಹೆಸರನ್ನು (ಕನ್ನಡ ಮತ್ತು ಇಂಗ್ಲಿಶ್) ಮಾತ್ರ ನಮೂದಿಸುವುದು.

೪. ಅಭ್ಯರ್ಥಿಯು ಜನ್ಮ ದಿನಾಂಕವನ್ನು ಪ್ರವೇಶ ಅರ್ಜಿಯಲ್ಲಿ ಭರ್ತಿ ಮಾಡುವಾಗ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿ ನಮೂದಾಗಿರುವಂತೆ ದಾಖಲಿಸುವುದು.

೫. ನೋಂದಣಿ, ಪ್ರವೇಶ, ಕೋರ್ಸ್ ಶುಲ್ಕ ಮತ್ತು ದಂಡ ಶುಲ್ಕ (ಇದ್ದಲ್ಲಿ) – ಈ ಎಲ್ಲಾ ಶುಲ್ಕಗಳನ್ನು ಒಂದೇ ಕಂತಿನಲ್ಲಿ ಕಟ್ಟಬಹುದು. ಸಾಧ್ಯವಿಲ್ಲದಿದ್ದಲ್ಲಿ ನೋಂದಣಿ ಮತ್ತು ಪ್ರವೇಶ ಶುಲ್ಕವನ್ನು ಪಾವತಿಸಿ ಪ್ರವೇಶ ಪಡೆಯುವುದು. ಸಂಪರ್ಕ ಕಾರ್ಯಕ್ರಮಕ್ಕಿಂತ ಮುಂಚಿತವಾಗಿ ಕೋರ್ಸ್/ಬೋಧನಾ ಶುಲ್ಕವನ್ನು ಪಾವತಿಸಿ ನಿಗದಿತ ಪಠ್ಯಗಳನ್ನು ತೆಗೆದುಕೊಳ್ಳಬಹುದು.

೬. ನಿರ್ದಿಷ್ಟಪಡಿಸಿದ ಶುಲ್ಕವನ್ನು ಸಂದಾಯ ಮಾಡುವ ಮೊದಲು ಯಾವ ಶಿಕ್ಷಣಕ್ರಮಕ್ಕೆ ಸೇರಬಯಸಲು ಇಚ್ಛಿಸಿದ್ದಾರೋ ಆ ಶಿಕ್ಷಣಕ್ರಮಕ್ಕೆ ಅಗತ್ಯವಾಗಿರುವ ಪ್ರವೇಶಾರ್ಹತಾ ನಿಬಂಧನೆಗಳನ್ನು ಹೊಂದಿರುವುದರ ಕುರಿತು ಖಾತರಿಪಡಿಸಕೊಳ್ಳಬೇಕು.

೭. ಕನ್ನಡ ವಿಶ್ವವಿದ್ಯಾಲಯ ಮತ್ತು ಇತರೆ ವಿಶ್ವವಿದ್ಯಾಲಯಗಳ ಯಾವುದೇ ಪದವಿಯ ಶಿಕ್ಷಣಕ್ರಮಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ಯಾವುದಾದರೊಂದು ಡಿಪ್ಲೊಮ ಅಥವಾ ಸರ್ಟಿಫಿಕೇಟ್ ಶಿಕ್ಷಣಕ್ರಮಕ್ಕೆ ಪ್ರವೇಶಾತಿಯನ್ನು ಪಡೆದು ಏಕಕಾಲದಲ್ಲಿಯೇ ಸಮಾನಾಂತರವಾಗಿ ವ್ಯಾಸಂಗ ಮಾಡಲು ಅವಕಾಶವಿರುತ್ತದೆ.

೮. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಆಗಲಿ ಅಥವಾ ಇನ್ಯಾವುದೇ ವಿಶ್ವವಿದ್ಯಾಲಯದಲ್ಲಿ ಆಗಲಿ ವಿದ್ಯಾರ್ಥಿ ಏಕಕಾಲದಲ್ಲಿ ಎರಡು ಪದವಿ ಶಿಕ್ಷಣಕ್ರಮಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ವಿದ್ಯಾರ್ಥಿ ಒಂದಕ್ಕಿಂತ ಹೆಚ್ಚು ಸ್ನಾತಕೋತ್ತರ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ಪಡೆದಿದ್ದರೆ, ಯಾವುದೇ ಮುನ್ಸೂಚನೆ ನೀಡದೆ ನಿಯಮ ಬಾಹಿರ ಪ್ರವೇಶಾತಿ ಎಂದು ಪರಿಗಣಿಸಿ ರದ್ದುಗೊಳಿಸಲಾಗುವುದು.

೯. ವಯಸ್ಸು, ವಿದ್ಯಾರ್ಹತೆ ಅಥವಾ ಸವಲತ್ತುಗಳ ಉಲ್ಲಂಘನೆ ಇತ್ಯಾದಿ ವಿಷಯಗಳನ್ನು ಕುರಿತ ಮಾಹಿತಿಯನ್ನು ವಿದ್ಯಾರ್ಥಿಯು ಮುಚ್ಚಿಟ್ಟಿರುವುದು ಕಂಡುಬಂದರೆ ಅಂತಹ ವಿದ್ಯಾರ್ಥಿಯ ಪ್ರವೇಶಾತಿಯನ್ನು ರದ್ದುಗೊಳಿಸಲಾಗುವುದು ಮತ್ತು ಇನ್ನಿತರೆ ಸೌಲಭ್ಯಗಳಿಂದ ವಂಚಿತರಾಗುವಂತೆ ಮಾಡಲಾಗುತ್ತದೆ. ಇಂಥವರ ಮೇಲೆ ಸರಿಯಾದ ಶಿಸ್ತುಕ್ರಮ ಜರುಗಿಸಲಾಗುವುದು ಹಾಗೂ ದಂಡ ವಿಧಿಸಲಾಗುವುದು.

೧೦. ಈಗ ಜಾರಿಯಲ್ಲಿರುವ ಹಾಗೂ ಕಾಲದಿಂದ ಕಾಲಕ್ಕೆ ಕನ್ನಡ ವಿಶ್ವವಿದ್ಯಾಲಯ, ದೂರಶಿಕ್ಷಣ ನಿರ್ದೇಶನಾಲಯ ಹೊರಡಿಸುವ ನಿಯಮ, ನಿಬಂಧನೆಗಳಿಗೆ ಅಭ್ಯರ್ಥಿಗಳು ಬದ್ದರಾಗಿರಬೇಕು.

೧೧. ಯಾವುದೇ ಶಿಕ್ಷಣಕ್ರಮಕ್ಕೆ ಮಾಡಲಾದ ಪ್ರವೇಶವು ವಿಶ್ವವಿದ್ಯಾಲಯದಿಂದ ಅಂತಿಮವಾಗಿ ಅನುಮೋದನೆಯಾಗುವವರೆವಿಗೂ ತಾತ್ಕಾಲಿಕವಾಗಿರುತ್ತದೆ.

೧೨. ಯಾವುದೇ ಕಾನೂನು ವಿವಾದಗಳು ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರದ ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಒಳಪಟ್ಟಿರುತ್ತವೆ.

೧೩. ಕೊನೆಯ ದಿನಾಂಕ ರಜಾ ದಿನವಾಗಿದ್ದಲ್ಲಿ, ಅದರ ಮುಂದಿನ ಕೆಲಸದ ದಿನ ಕೊನೆಯ ದಿನಾಂಕವಾಗಿರುತ್ತದೆ.

೧೪. ಎಲ್ಲಾ ಭಾನುವಾರ, ಸಾರ್ವತ್ರಿಕ ರಜಾದಿನ ಹಾಗೂ ಪ್ರತಿ ತಿಂಗಳ ಎರಡನೇ ಶನಿವಾರಗಳಂದು ಕನ್ನಡ ವಿಶ್ವವಿದ್ಯಾಲಯ, ದೂರಶಿಕ್ಷಣದ ಕಾರ್ಯಾಲಯ ಹಾಗೂ ಗ್ರಂಥಾಲಯ ಮುಚ್ಚಿರುತ್ತವೆ.

೧೫. ಅಭ್ಯರ್ಥಿಗಳು ಪರೀಕ್ಷಾ ಶುಲ್ಕವನ್ನು ಚಲನ್/ಡಿಡಿ ಮೂಲಕ ಪಾವತಿಸಬೇಕು. ಇದನ್ನು ಪರೀಕ್ಷಾ ಅರ್ಜಿಯ ಜೊತೆಗೆ ಲಗತ್ತಿಸಿ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕು.

೧೬. ಯಾವುದೇ ಶಿಕ್ಷಣಕ್ರಮದ ವಾರ್ಷಿಕ ಪರೀಕ್ಷೆಗೆ ಕೂರಲು ವಿದ್ಯಾರ್ಥಿಗಳು ಈ ಕೆಳಗೆ ನಮೂದಿಸಿರುವ ನಿಬಂಧನೆಗಳನ್ನು ಪೂರೈಸಬೇಕು.

- ಆಯಾ ವರ್ಷದ ಬೋಧನಾ ಶುಲ್ಕವನ್ನು ಪಾವತಿ ಮಾಡಿರಬೇಕು.
- ಆಯಾ ನಿರ್ದಿಷ್ಟ ಶಿಕ್ಷಣಕ್ರಮವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿರಬೇಕು.
- ಸಕಾಲದಲ್ಲಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಿರಬೇಕು.
- ಶಿಕ್ಷಣಕ್ರಮದ ನೋಂದಣಿ ದೃಢೀಕೃತವಾಗಿರಬೇಕು.

೧೭. ಪರೀಕ್ಷಾ ಶುಲ್ಕವನ್ನು ಪಾವತಿಸಲು ವಿದ್ಯಾರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ವೈಬ್‌ಸೈಟನ್ನು ನೋಡಬೇಕು. ಪರೀಕ್ಷಾ ವೇಳಾಪಟ್ಟಿ ಬಗೆಗೆ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಮಾಹಿತಿಯನ್ನು ನೀಡಲಾಗುವುದಿಲ್ಲ. ಪರೀಕ್ಷಾ ದಿನಾಂಕಗಳ ಬಗೆಗೆ ವಿದ್ಯಾರ್ಥಿಗಳು ಅಧ್ಯಯನ ಕೇಂದ್ರಗಳು ಅಥವಾ ಕೇಂದ್ರ ಕಚೇರಿಯನ್ನು ಸಂಪರ್ಕಿಸಬೇಕು.

೧೮. ಪರೀಕ್ಷಾ ದಿನಾಂಕ ಮತ್ತು ಕಾಲ ನಮೂದಿಸಿರುವ ವೇಳಾಪಟ್ಟಿಯನ್ನು ಹದಿನೈದು ದಿನ ಮುಂಚಿತವಾಗಿಯೇ ದೂರಶಿಕ್ಷಣ ನಿರ್ದೇಶನಾಲಯದ ಎಲ್ಲಾ ಅಧ್ಯಯನ ಕೇಂದ್ರ ಮತ್ತು ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಿಕೊಡಲಾಗುವುದು. ವಿದ್ಯಾರ್ಥಿಗಳು ಹತ್ತಿರದ ಅಧ್ಯಯನ ಕೇಂದ್ರಗಳಿಂದ ಅಥವಾ ಪರೀಕ್ಷಾ ಕೇಂದ್ರಗಳಿಂದ ಮಾಹಿತಿಯನ್ನು ಪಡೆಯಬಹುದು. ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ (www.kannadauniversity.org) ಸಂದರ್ಶಿಸಬಹುದು. ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಪರೀಕ್ಷಾ ವೇಳಾಪಟ್ಟಿಯ ಬಗೆಗಿನ ಸೂಚನಾ ಸುತ್ತೋಲೆಗಳನ್ನು ಕಳುಹಿಸುವುದಿಲ್ಲ.

೧೯. ಪರೀಕ್ಷೆ ಆರಂಭವಾಗಲು ೧೫ ದಿನಗಳ ಮುಂಚೆಯೇ ವಿದ್ಯಾರ್ಥಿಯು ಪರೀಕ್ಷಾ ಮಾಹಿತಿ ಬಗೆಗೆ ವಿವರ ಪಡೆಯಲು ಹತ್ತಿರದ ಅಧ್ಯಯನ ಕೇಂದ್ರ ಅಥವಾ ಮುಖ್ಯ ಕಾರ್ಯಾಲಯವನ್ನು ಪತ್ರ ಮುಖೇನವೂ ಸಂಪರ್ಕಿಸಬಹುದು. ಪತ್ರ ಬರೆಯುವಾಗ ತನ್ನ ನೋಂದಣಿ ಸಂಖ್ಯೆ, ಹೆಸರು, ವಿಳಾಸ ಮತ್ತು ಶಿಕ್ಷಣದ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು.

೨೦. ವಿದ್ಯಾರ್ಥಿಗಳು ಪರೀಕ್ಷೆ ಆರಂಭವಾಗುವ ಮೂರು ದಿನದ ಮುಂಚೆ ತಮ್ಮ ಪರೀಕ್ಷಾ ಕೇಂದ್ರದ ಸಂಯೋಜಕರಿಂದ ವಾರ್ಷಿಕ ಪರೀಕ್ಷೆಯ ಪ್ರವೇಶ ಪತ್ರವನ್ನು ಪಡೆಯಬೇಕು. ಪರೀಕ್ಷಾ ಪ್ರವೇಶಾತಿ ಪತ್ರವನ್ನು ಅಂಚೆಯ ಮೂಲಕ ನೇರವಾಗಿ ವಿದ್ಯಾರ್ಥಿಗಳಿಗೆ ಕಳುಹಿಸುವುದಿಲ್ಲ. ಪರೀಕ್ಷೆ ಪ್ರವೇಶ ಪತ್ರವಿಲ್ಲದವರು ಪರೀಕ್ಷೆಗೆ ಕೂರಲು ಅರ್ಹರಲ್ಲ.

೨೧. ವಿದ್ಯಾರ್ಥಿಗಳಿಗೆ ನಿರ್ದಿಷ್ಟಪಡಿಸಿದ ಪರೀಕ್ಷಾ ಕೇಂದ್ರದಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುತ್ತದೆ.

೨೨. ಅಧ್ಯಯನ ಕೇಂದ್ರ ಒಮ್ಮೆ ಆಯ್ಕೆ ಮಾಡಿಕೊಂಡ ಮೇಲೆ ಬದಲಾಯಿಸಲು ಅವಕಾಶವಿರುವುದಿಲ್ಲ. ಅನಿವಾರ್ಯ ಸಂದರ್ಭಗಳಿದ್ದಲ್ಲಿ ಅಭ್ಯರ್ಥಿಯು ನಿಗದಿತ ಶುಲ್ಕ ಪಾವತಿಸಿ ಸಕಾರಣಗಳೊಂದಿಗೆ ಬದಲಾವಣೆಗಾಗಿ ನಿರ್ದೇಶಕರಿಗೆ ಅರ್ಜಿ ಸಲ್ಲಿಸಬಹುದು.

೨೩. ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಶಿಕ್ಷಣಕ್ರಮವನ್ನು ಪೂರ್ಣಗೊಳಿಸಲು ವಿಫಲವಾದ ವಿದ್ಯಾರ್ಥಿಗಳನ್ನು ದೂರಶಿಕ್ಷಣ ನಿರ್ದೇಶನಾಲಯದ ಶಿಕ್ಷಣಕ್ರಮದ ನೋಂದಣಿಯಿಂದ ಕೈ ಬಿಡಲಾಗುವುದು.

೨೪. ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೇಲೆ ಪದವಿ ಪ್ರಮಾಣ ಪತ್ರವನ್ನು ಪಡೆಯಲು ವಿದ್ಯಾರ್ಥಿಯು ನೇರವಾಗಿ ನಿರ್ದೇಶಕರು, ದೂರಶಿಕ್ಷಣ, ಇವರಿಗೆ ನಿರ್ದಿಷ್ಟಪಡಿಸಿದ ಅರ್ಜಿಯಲ್ಲಿ ಮನವಿ ಸಲ್ಲಿಸಬಹುದು.

೨೫. ವಿದ್ಯಾರ್ಥಿಗಳಿಗೆ ಅಂಕಪಟ್ಟಿಯನ್ನು ಅವರ ವಿಳಾಸಕ್ಕೆ ಅಂಚೆಯ ಮೂಲಕ ಕಳುಹಿಸಲಾಗುವುದು.

೨೬. ವರ್ಗಾವಣೆ ಪತ್ರವನ್ನು ವಿದ್ಯಾರ್ಥಿಗೆ ನೇರವಾಗಿ ನೀಡಲಾಗುವುದಿಲ್ಲ. ವಿದ್ಯಾರ್ಥಿಯು ಹೆಚ್ಚಿನ ವ್ಯಾಸಂಗಕ್ಕೆ ಪ್ರವೇಶ ಪಡೆಯುವ ಸಂಸ್ಥೆಗೆ ಕಳುಹಿಸಿಕೊಡಲಾಗುವುದು. ಆದಾಗ್ಯೂ ವಲಸೆ/ ವರ್ಗಾವಣೆ ಪತ್ರ ಪಡೆಯುವ ಮೊದಲು ಬೇಬಾಕಿ ಪತ್ರವನ್ನು ಕನ್ನಡ ವಿಶ್ವವಿದ್ಯಾಲಯ, ದೂರಶಿಕ್ಷಣ ನಿರ್ದೇಶನಾಲಯದಿಂದ ಪಡೆಯಬೇಕು.

೨೭. ಕನ್ನಡ ವಿಶ್ವವಿದ್ಯಾಲಯ, ದೂರಶಿಕ್ಷಣ ನಿರ್ದೇಶನಾಲಯದ ವಿದ್ಯಾರ್ಥಿಯಾದ ನಿಮಗೆ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ಈ ವಿವರಣಾ ಪುಸ್ತಕ ನೀಡುತ್ತದೆ. ಆದ್ದರಿಂದ ನೀವು ನಿಮ್ಮ ಅಧ್ಯಯನ ಮುಗಿಯುವವರೆಗೆ ಈ ವಿವರಣಾ ಪುಸ್ತಕವನ್ನು ಇಟ್ಟುಕೊಳ್ಳತಕ್ಕದ್ದು.

**೩.೧೩ ವಿಳಾಸ ಬದಲಾವಣೆ**

ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಯು ನೀಡಿದ್ದ ವಿಳಾಸವನ್ನು ಬದಲಾವಣೆ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ವಿದ್ಯಾರ್ಥಿಯೇ ಸ್ವತಃ ಪತ್ರ ಬರೆದು ಪ್ರವೇಶಾತಿ ವಿಭಾಗಕ್ಕೆ ತಿಳಿಸಬೇಕು. ಅಲ್ಲದೇ, ಹಾಗೆಯೇ ಬದಲಾವಣೆ ಆಗಬೇಕಾದ ವಿಳಾಸವು ಬದಲಾವಣೆಯಾಗಿ ಪ್ರವೇಶಾತಿ ದಾಖಲೆಯಲ್ಲಿ ಸೇರಿಸಲಾಗಿದೆಯೇ, ಇಲ್ಲವೇ, ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಖಚಿತ ಪಡಿಸಿಕೊಳ್ಳಬೇಕು.

**೩.೧೪ ಶಿಕ್ಷಣಕ್ರಮ/ಕಾರ್ಯಕ್ರಮ ಬದಲಾವಣೆ**

ಪ್ರವೇಶಾತಿ ಸಮಯದಲ್ಲಿ ಅಭ್ಯರ್ಥಿ ಆಯ್ಕೆ ಮಾಡಿಕೊಂಡ ಶಿಕ್ಷಣಕ್ರಮ/ ಕಾರ್ಯಕ್ರಮವನ್ನು ಒಂದು ಸಾರಿ ಮಾತ್ರ ಬದಲಾಯಿಸಿಕೊಳ್ಳುವುದಕ್ಕೆ ಅವಕಾಶವಿದೆ. ಪ್ರವೇಶ ಹೊಂದಿದ ಒಂದು ತಿಂಗಳ ಒಳಗಾಗಿ ನಿಗದಿತ ಶುಲ್ಕವನ್ನು ಪಾವತಿಸಿ ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಅಥವಾ ಸಂಬಂಧಪಟ್ಟ ದೂರಶಿಕ್ಷಣ ಅಧ್ಯಯನ ಕೇಂದ್ರದ ಸಂಯೋಜಕರಿಗೆ ಅರ್ಜಿಯನ್ನು ಸಲ್ಲಿಸಬಹುದು. ಪಡೆದುಕೊಂಡಿರುವ ಅಧ್ಯಯನ ಸಾಮಗ್ರಿಗಳನ್ನು ಹಿಂದಿರುಗಿಸಿ, ಬೇರೆ ಶಿಕ್ಷಣಕ್ರಮದ ಅಧ್ಯಯನ ಸಾಮಗ್ರಿಗಳನ್ನು ಪಡೆಯಲು ಅವಕಾಶವಿದೆ. ಪ್ರವೇಶಾತಿ ಸಂದರ್ಭದಲ್ಲಿ ಅಧ್ಯಯನ ಸಾಮಗ್ರಿಗಳನ್ನು ಪಡೆದುಕೊಂಡಾಗ ಅವು ಯಾವ ಸ್ವರೂಪದಲ್ಲಿದ್ದವೋ ಅದೇ ಸ್ವರೂಪದಲ್ಲಿ ಹಿಂದಿರುಗಿಸಲು ಅವಕಾಶವಿದೆ. ಬದಲಾವಣೆ ಮಾಡಿಕೊಂಡ ಶಿಕ್ಷಣಕ್ರಮ/ಕಾರ್ಯಕ್ರಮದಲ್ಲಿಯ ಶುಲ್ಕದಲ್ಲಿ ವ್ಯತ್ಯಾಸವಿದ್ದಲ್ಲಿ ಹೆಚ್ಚುವರಿ ಶುಲ್ಕವನ್ನು ಕಟ್ಟಬೇಕಾಗುತ್ತದೆ. ಹಿಂದಿರುಗಿಸಲು ಉದ್ದೇಶಿಸಿದ ಅಧ್ಯಯನ

ಸಾಮಗ್ರಿಗಳು ಬೇರೆ ವಿದ್ಯಾರ್ಥಿಗಳಿಗೆ ನೀಡಲು ಸೂಕ್ತವಲ್ಲವೆಂದು ಕಂಡುಬಂದಾಗ ಅವುಗಳನ್ನು ದೂರಶಿಕ್ಷಣ ನಿರ್ದೇಶನಾಲಯವು ಸ್ವೀಕರಿಸುವುದಿಲ್ಲ.

**೩.೧೫ ಹೆಸರು ಬದಲಾವಣೆ**

ವ್ಯಾಸಂಗದ ಅವಧಿಯಲ್ಲಿ ವಿದ್ಯಾರ್ಥಿಗಳು ಹೆಸರು ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿದಲ್ಲಿ ನಿಗದಿತ ಶುಲ್ಕ ಪಾವತಿಸಿ ಅಗತ್ಯ ದಾಖಲಾತಿಗಳೊಂದಿಗೆ ನಿಗದಿತ ಅರ್ಜಿ ಪಡೆದು ಭರ್ತಿ ಮಾಡಿ ದೂರಶಿಕ್ಷಣಕ್ಕೆ ಸಲ್ಲಿಸಬೇಕು.

ಅ.. ಹೆಸರು ಬದಲಾವಣೆ ಮಾಡಿಕೊಂಡಿರುವ ಬಗೆಗೆ, ಆರು ತಿಂಗಳೊಳಗೆ ಮಾಡಿಸಿರುವ ಅಫಿಡವಿಟ್‌ನ ಮೂಲಪ್ರತಿ.

ಆ. ಹೆಸರು ಬದಲಾವಣೆ ಮಾಡಿಕೊಂಡಿರುವುದಕ್ಕೆ ಬಂದಿರುವ ಪತ್ರಿಕಾ ಪ್ರಕಟಣೆ ಮೂಲಪ್ರತಿ.

ಇ. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯವು ನೀಡಿರುವ ಗುರುತಿನ ಪತ್ರದ ನಕಲು

ಈ. ಸ್ಟ್ಯಾಂಪ್ ಅಳತೆಯ ಎರಡು ಫೋಟೋ.

ಉ. ಮೂಲ ಹೆಸರು ಹೊಂದಿರುವ ಯಾವುದಾದರೂ ಅಂಕಪಟ್ಟಿಯ ಪ್ರತಿ.

ವಿಶ್ವವಿದ್ಯಾಲಯದಿಂದ ಆಧಿಸೂಚನೆ ಹೊರಡಿಸಿದ ನಂತರ ಹೊಸ ಹೆಸರು ಜಾರಿಗೆ ಬರುತ್ತದೆ.

**೩.೧೬ ಪತ್ರ ವ್ಯವಹಾರ**

ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಅವಧಿಯಲ್ಲಿ ಅಗತ್ಯವಾದ ಮಾಹಿತಿ ಮತ್ತು ಸ್ಪಷ್ಟೀಕರಣಗಳನ್ನು ಪಡೆಯಲು ದೂರವಾಣಿ ಕರೆ ಮಾಡುವುದು, ಇ-ಮೇಲ್ ಮಾಡುವುದು, ಪತ್ರ ಬರೆಯುವುದು ಸಾಮಾನ್ಯ. ಅಂತಹ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ತಮ್ಮ ಹೆಸರು, ವಿಳಾಸ, ನೋಂದಣಿ ಸಂಖ್ಯೆ, ಶಿಕ್ಷಣಕ್ರಮ ಮೊದಲಾದ ವಿವರಗಳನ್ನು ತಪ್ಪದೆ ತಿಳಿಸಬೇಕು. ಇದರಿಂದ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಲು ಸಾಧ್ಯವಾಗುತ್ತದೆ.

**೩.೧೭ ಶುಲ್ಕ ಪಾವತಿಸಿದ ಡಿಡಿ ಮತ್ತು ಅರ್ಜಿ ಸಲ್ಲಿಸದಿರುವ ಬಗೆಗೆ**

ಅಂತಿಮ ದಿನಾಂಕದವರೆವಿಗೂ ಪಾವತಿಸಲಾದ ಶುಲ್ಕ ಮತ್ತು ಸಂಬಂಧಪಟ್ಟ ಅರ್ಜಿಯನ್ನು ಕೆಲವು ವಿದ್ಯಾರ್ಥಿಗಳು ಸಲ್ಲಿಸದೆಯೇ ಇರುವುದು ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ಗಮನಕ್ಕೆ ಬಂದಿರುತ್ತದೆ. ಗಡವು ಮುಗಿದ ನಂತರ ಈ ತರಹದ ಅರ್ಜಿಗಳನ್ನು ಒಪ್ಪಿಕೊಳ್ಳುವ/ತಿರಸ್ಕರಿಸುವ ಹಕ್ಕು ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯಕ್ಕಿರುತ್ತದೆ. ಈ ವಿಷಯದಲ್ಲಿ ಅಹವಾಲುಗಳನ್ನು ಸ್ವೀಕರಿಸಲಾಗುವುದಿಲ್ಲ.

**೩.೧೮ ಪತ್ರಕ್ಕೆ ಪ್ರತಿಕ್ರಿಯಿಸುವ ಬಗೆಗೆ**

ಪ್ರವೇಶಾತಿ, ನಿಗದಿತ ಶುಲ್ಕ ಪಾವತಿಸದಿರುವಿಕೆ, ಅಧ್ಯಯನ ಸಾಮಗ್ರಿ, ಲಿಖಿತ ನಿಬಂಧ,

ಪರೀಕ್ಷೆ, ಪರೀಕ್ಷೆ ಫಲಿತಾಂಶ ಮೊದಲಾದ ಯಾವುದೇ ವಿಷಯಗಳ ಬಗ್ಗೆ ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣವು ಅಥವಾ ಸಂಬಂಧಪಟ್ಟ ಅಧ್ಯಯನ ಕೇಂದ್ರ ಕಳುಹಿಸುವ ಪತ್ರಕ್ಕೆ ಸೂಚಿಸಿದ ದಿನಾಂಕದೊಳಗೆ ವಿದ್ಯಾರ್ಥಿಗಳು ಪ್ರತಿಕ್ರಿಯಿಸುವುದು ಕಡ್ಡಾಯವಾಗಿರುತ್ತದೆ. ನಿಗದಿಪಡಿಸಿದ ಅವಧಿಯೊಳಗೆ ಪ್ರತಿಕ್ರಿಯಿಸದಿದ್ದಲ್ಲಿ, ಪ್ರವೇಶಾತಿ, ಸಂಪರ್ಕ ಕಾರ್ಯಕ್ರಮ, ಪರೀಕ್ಷೆ, ಪರೀಕ್ಷಾ ಫಲಿತಾಂಶ ಘೋಷಣೆ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಶೀಘ್ರವಾಗಿ ಪರಿಹಾರವನ್ನು ಕಂಡುಕೊಳ್ಳಲಾಗುವುದಿಲ್ಲ.

### ೩.೧೯ ವಿದ್ಯಾರ್ಥಿಗಳ ಕುಂದುಕೊರತೆ ನಿವಾರಣೆ ಕುರಿತು

ಪ್ರವೇಶಾತಿ, ಸಂಪರ್ಕ ಕಾರ್ಯಕ್ರಮ, ಅಧ್ಯಯನ ಸಾಮಗ್ರಿ, ಲಿಖಿತ ನಿಬಂಧ, ಪರೀಕ್ಷೆ, ಪರೀಕ್ಷೆ ಫಲಿತಾಂಶ, ಅಂಕಪಟ್ಟಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಈ ಕೆಳಗಿನ ದೂರವಾಣಿ

೦೮೩೯೪ ೨೪೮೧೮೧, ೨೪೮೧೦೧೮

ಫ್ಯಾಕ್ಸ್ ನಂ. ೦೮೩೯೪ ೨೪೮೧೮೧

ಇ–ಮೇಲ್:dde.kuh@gmail.com

ವೆಬ್‌ಸೈಟ್: www.kannadauniversity.org

ಇವುಗಳನ್ನು ಸಂಪರ್ಕಿಸಬಹುದು.

* * * * *

# ೪. ಅಧ್ಯಯನ ಕೇಂದ್ರಗಳು

ದೂರಶಿಕ್ಷಣ ಕಾರ್ಯಕ್ರಮಗಳ ಅಡಿಯಲ್ಲಿಯ ಶಿಕ್ಷಣಕ್ರಮಗಳ ಎಲ್ಲ ಪ್ರಮುಖ ವಿಚಾರಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಸಂಪರ್ಕ ತಾಣಗಳಾಗಿರಲು ಈ ಕೆಳಗಿನ ಅಧ್ಯಯನ ಕೇಂದ್ರಗಳಿಗೆ ಮಾನ್ಯತೆಯನ್ನು ನೀಡಲಾಗಿದೆ. ವಾರಾಂತ್ಯ ಸಮಾಲೋಚನ ಕಾರ್ಯಕ್ರಮಗಳ ಸೌಲಭ್ಯ, ಗ್ರಂಥಾಲಯ ಸೌಲಭ್ಯ, ಮಾಹಿತಿ ಸಂಗ್ರಹಣೆ, ಮಾರ್ಗದರ್ಶನ ಇತ್ಯಾದಿ ಸೌಲಭ್ಯ,ಗಳನ್ನು ಈ ಕೇಂದ್ರಗಳಲ್ಲಿ ಪಡೆಯಬಹುದು. ಎಲ್ಲ ವಿದ್ಯಾರ್ಥಿಗಳ ಗಮನಕ್ಕಾಗಿ ಪ್ರತಿಯೊಂದು ಪ್ರಕಟಣೆಯನ್ನು ಸಂಯೋಜಕರು ಆಯಾ ಅಧ್ಯಯನ ಕೇಂದ್ರಗಳ ಪ್ರಕಟಣಾ ಫಲಕದಲ್ಲಿ ಪ್ರಕಟಪಡಿಸುತ್ತಾರೆ. ವಿದ್ಯಾರ್ಥಿಗಳು ಯಾವುದೇ ವಿಷಯದ ಬಗ್ಗೆ ಮಾಹಿತಿ ಬೇಕಾದಲ್ಲಿ ಈ ಅಧ್ಯಯನ ಕೇಂದ್ರಗಳನ್ನು ಸಂಪರ್ಕಿಸಬಹುದು. ಮತ್ತು ಪ್ರವೇಶಾತಿ ಹಾಗೂ ಪರೀಕ್ಷೆ ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ಅರ್ಜಿಗಳನ್ನು ಸಹ ಪಡೆದು ಸಲ್ಲಿಸಬಹುದು. ಕನ್ನಡ ವಿಶ್ವವಿದ್ಯಾಲಯ ದೂರಶಿಕ್ಷಣ ನಿರ್ದೇಶನಾಲಯದ ಮಾನ್ಯತೆಗೆ ಒಳಪಡುವ ಅಧ್ಯಯನ ಕೇಂದ್ರಗಳ ಸಂಕೇತ ಸಂಖ್ಯೆ, ಸಂಪರ್ಕ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳು ಹೀಗಿವೆ.

| ಕ್ರ.ಸಂ. | ಅಧ್ಯಯನ ಕೇಂದ್ರದ ವಿಳಾಸ | ಸಂಕೇತ ಸಂಖ್ಯೆ | ಸಂಪರ್ಕ ಮಾಧ್ಯಮ |
|---|---|---|---|
| | **೦೧. ಬಳ್ಳಾರಿ ಜಿಲ್ಲೆ (೦೩)** | | |
| ೦೧ | ದೂರಶಿಕ್ಷಣ ನಿರ್ದೇಶನಾಲಯ<br>ಕನ್ನಡ ವಿಶ್ವವಿದ್ಯಾಲಯ<br>ಹಂಪಿ ೫೮೩ ೨೭೬ | ೦೩೧ | ೦೮೩೯೪ ೨೪೧೦೧೮<br>೦೮೩೯೪ ೨೪೧೯೮೧ |
| ೦೨ | ವೀರಶೈವ ವಿದ್ಯಾವರ್ದಕ ಸಂಘದ<br>ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಕಾಲೇಜು<br>ಹೂವಿನ ಹಡಗಲಿ ೫೮೩ ೨೧೯ | ೦೩೨ | ೯೪೪೮೭ ೧೭೧೭೪<br>೦೮೩೯೯ ೨೪೦೨೫೧<br>೮೧೦೫೨ ೬೫೮೧೩ |
| | **೦೨. ಬೆಳಗಾವಿ ಜಿಲ್ಲೆ (೦೨)** | | |
| ೦೩ | ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ<br>ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ<br>ಹಾರೂಗೇರಿ-೫೯೧ ೨೨೦ | ೦೨೨ | ೦೮೩೩೧ ೨೫೭೮೫೩<br>೯೪೪೮೧ ೬೩೧೧೯<br>೯೪೪೮೮ ೭೬೨೨೬<br>೯೯೧೬೨ ೭೨೫೩೯ |
| ೦೪ | ಶ್ರೀ ಮುರುಘರಾಜೇಂದ್ರ ಶಿಕ್ಷಣ<br>ಸಂಸ್ಥೆಯ ಶ್ರೀ ಮುರುಘರಾಜೇಂದ್ರ<br>ಇಂಡಸ್ಟ್ರಿಯಲ್ ತರಬೇತಿ ಕೇಂದ್ರ<br>ಅಥಣಿ  ೫೯೧ ೩೦೪ | ೦೨೩ | ೯೪೪೮೩ ೦೪೨೮೭<br>೦೮೨೮೯ ೨೮೫೬೨೭<br>೯೭೪೨೦ ೭೯೪೬೨<br>೦೮೨೮೯ ೨೫೧೯೦೯<br>೯೮೮೦೫ ೬೦೭೯೬ |

### ೦೩. ಬೆಂಗಳೂರು ಜಿಲ್ಲೆ (೦೪)

| | | | |
|---|---|---|---|
| ೦೫ | ಮೈಸೂರು ಶಿಕ್ಷಣ ಸಂಸ್ಥೆಯ | ೦೪೨ | ೦೮೦ ೨೩೩೪೭೨೬೬ |
| | ರಂಗಶಾಲೆ ಬ್ರಾಹ್ಮೀ ಕಿಶೋರ ಕೇಂದ್ರ | | ೯೮೮೦೮ ೫೭೩೨೧ |
| | ೧೦ನೇ ಮುಖ್ಯರಸ್ತೆ, ೧೫ನೇ ಅಡ್ಡರಸ್ತೆ | | |
| | ಮಲ್ಲೇಶ್ವರಂ, ಬೆಂಗಳೂರು ೫೬೦ ೦೦೩ | | |

### ೦೪. ಬಿಜಾಪುರ ಜಿಲ್ಲೆ (೦೭)

| | | | |
|---|---|---|---|
| ೦೬ | ಶ್ರೀ ಮುರುಘರಾಜೇಂದ್ರ ಶಿಕ್ಷಣ | ೦೭೧ | ೯೯೦೧೨ ೩೩೪೮೭ |
| | ಸಂಸ್ಥೆಯಶ್ರೀ ಸಂಗನಬಸವೇಶ್ವರ ಕಲಾ | | ೦೮೪೨೬ ೨೦೦೦೫೮ |
| | ಮಹಾವಿದ್ಯಾಲಯ ಕೂಡಗಿ ೫೮೬ ೧೨೧ | | |
| | ಬಸವನ ಬಾಗೇವಾಡಿ ತಾಲೂಕು | | |
| ೦೭ | ಕಾಯಕಯೋಗಿ ಗ್ರಾಮೀಣ ಶಿಕ್ಷಣ | ೦೭೨ | ೯೪೪೮೧ ೧೮೫೯೩ |
| | ಸೇವಾದತ್ತಿ ವಿಶ್ವಸ್ಥ ಸಂಸ್ಥೆಯ | | ೯೮೪೫೧ ೦೦೯೧೫ |
| | ಜ್ಞಾನಗಂಗೋತ್ರಿ ದೂರಶಿಕ್ಷಣ ಅಧ್ಯಯನ ಕೇಂದ್ರ | | ೦೮೩೫೨ ೨೨೦೩೩೦ |
| | ಹೇಮರೆಡ್ಡಿ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜು | | ೦೮೩೫೨ ೨೪೩೯೯೮ |
| | ತಿಡಗುಂದಿ ೫೮೬ ೧೧೯ | | ೦೮೩೫೨ ೨೩೫೦೭೦ |
| ೦೮ | ಗ್ರಾಮಾಂತರ ವಿದ್ಯಾವರ್ಧಕ ಸಂಘದ | ೦೭೩ | ೦೮೩೫೫ ೨೮೩೧೪೮ |
| | ಶ್ರೀ ಶಾಂತವೀರ ಕಲಾ ಮಹಾವಿದ್ಯಾಲಯ | | ೦೮೩೫೫ ೨೮೩೬೭೭ |
| | ಬಬಲೇಶ್ವರ ೫೮೬ ೧೧೩ ಬಿಜಾಪುರ ಜಿಲ್ಲೆ | | ೯೮೮೦೨ ೨೩೮೪೩ |

### ೦೫. ಗದಗ ಜಿಲ್ಲೆ (೧೫)

| | | | |
|---|---|---|---|
| ೦೯ | ಕನಕದಾಸ ಶಿಕ್ಷಣ ಸಮಿತಿಯ | ೧೫೧ | ೦೮೩೭೨ ೨೩೬೨೯೦ |
| | ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, | | ೯೪೪೮೩ ೩೭೯೭೯ |
| | ಮಸಾರಿ, ಗದಗ ೫೮೨ ೧೦೧ | | ೯೪೪೯೯ ೫೮೭೭೫ |

### ೦೬. ಗುಲ್ಬರ್ಗ ಜಿಲ್ಲೆ (೧೬)

| | | | |
|---|---|---|---|
| ೧೦ | ನಾಗಾಂಬಿಕಾ ಎಜುಕೇಷನಲ್ ಅಂಡ್ | ೧೬೩ | ೯೪೪೮೬ ೫೦೨೩೩ |
| | ಚಾರಿಟಬಲ್ ಟ್ರಸ್ಟ್, ಹೌಸ್ ನಂ | | |
| | ೧೦-೫-೧೫/೫, ವಿಠಲ ನಗರ | | |
| | ಗುಲ್ಬರ್ಗ ೫೮೫ ೧೦೪ | | |
| ೧೧ | ರೇಶ್ಮಿ ಎಜುಕೇಶನಲ್ ಅಂಡ್ ಚಾರಿಟೇಬಲ್ | ೧೬೪ | ೯೪೪೯೨ ೬೭೫೨೪ |
| | ಟ್ರಸ್ಟ್ ರೇಶ್ಮಿ ವಿದ್ಯಾಭವನ, ಸರಸ್ವತಿಪುರ | | ೦೮೪೭೨ ೨೬೫೨೭೯ |
| | ಕುಸನೂರು ರಸ್ತೆಗುಲ್ಬರ್ಗಾ ವಿಶ್ವವಿದ್ಯಾಲಯದ | | ೦೮೪೭೨ ೨೬೫೫೦೨ |
| | ಹಿಂದುಗಡೆ ಗುಲ್ಬರ್ಗಾ ೫೮೫ ೧೦೬ | | ೯೪೮೧೨ ೫೮೭೩೧ |

### ೦೭. ರಾಯಚೂರು ಜಿಲ್ಲೆ (೨೪)

| | | | |
|---|---|---|---|
| ೧೨ | ವಿದ್ಯಾಶ್ರೀ ಶಿಕ್ಷಣ ಸಂಸ್ಥೆ<br>ಹೊಸ ಬಸ್ ನಿಲ್ದಾಣ ಹತ್ತಿರ<br>ದೇವದುರ್ಗ– ೫೮೪ ೧೧೧ | ೨೪೧ | ೯೯೭೨೯ ೯೯೨೪೬<br>೯೪೪೮೮ ೧೨೫೦೩<br>೯೪೪೮೬ ೯೫೮೨೧<br>೯೪೪೮೮ ೦೬೭೩೩ |

### ೦೮. ಉತ್ತರ ಕನ್ನಡ ಜಿಲ್ಲೆ (೨೯)

| | | | |
|---|---|---|---|
| ೧೩ | ಕೇನರಾ ವೆಲ್‌ಫೇರ್ ಟ್ರಸ್ಟನ<br>ಗೋಖಲೆ ಸೆಂಟನರಿ ಕಾಲೇಜು<br>ಅಂಕೋಲಾ ೫೮೧ ೩೧೪ | ೨೯೧ | ೦೮೩೮೮ ೨೩೦೨೩೩<br>೯೩೭೯೪ ೩೪೫೦೦<br>೯೪೮೧೦ ೫೩೭೭೧ |

### ೦೯. ಯಾದಗಿರಿ ಜಿಲ್ಲೆ (೩೦)

| | | | |
|---|---|---|---|
| ೧೪ | ಯಶಸ್ವಿನಿ ಗ್ರಾಮೀಣ ಅಭಿವೃದ್ಧಿ ಮತ್ತು<br>ಶಿಕ್ಷಣ ಸಂಸ್ಥೆಯ ಯಶಸ್ವಿನಿ ಪದವಿ<br>ಕಾಲೇಜು, ಶಹಾಪುರ ೫೮೫ ೨೨೩ | ೩೦೧ | ೦೮೪೭೯೨೪೩೪೦೦<br>೦೮೪೭೩ ೨೫೦೯೨೭<br>೯೮೮೦೬ ೨೩೦೮೨<br>೮೦೯೫೧ ೮೧೩೯೧ |

### ೧೦. ಕೊಪ್ಪಳ ಜಿಲ್ಲೆ

| | | | |
|---|---|---|---|
| ೧೫ | ಕರ್ನಾಟಕ ವಿದ್ಯಾವರ್ಧಕ ಟ್ರಸ್ಟ್ (ರಿ)<br>ಕೇದಾರಲಿಂಗ ಬಿ.ಸಿ.ಎ. ಪದವಿ ಮಹಾವಿದ್ಯಾಲಯ<br>ವಿ.ಕೆ. ಶೆಟ್ಟರ್ ಬಿಲ್ಡಿಂಗ್, ಎಸ್.ಜಿ ಗಂಜ್<br>(೧ನೇ ಗೇಟ್) ಕೊಪ್ಪಳ–೫೮೩೨೩೧ | | ೭೪೧೧೮ ೫೭೩೭೫<br>೯೪೮೦೧ ೫೨೯೪೪<br>೦೮೫೩೯–೨೨೦೩೫೩<br>೨೨೦೫೫೫<br>೯೯೮೦೦ ೧೨೪೬೯ |

### ೧೧. ದಾವಣಗೆರೆ ಜಿಲ್ಲೆ (೧೩)

| | | | |
|---|---|---|---|
| ೧೬ | ಮಾಲತೇಶ ಶಿಕ್ಷಣ ಸಂಸ್ಥೆ (ರಿ)<br>ಎಂ.ಇ.ಎಸ್. ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್<br>ಆಂಜನೇಯ ಬಡಾವಣೆ, ಎಂ.ಸಿ.ಸಿ. 'ಬಿ' ಬ್ಲಾಕ್<br>ದಾವಣಗೆರೆ – ೫೭೭ ೦೦೪ | ೧೩೧ | ೦೮೦ ೨೩೩೯೪೩೨೬<br>೦೮೧೯೨ ೨೨೧೨೮೬<br>೯೮೪೫೧ ೪೦೯೪೮<br>೯೮೮೦೪ ೩೬೪೧೪<br>೯೬೨೦೩ ೮೪೩೬೫ |
| ೧೭ | ಶ್ರೀ ತೆಗ್ಗಿನಮಠ ಆರ್ಟ್ಸ್ ಅಂಡ್<br>ಎಜ್ಯುಕೇಶನ್‌ಸೊಸೈಟಿ<br>ಹರಪನಹಳ್ಳಿ – ೫೮೩ ೧೩೧ ದಾವಣಗೆರೆ ಜಿಲ್ಲೆ | ೧೩೨ | ೦೮೩೯೮ ೨೮೦೨೫೭<br>೨೮೧೩೪೫<br>೯೪೪೮೦ ೮೦೬೨೬<br>೯೮೮೦೮ ೦೪೯೭೯ |

* * * * *

# ೫ ವಿದ್ಯಾರ್ಥಿ ವೇತನಗಳು

೧. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದಲ್ಲಿ ವ್ಯಾಸಂಗ ಮಾಡುವ **ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ**ಗಳ ನಿರುದ್ಯೋಗಿ ವಿದ್ಯಾರ್ಥಿಗಳು ಅವರ ಕುಟುಂಬದ ವಾರ್ಷಿಕ ಆದಾಯ ರೂ. ೨.೦೦ ಲಕ್ಷದ ಮಿತಿಯೊಳಗೆ ಇದ್ದಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಆಯಾ ಕೋರ್ಸಿಗೆ ನಿಗದಿಪಡಿಸಿದ ಶುಲ್ಕವನ್ನು ನೇರವಾಗಿ ಸರ್ಕಾರವೇ (ಸರಕಾರ ಪತ್ರ ಸಂಖ್ಯೆ:ಸಕನಿ:ಇಡಿ–೩:ಸಿಆರ್–ಸುತ್ತೋಲೆ:೨೦೧೦–೧೧ ದಿ.೦೨.೦೭.೨೦೧೩) ಪಾವತಿಸುತ್ತದೆ. ವಿದ್ಯಾರ್ಥಿ ಕೇವಲ ಅರ್ಜಿ ಶುಲ್ಕವನ್ನು ಪಾವತಿಸಿ ಅರ್ಜಿಯೊಂದಿಗೆ ಕೆಳಗೆ ಸೂಚಿಸಿದ ದಾಖಲಾತಿಗಳನ್ನು ದ್ವಿಪ್ರತಿಯಲ್ಲಿ ಸಲ್ಲಿಸತಕ್ಕದ್ದು.

೨. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದಲ್ಲಿ ವ್ಯಾಸಂಗ ಮಾಡುವ (ಸರ್ಕಾರ ನಿಗದಿಗೊಳಿಸಿದ ವಾರ್ಷಿಕ ವರಮಾನದ ಒಳಗಿದ್ದ ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳ) ನಿರುದ್ಯೋಗಿ ವಿದ್ಯಾರ್ಥಿಗಳಿಗೆ ಅಧ್ಯಯನ ಶುಲ್ಕ ಮರುಭರಿಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಅಂತಹ ವಿದ್ಯಾರ್ಥಿಗಳು ದೂರಶಿಕ್ಷಣಕ್ಕೆ ಶುಲ್ಕ ಪಾವತಿಸಿದ ರಸೀದಿಯನ್ನು (ವಿದ್ಯಾರ್ಥಿಯ ಪ್ರತಿಯನ್ನು) ಪರೀಕ್ಷಾ ಶುಲ್ಕ ಪಾವತಿಸುವವರೆಗೆ ತಮ್ಮಲ್ಲಿ ಇಟ್ಟುಕೊಳ್ಳತಕ್ಕದ್ದು. ಪರೀಕ್ಷಾ ಶುಲ್ಕ ಪಾವತಿಸಿದ ತಕ್ಷಣ ಶುಲ್ಕ ಪಾವತಿಸಿದ ಎಲ್ಲ ರಸೀದಿಗಳನ್ನು ಸಂಬಂಧಪಟ್ಟ ಘಟಕಗಳಿಂದ ನಿಗದಿತ ಅರ್ಜಿ ಪಡೆದು ತುಂಬಿ ಅದರೊಡನೆ ಈ ಕೆಳಗೆ ಹೇಳಿರುವ ದಾಖಲೆಗಳನ್ನು ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಕನ್ನಡ ವಿಶ್ವವಿದ್ಯಾಲಯದ **'ಹಿಂದುಳಿದ ವರ್ಗಗಳ ಘಟಕ'**ಕ್ಕೆ ಮಂಜೂರಾತಿಗಾಗಿ ಕಳುಹಿಸತಕ್ಕದ್ದು.

**ವಿದ್ಯಾರ್ಥಿಗಳು ಅರ್ಜಿಯ ಜೊತೆ ಲಗತ್ತಿಸಬೇಕಾದ ದಾಖಲಾತಿಗಳು**

೧. ವಿದ್ಯಾರ್ಥಿಯು ಅಧ್ಯಯನ ಕೇಂದ್ರಕ್ಕೆ ಸೇರ್ಪಡೆಯಾದಾಗ ಪಾವತಿಸಿದ ಎಲ್ಲ ಶುಲ್ಕದ ಮೂಲ (original) **ರಸೀದಿಗಳನ್ನು** ಲಗತ್ತಿಸಬೇಕು.

೨. ಗುರುತಿನ ಚೀಟಿಯ ನೆರಳಚ್ಚು ಪ್ರತಿಯನ್ನು ಲಗತ್ತಿಸಬೇಕು.

೩. ಸಂಬಂಧಿಸಿದ ತಾಲೂಕು ತಹಶೀಲ್ದಾರ್‌ರವರಿಂದ ನಿರುದ್ಯೋಗಿ ಎಂದು ದೃಢೀಕರಿಸಿದ ಮೂಲ ದಾಖಲೆಯ ಪ್ರತಿಯನ್ನು ಲಗತ್ತಿಸಬೇಕು ಅಥವಾ ನೋಟರಿಯಿಂದ ಅಫಿಡೆವಿಟ್‌ನಲ್ಲಿ ನಿರುದ್ಯೋಗಿ ಎಂದು ದೃಢೀಕರಿಸಿದ ಮೂಲ ಪ್ರತಿಯನ್ನು ಲಗತ್ತಿಸಬೇಕು.

೪. ಕುಟುಂಬದ ವಾರ್ಷಿಕ ವರಮಾನದ ಪ್ರಮಾಣಪತ್ರವನ್ನು ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಪಡೆದು ಅದರ ನೆರಳಚ್ಚು ಪ್ರತಿಯನ್ನು ಲಗತ್ತಿಸಬೇಕು.

೫. ಜಾತಿ ಪ್ರಮಾಣಪತ್ರವನ್ನು ತಹಶೀಲ್ದಾರ್‌ರವರಿಂದ ಪಡೆದು ಅದರ ನೆರಳಚ್ಚು ಪ್ರತಿಯನ್ನು ಲಗತ್ತಿಸಬೇಕು.

೬. ಹಿಂದಿನ ವರ್ಷ ವಿದ್ಯಾಭ್ಯಾಸ ಮಾಡಿದ ಅಂಕಪಟ್ಟಿಯ ನೆರಳಚ್ಚು ಪ್ರತಿಯನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಲಗತ್ತಿಸಬೇಕು.

೭. ರೇಷನ್ ಕಾರ್ಡ್, ಆಧಾರ್ ಕಾರ್ಡ್ ಮತ್ತು ಬ್ಯಾಂಕಿನ ಪಾಸ್ ಬುಕ್ ನೆರಳಚ್ಚು ಪ್ರತಿಗಳನ್ನು ಲಗತ್ತಿಸಬೇಕು.

೮. ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದವಿರದಂತೆ ಎಲ್ಲಾ ಕಾಲಂಗಳನ್ನು ಸರಿಯಾಗಿ ಭರ್ತಿ ಮಾಡಬೇಕು.

೯. ವಿದ್ಯಾರ್ಥಿ ಯಾವ ವರ್ಷ ನೋಂದಣಿಯಾಗಿರುತ್ತಾರೋ ಆ ವರ್ಷವೇ ಶುಲ್ಕ ಮರುಪಾವತಿಗೆ ಅರ್ಜಿ ಸಲ್ಲಿಸಬೇಕು ಹಾಗೂ ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

೧೦. ವಿದ್ಯಾರ್ಥಿ ಸಲ್ಲಿಸುವ ಅರ್ಜಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೇರಿದ್ದಾಗಿರುತ್ತದೆ. ಇದಕ್ಕೆ ವಿಶ್ವವಿದ್ಯಾಲಯ ಅಥವಾ ದೂರಶಿಕ್ಷಣ ನಿರ್ದೇಶನಾಲಯ ಜವಾಬ್ದಾರ ವಾಗಿರುವುದಿಲ್ಲ.

* * * * *

# ನಿರಾಕ್ಷೇಪಣ ಪತ್ರ

*ಮಾನ್ಯರೆ,*

ಶ್ರೀ/ಶ್ರೀಮತಿ ________________________________________

________________________________ ಇವರು ನಮ್ಮ ಸಂಸ್ಥೆಯಲ್ಲಿ

________________________________________________

ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣದ ಮೂಲಕ ________________________________

________________________________ ಶಿಕ್ಷಣಕ್ರಮಕ್ಕೆ ಸೇರಿಕೊಳ್ಳಲು ನಮ್ಮ ಸಂಸ್ಥೆಯ ಆಕ್ಷೇಪಣೆ ಇರುವುದಿಲ್ಲ.

ಸ್ಥಳ :

ದಿನಾಂಕ :

***ಸಂಸ್ಥೆಯ ಮುಖ್ಯಸ್ಥರ ಸಹಿ***
***ಮತ್ತು ಮೊಹರು***

ಕಚೇರಿ ಸಂಪರ್ಕ ವಿಳಾಸ

*ನಿರ್ದೇಶಕರು*

**ದೂರಶಿಕ್ಷಣ ನಿರ್ದೇಶನಾಲಯ**

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದೂರವಾಣಿ: ೦೮೩೯೪ – ೨೪೧೯೮೧, ೨೪೧೦೦೧೮

Fax: ೦೮೩೯೪–೨೪೧೯೮೧

Email: dde.kuh@gmail.com

www.kannadauniversity.org